ಸಂಪುಟ: 05 ಸಂಚಿಕೆ: 289 ಪುಟಗಳು: 08 ಶುಕ್ರವಾರ 02 ಜನವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ನಿಮ್ಮ ಪ್ರಯತ್ನವಿಲ್ಲದೆ ನೀವು ಯಶಸ್ವಿಗಳಾಗಲು ಸಾಧ್ಯವಿಲ್ಲ, ನಿಮ್ಮ ಸಂಪೂರ್ಣ ಪ್ರಯತ್ನ ನಿಮ್ಮ ಕೆಲಸದಲ್ಲಿದ್ದರೆ ನೀವು ವಿಫಲರಾಗಲು ಸಾಧ್ಯವಿಲ್ಲ

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಕನ್ನಡಿಗರ ತೆರಿಗೆ ಹಣದಲ್ಲಿ, ಹೈಕಮಾಂಡ್ ಪವರ್ ಗೇಮ್

• ಉದಯವಾಹಿನಿ, ಬೆಂಗಳೂರು

ಕೋಗಿಲು ಬಡಾವಣೆಯ ಅಕ್ರಮ ಭೂ ಒತ್ತುವರಿಯನ್ನು ಸಕ್ರಮ ಮಾಡಲು ಹೊರಟಿರುವ ಸಿದ್ದರಾಮಯ್ಯನವರ ಸರ್ಕಾರದ ನಿರ್ಧಾರಕ್ಕೆ ಅಪಸ್ವರಗಳು ಜೋರಾಗುತ್ತಿವೆ. ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ಇದರ ವಿರುದ್ದ ದೊಡ್ಡ ಅಭಿಯಾನವನ್ನು ನಡೆಸಲು ಪ್ಲ್ಯಾನ್ ರೂಪಿಸಿಕೊಂಡಿದೆ.

ಕಾಂಗ್ರೆಸ್ ಹೈಕಮಾಂಡ್ ಅನ್ನು ಮೆಚ್ಚಿಸಲು ಸಿಎಂ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮುಂದಾಗಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಈ ವರ್ಷ ನಡೆಯಲಿರುವ ಕೇರಳದ ವಿಧಾನಸಭಾ ಚುನಾವಣೆಗಾಗಿ, ಕರ್ನಾಟಕದ ತೆರಿಗೆದಾರರ ಹಣವನ್ನು ದುರ್ಬಳಕೆ ಮಾಡಲಾಗುತ್ತಿದೆ ಎನ್ನುವ ಆರೋಪ ಎದುರಾಗಿದೆ.

ಹೈಕಮಾಂಡ್ ಸೂಚನೆಯ ಮೇರೆಗೆ ಈ ಹಿಂದೆ ಕೂಡಾ ಕೇರಳದ ವಿದ್ಯಮಾನಕ್ಕೆ ಸಿದ್ದರಾಮಯ್ಯ ಸರ್ಕಾರ ಸ್ಪಂದಿಸಿದ ಉದಾಹರಣೆಗಳಿವೆ. ಹಿಂದಿನ ಎರಡು ವಿದ್ಯಮಾನಗಳು ಮತ್ತು ಈಗಿನ ಕೋಗಿಲು ಅಕ್ರಮ ಒತ್ತುವರಿಯನ್ನು ಮಾನವೀಯತೆಯ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.

**ಕೋಗಿಲು ಒತ್ತುವರಿ ತೆರವು ಪ್ರಕರಣ;** ಹೈಕಮಾಂಡ್ ಮೆಚ್ಚಿಸಲು, ಮುಖ್ಯಮಂತ್ರಿ ಕುರ್ಚಿ ಪಡೆಯುವವರ, ಉಳಿಸಿಕೊಳ್ಳುವವರ ನಡುವಿನ ಜಗ್ಗಾಟದಲ್ಲಿ, ನಿಯಮಗಳೂ ಲೆಕ್ಕಕ್ಕಿಲ್ಲ, ರಾಜ್ಯದ ಹಿತವೂ ಬಲಿ. ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಈ 'ಕೇರಳ ಹಿತಾಸಕ್ತಿ ರಕ್ಷಣೆ ಗ್ಯಾರಂಟಿ' ವಿರುದ್ಧ ಪಕ್ಷ ಬೀದಿಗಿಳಿದು ಹೋರಾಡಲಿದೆ ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ.

ಸ್ವಂತ ಸೂರಿಲ್ಲದೆ, ನಿವೇಶನವಿಲ್ಲದೆ ಅರ್ಜಿ ಹಾಕಿ ಕಾಯುತ್ತಿರುವ ನಮ್ಮ ರಾಜ್ಯದ ಲಕ್ಷಾಂತರ ಬಡವರು, ಪರಿಶಿಷ್ಟ ಮತ್ತು ಹಿಂದುಳಿದ ಸಮುದಾಯಗಳ ಬಡ ಕುಟುಂಬಗಳಿಗೆ ನೆರವಾಗಬೇಕಾಗಿದ್ದ ಕಾಂಗ್ರೆಸ್ ಸರ್ಕಾರ ಪರಾರಾಜ್ಯದ ಮುಸ್ಲಿಮರ ಓಲೈಕೆಗೆ ಮಣೆ ಹಾಕಿದೆ. ಲಜ್ಜೆಗೇಡಿ @INCKarnataka ಪಕ್ಷವನ್ನ ಸ್ವಾಭಿಮಾನಿ ಕನ್ನಡಿಗರು ಎಂದಿಗೂ ಕ್ಷಮಿಸುವುದಿಲ್ಲ ಎಂದು ವಿಪಕ್ಷದ ನಾಯಕ ಆರ್.ಅಶೋಕ ಟ್ವೀಟ್ (ಎಕ್ಸ್) ಮಾಡಿದ್ದಾರೆ.

**ವಯನಾಡ್ ಪ್ರಾಕೃತಿಕ ವಿಕೋಪಕ್ಕೆ ಸ್ಪಂದಿಸಿದ್ದ ಸಿದ್ದರಾಮಯ್ಯ ಸರ್ಕಾರ:** ಕೇರಳದ ವಯನಾಡ್ ನಲ್ಲಿನ ಪ್ರಾಕೃತಿಕ ವಿಕೋಪದಲ್ಲಿ ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದರು. ಆಗಸ್ಟ್ 3, 2024ರಲ್ಲಿ ಕರ್ನಾಟಕದ ಸಿಎಂ ಸಿದ್ದರಾಮಯ್ಯ, ಕೇರಳದ ಸಮಸ್ಯೆಗೆ ಕರ್ನಾಟಕ ಸ್ಪಂದಿಸಲಿದೆ. ನೂರು ಮನೆಯನ್ನು ಕಟ್ಟಿಕೊಡುವ ಬಗ್ಗೆ ಅಧಿಕೃತ ಘೋಷಣೆಯನ್ನು ಮಾಡಿದ್ದರು. ಕರ್ನಾಟಕವು ಈ ಸಮಯದಲ್ಲಿ ಕೇರಳದ ಬೆನ್ನಿಗೆ ನಿಲ್ಲಲಿದೆ ಎಂದು ಸಿಎಂ ಹೇಳಿದ್ದರು.

**ಕೇರಳದ ಮೇಲಿನ 'ವಿಶೇಷ ಪ್ರೀತಿ'ಗೆ ಇಲ್ಲಿವೆ 3 ಸಾಕ್ಷಿ**



ಜುಲೈ 30, 2024ರ ಮುಂಜಾನೆ ಭೂಕುಸಿತ ಉಂಟಾಗಿ ಸುಮಾರು ಮುನ್ನೂರು ಜನರು ಮೃತ ಪಟ್ಟಿದ್ದರು.

ಆ ವೇಳೆ, ವಯನಾಡ್ ಕ್ಷೇತ್ರದ ಸಂಸದರಾಗಿದ್ದವರು ರಾಹುಲ್ ಗಾಂಧಿ. ರಾಯ್'ಬರೇಲಿ ಮತ್ತು ವಯನಾಡ್, ಎರಡೂ ಕ್ಷೇತ್ರದಲ್ಲಿ ರಾಹುಲ್ ಗೆದ್ದಿದ್ದರು. ಸಹೋದರಿ ಪ್ರಿಯಾಂಕಗಾಗಿ ವಯನಾಡ್ ಕ್ಷೇತ್ರವನ್ನು ತ್ಯಜಿಸಿದ್ದರು ಮತ್ತು ಪ್ರಿಯಾಂಕ ಗಾಂಧಿ ವಾದ್ರಾ, ಹಾಲಿ ಅಲ್ಲಿನ ಸಂಸದರಾಗಿ ಆಯ್ಕೆಯಾಗಿದ್ದರು. ಗಾಂಧಿ ಕುಟುಂಬದ ಸೂಚನೆಯ ಮೇರೆಗೆ ವಯನಾಡ್ ಜನತೆಗೆ ಸಹಾಯ ಮಾಡಲಾಗಿದೆ ಎನ್ನುವ ಆರೋಪವನ್ನು ಬಿಜೆಪಿ ಮಾಡಿತ್ತು.

## ಕೋಗಿಲು ಅಕ್ರಮ ಮನೆಗಳ ನೆಲಸಮ, ಪರಿಹಾರ

ಬೆಂಗಳೂರು ಉತ್ತರ ಭಾಗದ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕೋಗಿಲು ಪ್ರದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದವರ ಶೆಡ್ ಅನ್ನು ನೆಲಸಮ ಮಾಡಲಾಗಿತ್ತು. ಇದು, ರಾಜಕೀಯ ಸ್ವರೂಪ ಪಡೆಯುತ್ತಿದ್ದಂತೆಯೇ, ಮತ್ತೆ ಹೈಕಮಾಂಡ್ ಸೂಚನೆಯ ಮೇರೆಗೆ, ಅಕ್ರಮವಾಗಿ ನೆಲೆಸಿದ್ದವರಿಗೆ ಸಕ್ರಮವಾಗಿ ಮನೆ ನಿರ್ಮಿಸಿ ಕೊಡಲು ನಿರ್ಧರಿಸಲಾಯಿತು. ಇದು ಕೂಡಾ, ಕಾಂಗ್ರೆಸ್ ಹೈಕಮಾಂಡ್ ಸೂಚನೆಯ ಮೇರೆಗೆ ಪರಿಹಾರ ಕೊಡಲು ನಿರ್ಧರಿಸಲಾಯಿತು. ಕೇರಳದವರಾದ ಕೆಸಿ ವೇಣುಗೋಪಾಲ್, ಅವರ ಆದೇಶದಂತೆ, ಈ ಕ್ರಮವನ್ನು ತೆಗೆದುಕೊಳ್ಳಲಾಯಿತು.

**ಆನೆಯ ದಾಳಿಗೆ ವಯನಾಡ್ ಕುಟುಂಬದ ಸದಸ್ಯರೊಬ್ಬರ ಸಾವು**

ಆನೆಯ ದಾಳಿಗೆ ವಯನಾಡ್ ಕುಟುಂಬದ ಸದಸ್ಯರೊಬ್ಬರು ಸಾವನ್ನಪ್ಪಿದ್ದರು. ಭಾರತ್ ಜೋಡೋ ನ್ಯಾಯ್ ಯಾತ್ರೆಯಲ್ಲಿ ತೊಡಗಿಸಿಕೊಂಡಿದ್ದ ರಾಹುಲ್ ಗಾಂಧಿ, ಯಾತ್ರೆಯ ಮಧ್ಯೆಯೇ ಸಂತ್ರಸ್ತ ಕುಟುಂಬವನ್ನು ಭೇಟಿಯಾಗಿದ್ದರು. ಆ ವೇಳೆ, ಮೃತ ಕುಟುಂಬಕ್ಕೆ ಹದಿನೈದು ಲಕ್ಷ ರೂಪಾಯಿ ನೀಡುವಂತೆ, ರಾಜ್ಯ ಅರಣ್ಯ ಸಚಿವ ಈಶ್ವರ್ ಖಂಡ್ರೆಗೆ ಸೂಚಿಸಿದ್ದರು. ಅದರ ಭಾಗವಾಗಿ, ಸಿದ್ದರಾಮಯ್ಯ ಸರ್ಕಾರ ಹದಿನೈದು ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದರು. ಹಾಸನದಲ್ಲಿ ಆನೆಗೆ ರೇಡಿಯೋ ಕಾಲರ್ ಅಳವಡಿಸಲಾಗಿತ್ತು. ಆ ಆನೆ, ಕೇರಳದ ವಯನಾಡ್ ಜಿಲ್ಲೆಗೆ ನುಗ್ಗಿ ಅಜೀಶ್ ಎಂಬ ವ್ಯಕ್ತಿಯನ್ನು ಕೊಂದಿತ್ತು. ರಾಜ್ಯದ ಇತಿಹಾಸದಲ್ಲಿ ಅಪರೂಪ ಎನ್ನುವಂತೆ, ಹೊರರಾಜ್ಯದ ವ್ಯಕ್ತಿಯೊಬ್ಬರಿಗೆ ಆನೆ ದಾಳಿಗೆ ಪರಿಹಾರವನ್ನು ನೀಡಲಾಗಿತ್ತು. ಇದು ಕೂಡಾ, ರಾಹುಲ್ ಗಾಂಧಿ ಸೂಚನೆಯ ಮೇರೆಗೆ ಪರಿಹಾರ ನೀಡಲಾಗಿತ್ತು.

**ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಕ್ರಿಯೆ:** ಕೇರಳದ ಜನರು ಹಾಗೂ ನನ್ನ ನಡುವೆ ಉತ್ತಮ ಬಾಂಧವ್ಯವಿದೆ. ಕೇರಳ ಜನ ನನ್ನನ್ನು ಬಹಳ ಪ್ರೀತಿಸುತ್ತಾರೆ. ನನಗೂ ಅವರ ಮೇಲೆ ಗೌರವವಿದೆ. ಕೇರಳ ಚುನಾವಣೆ ಪ್ರಚಾರಕ್ಕೆ ನಾನು ಹೋಗುತ್ತೇನೆ. ಅಲ್ಲಿ ನಮ್ಮ ಸರ್ಕಾರ ಬರಲಿದೆ ಎಂದರು.

## ಅಗ್ನಿದುರಂತ ತಡೆಯಲು ಸ್ವಯಂಚಾಲಿತ ಅಗ್ನಿಶಾಮಕ ವ್ಯವಸ್ಥೆ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ತಿಂಗಳುಗಳಲ್ಲಿ, ಸ್ಲೀಪರ್ ಕೋಚ್‌ಗಳು ಮತ್ತು ಹವಾನಿಯಂತ್ರಿತ ಬಸ್‌ಗಳಲ್ಲಿ ಸಂಭವಿಸುವ ಬೆಂಕಿ ಅವಘಡಗಳು ಮತ್ತು ಹೆದ್ದಾರಿಗಳಲ್ಲಿ ಸಂಭವಿಸಿರುವ ಅಪಘಾತಗಳಿಂದ ಎಚ್ಚೆತ್ತ ರಾಜ್ಯ ಸರ್ಕಾರ, ಕೆಎಸ್ ಆರ್‌ಟಿಸಿ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಡ್ಯಾಶ್ ಕ್ಯಾಮ್ ಹಾಗೂ ಸಲೂನ್ ಕ್ಯಾಮೆರಾಗಳನ್ನು ಅಳವಡಿಸಲು ಮುಂದಾಗಿದೆ. ಈ ಅಪಘಾತಗಳಲ್ಲಿ ಅನೇಕ ಪ್ರಯಾಣಿಕರು ಸಾವಿಗೀಡಾಗಿದ್ದಾರೆ. ಅದರಿಂದ ರಾತ್ರಿ ಪ್ರಯಾಣದ ವೇಳೆ ಪ್ರಯಾಣಿಕರ ಸುರಕ್ಷತೆ ಈಗ ಪ್ರಶ್ನಾರ್ಥಕವಾಗಿದೆ. ಅಂತಹ ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತೆಯ ಸಮಗ್ರ ಲೆಕ್ಕಪರಿಶೋಧನೆಗೆ ಹೆಚ್ಚುತ್ತಿರುವ ಬೇಡಿಕೆಗಳ ನಡುವೆ, ರಾಜ್ಯಸ್ವಾಮ್ಯದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ ಆರ್‌ಟಿಸಿ) ತನ್ನ ಎಲ್ಲಾ ಸ್ಲೀಪರ್ ಬಸ್‌ಗಳಲ್ಲಿ ಡ್ಯಾಶ್ ಕ್ಯಾಮ್‌ಗಳು ಮತ್ತು ಸಲೂನ್ ಕ್ಯಾಮೆರಾಗಳನ್ನು ಶೀಘ್ರದಲ್ಲೇ ಅಳವಡಿಸುವುದಾಗಿ ಘೋಷಿಸಿದೆ.

## 2 ತಿಂಗಳಿಗೊಮ್ಮೆ ಪೋಷಕರು-ಶಿಕ್ಷಕರ ಸಭೆ ಕಡ್ಡಾಯ: ಸಚಿವ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಇನ್ನು ಮುಂದೆ ಎರಡು ತಿಂಗಳಿಗೆ ಒಮ್ಮೆ ಪೋಷಕರು-ಶಿಕ್ಷಕರ ಮಹಾಸಭೆ ಆಯೋಜನೆ ಮಾಡುವುದು ಕಡ್ಡಾಯ. ರಾಜ್ಯದ 56 ಸಾವಿರ ಶಾಲಾ ಕಾಲೇಜುಗಳಲ್ಲಿ ನ.14ರಂದು ಪೋಷಕರು-ಶಿಕ್ಷಕರ ಮಹಾಸಭೆ ಆಯೋಜಿಸಲಾಗಿತ್ತು. ಸಭೆಯು ಸಾಕಷ್ಟು ಯಶಸ್ಸು ಕಂಡಿತ್ತು. ಹೀಗಾಗಿ, ಪ್ರತಿ ಎರಡು ತಿಂಗಳಿಗೆ ಒಂದು ಸಭೆ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. 2025-26ನೇ ಸಾಲಿನಲ್ಲಿ ಜ.3 ಹಾಗೂ ಫೆ.28ರಂದು ಮಹಾಸಭೆಗಳನ್ನು ನಿಗದಿ ಮಾಡಲಾಗಿದೆ. 2026 27ನೇ ಶೈಕ್ಷಣಿಕ ಸಾಲಿನಿಂದ ಪ್ರತಿ ಎರಡು ತಿಂಗಳಿಗೆ ಒಂದು ಸಭೆ ನಡೆಸಲಾಗುತ್ತದೆ. ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಅಧ್ಯಕ್ಷರು ಮತ್ತು ಸದಸ್ಯರು ಸಭೆಯಲ್ಲಿ ಭಾಗವಹಿಸಸುವರು ಎಂದು ಮಾಹಿತಿ ನೀಡಿದ್ದಾರೆ. ಮಕ್ಕಳ ಕಲಿಕಾ ಪ್ರಗತಿಯಲ್ಲಿ ಪೋಷಕರ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಲಾಗುತ್ತದೆ. ಉತ್ತಮ ಸಾಧನೆ ತೋರಿದ ಮಕ್ಕಳನ್ನು ಅಭಿನಂದಿಸಲಾಗುತ್ತದೆ ಎಂದು ಹೇಳಿದ್ದಾರೆ.

## ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗೆ ಸಜ್ಜು

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಖಾಸಗಿ ವಲಯದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪುನಶ್ಚೇತನ ಪಡಿಸಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿದೆ.

ಈ ಪ್ರಸ್ತಾವನೆಯು ಮುಂಬರುವ ಶುಕ್ರವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬರುವ ಸಾಧ್ಯತೆಯಿದ್ದು, ಈ ವಿಧೇಯಕದ ಭವಿಷ್ಯವನ್ನು ನಿರ್ಧರಿಸಲಿದೆ. ಕೈಗಾರಿಕಾ ವಲಯದ ಆತಂಕ ಮತ್ತು ಕನ್ನಡಿಗರ ಉದ್ಯೋಗ ಹಿತಾಸಕ್ತಿ ಎರಡನ್ನೂ ಸರ್ಕಾರ ಹೇಗೆ ಸಮತೋಲನಗೊಳಿಸುತ್ತದೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಕರ್ನಾಟಕ ಸರ್ಕಾರವು ಖಾಸಗಿ ವಲಯದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಲು ಉದ್ದೇಶಿಸಿದ್ದು, ಹೊಸ ಪ್ರಸ್ತಾವನೆಯ ಪ್ರಕಾರ ವ್ಯವಸ್ಥಾಪಕ ಹುದ್ದೆಗಳಿಗೆ ಶೇ. 50, ವ್ಯವಸ್ಥಾಪಕೇತರ ಹುದ್ದೆಗಳಿಗೆ ಶೇ. 70 ಮತ್ತು ಗ್ರೂಪ್ 'ಸಿ' ಹಾಗೂ 'ಡಿ' ದರ್ಜೆಯ ಹುದ್ದೆಗಳಿಗೆ ಶೇ. 100 ರಷ್ಟು ಮೀಸಲಾತಿಯನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ.

# ಬೆಂಕಿ ಅಬ್ಬರ ಕರಾಳ ಗುರುವಾರ

## ಭಸ್ಮವಾದ ಸ್ಟರ್ ಡ್ಯಾಂನ ವೊಂಡೆಲ್ ಚರ್ಚ್



**ಸ್ವಿಟ್ಜರ್ಲ್ಯಾಂಡ್ :** ಸ್ವಿಸ್‌ನ ಕ್ರಾನ್ಸ್-ಮಾಂಟಾನಾದಲ್ಲಿನ ಐಷಾರಾಮಿ ಬಾರ್ ವೊಂದರಲ್ಲಿ ಹೊಸ ವರ್ಷದ ಸಂಭ್ರಮಾಚರಣೆಯ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 40 ಜನರು ಸಾವನ್ನಪ್ಪಿದ್ದಾರೆ , ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಯುರೋಪ್‌ನ ಅಗ್ರ ಶ್ರೇಯಾಂಕಿತ ಸ್ಕೀ ತಾಣಗಳಲ್ಲಿ ಒಂದಾದ ಜನಪ್ರಿಯ ರೆಸಾರ್ಟ್‌ಗೆ ಪೊಲೀಸರು, ಅಗ್ನಿಶಾಮಕ ದಳ ಮತ್ತು ರಕ್ಷಣಾ ಕಾರ್ಯಕರ್ತರು ಧಾವಿಸಿ ಪರಿಶೀಲಿಸಿದ್ದಾರೆ ಎಂದು ಸ್ವಿಸ್‌ನ ಮಾಧ್ಯಮವೊಂದು ವರದಿ ಮಾಡಿದೆ. ಬಾರ್‌ನಲ್ಲಿ ಸಂಭವಿಸಿರುವ ಅಗ್ನಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ ಎಂದು ನೈಋತ್ಯ ಸ್ವಿಟ್ಜರ್ಲ್ಯಾಂಡ್‌ನ ವಾಲಿಸ್ ಕ್ಯಾಂಟನ್‌ನಲ್ಲಿರುವ ಪೊಲೀಸರು ತಿಳಿಸಿದ್ದಾರೆ.

ಹೊಸ ವರ್ಷದ ಆಚರಣೆಗಾಗಿ ಸುಮಾರು 100 ಜನರು ಅಲ್ಲಿ ಸೇರಿದ್ದರು ಎಂದು ವಕ್ತಾರರು ತಿಳಿಸಿದ್ದಾರೆ. ನ್ಯೂಯಾರ್ಕ್‌ನ ಪ್ರವಾಸಿಗರೊಬ್ಬರು, ಬಾರ್‌ನಲ್ಲಿ ಪ್ರಕಾಶಮಾನವಾದ ಕಿತ್ತಳೆ ಬಣ್ಣದ ಜ್ವಾಲೆಗಳು ಬರುತ್ತಿರುವುದನ್ನು ಚಿತ್ರೀಕರಿಸಿದ್ದಾರೆ. ಅಲ್ಲದೇ, ಕತ್ತಲೆಯಲ್ಲಿ ಜನರು ಓಡಿಹೋಗುವುದನ್ನು ಮತ್ತು ಕಿರುಚುತ್ತಿರುವುದನ್ನು ನೋಡಿದೆ ಎಂದು ತಿಳಿಸಿದ್ದಾರೆ.'ಹಲವಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ ಹಾಗೂ ಇತರರು ಗಾಯಗೊಂಡಿದ್ದಾರೆ. ಪ್ರಮುಖ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಘಟನಾ ಸ್ಥಳಕ್ಕೆ ಪೊಲೀಸರು, ಅಗ್ನಿಶಾಮಕ ದಳ ಮತ್ತು ರಕ್ಷಣಾ ಕಾರ್ಯಕರ್ತರು ತಕ್ಷಣವೇ ಧಾವಿಸಿ ಹಲವಾರು ಸಂತ್ರಸ್ತರಿಗೆ ಸಹಾಯ ಮಾಡಿದರು. ಗಂಟೆಗಳ ನಂತರವೂ ಬಾರ್ ಹೊರಗೆ ಆಂಬ್ಯುಲೆನ್ಸ್‌ಗಳು ನಿಂತಿದ್ದವು ಹಾಗೂ ಬಾರ್‌ನ ಕಿಟಕಿಗಳು ಒಡೆದಿರುವುದು ಕಾಣುತ್ತಿತ್ತು' ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.'ಘಟನಾ ಸ್ಥಳದಲ್ಲಿದ್ದ

1 ಹೊಸ ವರ್ಷದ ಮೊದಲ ದಿನವೇ ದೂರದ ಸ್ವಿಡ್ಜರ್ಲ್ಯಾಂಡ್‌ನಿಂದ ದು:ಖದ ಸುದ್ದಿ

2 ಕ್ರಾನ್ಸ್ ಮೊಂಟಾನಾದ ಬಾರ್‌ನಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಸ್ಫೋಟ

3 100ಕ್ಕೂ ಹೆಚ್ಚು ಜನರಿದ್ದ ಬಾರ್‌ನಲ್ಲಿ 40 ಜನರ ಸಾವು, ರಕ್ಷಣಾ ಕಾರ್ಯಾಚರಣೆ

**ರಕ್ಷಣಾ ಕಾರ್ಯಾಚರಣೆ ತೀವ್ರ**

ಸ್ಫೋಟದ ಮಾಹಿತಿ ಲಭಿಸಿದ ತಕ್ಷಣವೇ ಪೊಲೀಸರು, ಅಗ್ನಿಶಾಮಕ ದಳ, ತುರ್ತು ವೈದ್ಯಕೀಯ ಸಿಬ್ಬಂದಿ ಮತ್ತು ರಕ್ಷಣಾ ಕಾರ್ಯಕರ್ತರ ದೊಡ್ಡ ಪಡೆ ಸ್ಥಳಕ್ಕೆ ಧಾವಿಸಿತು. ರಾತ್ರಿಯಿಡೀ ಅಗ್ನಿಶಾಮಕ ವಾಹನಗಳು, ಆಂಬ್ಯುಲೆನ್ಸ್‌ಗಳು ಹಾಗೂ ಪೊಲೀಸ್ ವಾಹನಗಳು ಕಾರ್ಯಾಚರಣೆಯಲ್ಲಿ ತೊಡಗಿದ್ದವು. ಗಾಯಾಳುಗಳನ್ನು ತಕ್ಷಣವೇ ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಸ್ವಿಸ್ ದಿನಪತ್ರಿಕೆ ಬ್ಲಿಕ್, ಘಟನಾ ಸ್ಥಳದಲ್ಲಿದ್ದ ವೈದ್ಯರನ್ನು ಉಲ್ಲೇಖಿಸಿ, ಸಾವಿನ ಸಂಖ್ಯೆ ''ಡಜನ್‌ಗಳಲ್ಲಿ'' ಇರಬಹುದೆಂದು ವರದಿ ಮಾಡಿದೆ.

# ಹೊಸ ವರ್ಷದ ಸಂಭ್ರಮಾಚರಣೆ; ಸ್ವಿಸ್‌ನ ಐಷಾರಾಮಿ ಬಾರ್‌ನಲ್ಲಿ ಬೆಂಕಿ ಅವಘಡ

## ಸ್ವಿಟ್ಜರ್ಲ್ಯಾಂಡ್ ಕ್ಷಣಾರ್ಧದಲ್ಲಿ ಸೂತಕವಾಗಿ ಬದಲಾಯ್ತು ಹೊಸ ವರ್ಷ

**ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ದೃಶ್ಯಗಳು**

ಘಟನೆಯ ವೀಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಬಾರ್ ಇರುವ ಕಟ್ಟಡದ ಭಾಗವೊಂದು ಬೆಂಕಿಗಾಹುತಿ ಆಗಿರುವ ದೃಶ್ಯಗಳು ಹಾಗೂ ರಕ್ಷಣಾ ಸಿಬ್ಬಂದಿ ತುರ್ತು ಕಾರ್ಯಾಚರಣೆಯಲ್ಲಿ ತೊಡಗಿರುವುದು ಕಂಡುಬಂದಿದೆ. ''ಲೆ ಕಾನ್ಸ್ಟೆಲೇಷನ್'' ಬಾರ್ ಐಷಾರಾಮಿ ಸ್ಕೀ ರೆಸಾರ್ಟ್‌ಗೆ ಭೇಟಿ ನೀಡುವ ಪ್ರವಾಸಿಗರಲ್ಲಿ ಅತ್ಯಂತ ಜನಪ್ರಿಯ ಸ್ಥಳವಾಗಿತ್ತು. ಐಷಾರಾಮಿ ಸ್ಕೀ ರೆಸಾರ್ಟ್‌ನಲ್ಲಿ ಸಂಭ್ರಮದಿಂದ ನಡೆಯಬೇಕಿದ್ದ ಹೊಸ ವರ್ಷದ ಆಚರಣೆಯ ಮೇಲೆ ಈ ದುರ್ಘಟನೆ ಕರಾಳ ನೆರಳನ್ನು ಬೀರಿದ್ದು, ಇಡೀ ಸ್ವಿಟ್ಜರ್ಲ್ಯಾಂಡ್ ಮಾತ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಆಘಾತ ಮೂಡಿಸಿದೆ.

**ಪೊಲೀಸ್ ಅಧಿಕಾರಿಗಳ ಹೇಳಿಕೆ**

ವಲಾಯಿಸ್ ಕ್ಯಾಂಟೋನಲ್ ಪೊಲೀಸ್ ಕಮಾಂಡರ್ ಫ್ರೆಡೆರಿಕ್ ಗಿಸ್ಲರ್, ''100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅವರಲ್ಲಿ ಹೆಚ್ಚಿನವರು ಗಂಭೀರ ಸ್ಥಿತಿಯಲ್ಲಿದ್ದಾರೆ'' ಎಂದು ತಿಳಿಸಿದ್ದಾರೆ. ಸ್ಕೈ ನ್ಯೂಸ್‌ಗೆ ನೀಡಿದ ಪ್ರತಿಕ್ರಿಯೆಯಲ್ಲಿ ಅವರು ಸಾವಿನ ನಿಖರ ಸಂಖ್ಯೆಯನ್ನು ಬಹಿರಂಗಪಡಿಸದೇ, ''ಹಲವಾರು ಡಜನ್ ಜನರು ಮೃತಪಟ್ಟಿದ್ದಾರೆ'' ಎಂದು ಹೇಳಿದ್ದಾರೆ. ಸ್ಕೈ ನ್ಯೂಸ್ ವರದಿ ಪ್ರಕಾರ, ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ಮಾತನಾಡಿದರೆ, ಕನಿಷ್ಠ 10 ಮಂದಿ ಸಾವನ್ನಪ್ಪಿರುವುದು ಖಚಿತ, ಆದರೆ ಸ್ಥಳೀಯ ಮಾಧ್ಯಮಗಳು ಸಾವಿನ ಸಂಖ್ಯೆ ಇದಕ್ಕಿಂತ ಹೆಚ್ಚಿರಬಹುದೆಂದು ಸೂಚಿಸಿವೆ. ಈ ಹಿನ್ನೆಲೆ ಸಾವಿನ ಅಂತಿಮ ಸಂಖ್ಯೆ ಇನ್ನೂ ಅಸ್ಪಷ್ಟವಾಗಿಯೇ ಉಳಿದಿದೆ.



ವೈದ್ಯರನ್ನು ಉಲ್ಲೇಖಿಸಿ, ಸಾವಿನ ಸಂಖ್ಯೆ 'ಡಜನ್ ಗಟ್ಟಲೆ' ಇರಬಹುದು ಎಂದು ಸ್ವಿಸ್ ದಿನಪತ್ರಿಕೆ ಬ್ಲಿಕ್ ವರದಿ ಮಾಡಿದೆ.'ಅವಘಢದಿಂದ ಸುಮಾರು 40 ಜನರು ಸಾವನ್ನಪ್ಪಿದ್ದು ಮತ್ತು 100 ಜನರು ಗಾಯಗೊಂಡಿದ್ದಾರೆ' ಪ್ರಾದೇಶಿಕ ದಿನಪತ್ರಿಕೆ ಲೆ ನೌವೆಲಿಸ್ಟೆ ತಿಳಿಸಿದೆ.

ಸಂಗೀತ ಕಚೇರಿಯ ಸಮಯದಲ್ಲಿ ಪೈರೋಟೆಕ್ನಿಕ್‌ಗಳನ್ನು ಬಳಸಿದ್ದರಿಂದಾಗಿ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಸ್ವಿಸ್ ಮಾಧ್ಯಮಗಳು ವರದಿ ಮಾಡಿವೆ. ಆದರೆ, ಪೊಲೀಸರು ಕಾರಣ ತಿಳಿದಿಲ್ಲ ಎಂದು ಹೇಳಿದ್ದಾರೆ.ಲೆ ಕಾನ್ಸ್ಟೆಲೇಷನ್‌ನಲ್ಲಿ ಮಧ್ಯರಾತ್ರಿ 1:30ರ ಸುಮಾರಿಗೆ ಅಪರಿಚಿತ ಮೂಲದ ಸ್ಫೋಟ ಸಂಭವಿಸಿದೆ ಎಂದು ಪೊಲೀಸ್ ವಕ್ತಾರ ಗೇಟನ್ ಲಾಥಿಯಾನ್ ಅವರು ಎಎಫ್‌ಪಿ ಮಾಧ್ಯಮಕ್ಕೆ ತಿಳಿಸಿದ್ದಾರೆ.ಆ ಪ್ರದೇಶಗಳು 'ಸಾರ್ವಜನಿಕರಿಗೆ ಸಂಪೂರ್ಣವಾಗಿ ಮುಚ್ಚಲ್ಪಟ್ಟಿವೆ' ಮತ್ತು 'ಕ್ರಾನ್ಸ್ ಮೊಂಟಾನಾದ ಮೇಲೆ ಹಾರಾಟವನ್ನು ನಿಷೇಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ಪಾರ್ಟಿ ಜೋರಾಗಿ ನಡೆಯುತ್ತಿತ್ತು.. ಸಂಗೀತ ಮತ್ತು ಷಾಂಪೇನ್ ಮುಕ್ತವಾಗಿ ಕೇಳಿಬರುತ್ತಿತ್ತು. ಆದರೆ, ಬೆಂಕಿಯ ಸುದ್ದಿ ಬರುತ್ತಿದ್ದಂತೆ, ನಿರಾತಂಕದ ಮನಸ್ಥಿತಿ ಮಾಯವಾಯಿತು. ಜನರು ಬೀದಿಯಲ್ಲಿ ಸೇರಲು ಪ್ರಾರಂಭಿಸಿದರು. ದೂರದಲ್ಲಿ ನಮಗೆ ಸೈರನ್‌ಗಳು ಕೇಳಿಸುತ್ತಿದ್ದವು. ನನ್ನ ಸುತ್ತಲೂ ಜನರು ದಿಗ್ಭ್ರಮೆಗೊಂಡರು, ಚಿಂತಿತರಾಗಿದ್ದರು, ಮೌನವಾಗಿದ್ದರು' ಎಂದು ಹತ್ತಿರದಲ್ಲಿ ವಾಸಿಸುತ್ತಿದ್ದ ನಿವಾಸಿಯೊಬ್ಬರು ಲೌಸಾನ್ನೆ ಪತ್ರಿಕೆಗೆ ತಿಳಿಸಿದ್ದಾರೆ.




# ಮರ್ಯಾದೆಗೇಡು ಹತ್ಯೆ ತಡೆಗೆ ಮಾನ್ಯಾ ಹೆಸರಿನಲ್ಲಿ ಪ್ರತ್ಯೇಕ ಕಾಯ್ದೆ

## • ಅನ್ಯ ಜಾತಿ ಯುವಕನನ್ನು ಮದುವೆಯಾಗಿದ್ದಕ್ಕೆ ಏಳು ತಿಂಗಳ ಗರ್ಭಿಣಿ ಮಗಳನ್ನು ಕೊಂದ ತಂದೆ

• ಉದಯವಾಹಿನಿ, ಹುಬ್ಬಳ್ಳಿ

ಮುಂದಿನ ದಿನಗಳಲ್ಲಿ ಮರ್ಯಾದೆಗೇಡು ಹತ್ಯೆ ಅಂತಹ ಘಟನೆ ತಡೆಗೆ ಮಾನ್ಯಾ ಹೆಸರಿನಲ್ಲಿ ಪ್ರತ್ಯೇಕ ಕಾಯ್ದೆ ಜಾರಿಗೊಳಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು. ಮರ್ಯಾದೆಗೇಡು ಹತ್ಯೆ ನಡೆದ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮಕ್ಕೆ ಗುರುವಾರ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿ ನಂತರ ಮಾಧ್ಯಮದವರ ಜತೆ ಅವರು ಮಾತನಾಡಿದರು.

**ಉಗ್ರ ಕಾನೂನು ತರಲು ಸಿಎಂ ಜೊತೆ ಚರ್ಚೆ:** ರಾಜ್ಯದಲ್ಲಿ ಇಂತಹ ಮರ್ಯಾದೆಗೇಡು ಹತ್ಯೆ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸಿಎಂ, ಗೃಹ ಸಚಿವರೊಂದಿಗೆ ಚರ್ಚಿಸಲಾಗುವುದು. ಈ ಬಗ್ಗೆ ಉಗ್ರವಾದ ಕಾನೂನು ತರಲು ಮುಂದಿನ ಅಧಿವೇಶನದಲ್ಲಿ ಪ್ರಯತ್ನ ಮಾಡಲಾಗುವುದು ಎಂದರು. ಏಳು ತಿಂಗಳ ಗರ್ಭಿಣಿಯನ್ನು ಅವರ ಕುಟುಂಬಸ್ಥರೇ ಕೊಲೆ ಮಾಡಿರುವುದು ಅಮಾನವೀಯವಾದದು, ನಾಗರಿಕ ಸಮಾಜ ತಲೆತಗ್ಗಿಸುವ ಘಟನೆ ಎಂದು ಇದಾಗಿದೆ. ಸರಕಾರ ಇದನ್ನು ಸಹಿಸುವುದಿಲ್ಲ. ಮನುವಾದದ ಮನಸ್ಸುಗಳನ್ನು ಹತ್ತಿಕ್ಕಬೇಕು. ಈ ಪ್ರಕರಣದಲ್ಲಿ ಭಾಗಿಯಾಗಿದವರು, ಅದಕ್ಕೆ ಉತ್ತೇಜನ ಕೊಟ್ಟವರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಕಾಯ್ದೆಗೆ ಜಾರಿಗೆ ಸಚಿವರ ಚಿಂತನೆ**

**ಮದುವೆಯಾಗುವುದು ಮೂಲಭೂತ ಹಕ್ಕು:** ಇಂತಹ ಘಟನೆಗಳು ರಾಜಸ್ಥಾನ, ಹರಿಯಾಣದಂತಹ ರಾಜ್ಯಗಳಲ್ಲಿ ಹೆಚ್ಚು ನಡೆಯುತ್ತಿದ್ದವು. ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ನಡೆಯುತ್ತಿರಲಿಲ್ಲ. ನಮ್ಮದು ನಾಗರಿಕ ಮತ್ತು ಮುಂದುವರಿದ ರಾಜ್ಯ. ಪ್ರಾಯಕ್ಕೆ ಬಂದ ಯುವಕ, ಯುವತಿ ತಮ್ಮ ಒಪ್ಪಿಗೆ ಮೇರೆಗೆ ಯಾವುದೇ ಧರ್ಮ, ಜಾತಿಯವರನ್ನು ಮದುವೆಯಾಗಲು ಮುಕ್ತವಾದ ಅವಕಾಶವಿದೆ. ಅದು ಅವರ ಮೂಲಭೂತ ಹಕ್ಕು, ಇದನ್ನು ಹತ್ತಿಕ್ಕುವ ಕೆಲಸ ಮಾಡಬಾರದು ಎಂದರು.



**ಸಂತ್ರಸ್ತರಿಗೆ ಪರಿಹಾರ ಕೊಡಲು ಸೂಚನೆ**

ಘಟನೆ ನಡೆದ ಕೂಡಲೇ ಪರಿಶಿಷ್ಟ ಜಾತಿ, ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ಸಂತ್ರಸ್ತರಿಗೆ ಪರಿಹಾರ ಕೊಡುವಂತೆ ಜಿಲ್ಲಾಧಿಕಾರಿಗೆ ಕರೆ ಮಾಡಿ ಸೂಚನೆ ಕೊಟ್ಟಿದ್ದೆ. ಈ ಘಟನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರೇ ಅವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು. ಪ್ರಕರಣದಲ್ಲಿ ಎಂಟು ಜನ ಸಂತ್ರಸ್ತರಿಗೆ ತಲಾ 2 ಲಕ್ಷದಂತೆ 16 ಲಕ್ಷ ಪರಿಹಾರದ ಚೆಕ್ ಅನ್ನು ಕುಟುಂಬಸ್ಥರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಯಿತು.

ಈ ಪ್ರಕರಣದಲ್ಲಿ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಇಂತಹ ಕೃತ್ಯಗಳನ್ನು ಬೆಂಬಲಿಸುವ ವ್ಯಕ್ತಿಗಳನ್ನು ಸರಕಾರ ಬಿಡುವುದಿಲ್ಲ. ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು ಎಂಬುದು ನಮ್ಮ ಆಶಯ ಎಂದು ತಿಳಿಸಿದರು.

ಯುವತಿಯ ಇಚ್ಛೆಯ ವಿರುದ್ಧವಾಗಿ ವಿವಾಹ ಮಾಡಬಾರದು. ಆಕೆಯ ಆಸೆಯಂತೆ ಮದುವೆ ಆಗಬೇಕು ಎಂದು ಹಿಂದೂ ಕೋಡ್ ಬಿಲ್‌ನಲ್ಲಿ ಅಂಬೇಡ್ಕರ್ ಅವರು ಹೇಳಿದ್ದರು ಎನ್ನುವುದನ್ನು ಸಚಿವ ಮಹದೇವಪ್ಪನವರು ಪ್ರಸ್ತಾಪಿಸಿದರು.

ಇನಾಂ ವೀರಾಪುರಕ್ಕೆ ತೆರಳುವ ಮಾರ್ಗ ಮಧ್ಯೆ ಹುಬ್ಬಳ್ಳಿಯಲ್ಲಿ ಪೊಲೀಸ್ ಸಿಬ್ಬಂದಿಗಳೊಂದಿಗೆ ಘಟನೆಯ ಕುರಿತು ಸಂಪೂರ್ಣ ವಿವರವನ್ನು ಪಡೆದೆನು. ಜಾತಿ ದ್ವೇಷ ಮತ್ತು ಕ್ರೌರ್ಯದ ವಿರುದ್ಧ ಸಾಕಷ್ಟು ಅರಿವು ಮೂಡಿಸುವ ಪ್ರಯತ್ನಗಳು ಬಹುಕಾಲದಿಂದ ಜಾರಿಯಲ್ಲಿ ಇರುವಂತೆ, ಜಾತೀಯ ದ್ವೇಷವೂ ಕೂಡಾ ಜಾರಿಯಲ್ಲಿರುವುದು ಕಾಲದ ವಾಸ್ತವ. ಆದರೂ ನಾವು ಜಾತಿ ದ್ವೇಷ ಸಮಾಜದ ನಾಶಕ್ಕಾಗಿ ಆಶಯ ಹೊಂದಿ ಪ್ರಯತ್ನಿಸಬೇಕಾದ್ದು ಎಲ್ಲರ ಆದ್ಯ ಜವಾಬ್ದಾರಿ ಎಂದು ಎಕ್ಸ್‌ನಲ್ಲಿ ಸಚಿವ ಮಹದೇವಪ್ಪನವರು ಟ್ವೀಟ್ ಹಂಚಿಕೊಂಡಿದ್ದಾರೆ.

**ಈ ದಿನದ ದರ** | ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹13,506/Gram24ct ₹12,380/Gram22ct | ಬೆಳ್ಳಿ: ₹238.00/Gram

# ಎಂಇಐ ಸಂಸ್ಥೆಯು ಸಾರ್ವಜನಿಕ ಕ್ಷೇತ್ರದಲ್ಲಿ ದೀರ್ಘ ಅನುಭವ ಹೊಂದಿರುವ ಹೆಮ್ಮೆಯ ಸರ್ಕಾರಿ ಸಂಸ್ಥೆ

• ಉದಯವಾಹಿನಿ, ಬೆಂಗಳೂರು

ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯಲ್ಲಿ, ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕ್ರೀಡಾ ಕೂಟದಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ಹಾಗೂ ಅಧಿಕಾರಿಗಳಿಗೆ ನೆನಪಿನ ಕಾಣಿಕೆ ವಿತರಣೆ ಕಾರ್ಯಕ್ರಮ. 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಎಂಇಐ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರಾದ ಶ್ರೀ ರಾಮಲಿಂಗಾ ರೆಡ್ಡಿ ರವರು ಭಾಗವಹಿಸಿ ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದ ನೌಕರರು, ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು ಮತ್ತು ಬಹುಮಾನ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರ, ವ್ಯವಸ್ಥಾಪಕ ನಿರ್ದೇಶಕರು, ಹಾಗೂ ಅಧಿಕಾರಿಗಳನ್ನು, ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಎಂಇಐ ಸಂಸ್ಥೆಯು ಸಾರ್ವಜನಿಕ ಕ್ಷೇತ್ರದಲ್ಲಿ ದೀರ್ಘ ಅನುಭವವನ್ನು ಹೊಂದಿರುವ ಹೆಮ್ಮೆಯ ಸರ್ಕಾರಿ ಸಂಸ್ಥೆಯಾಗಿದೆ ಎಂದು ತಿಳಿಸಿದರು. ಸಂಸ್ಥೆಯು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಗುರಿ ಹೆಚ್ಚಿಸಿಕೊಂಡು ಉತ್ತಮ ಲಾಭಾಂಶದತ್ತ ಹೆಜ್ಜೆಹಾಕಲಿ ಎಂದು ಹಾರೈಸಿದರು. ಕೆಪಿಟಿಸಿಎಲ್‌ಗೆ ಅಗತ್ಯವಾದ ಬ್ರೇಕರ್ ಗಳನ್ನು ಎಂಇಐ ಸಂಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಿ ಪೂರೈಸುವ ಮೂಲಕ ಹಾಗೂ ಖಾಸಗಿ ವಲಯ ಕ್ಷೇತ್ರಗಳಲ್ಲೂ ಸಹ ಎಂಇಐ ಬ್ರೇಕರ್ ಗಳನ್ನು ಮಾರಾಟ ಮಾಡುವುದರ ಜೊತೆಗೆ, ಉತ್ತಮ ಗುಣಮಟ್ಟದ ಬ್ರೇಕರ್‌ಗಳನ್ನು ಉತ್ಪಾದಿಸುವ ನಿಟ್ಟಿನಲ್ಲಿ ಎಂಇಐ ಸಂಸ್ಥೆ ಇನ್ನಷ್ಟು ಬಲಿಷ್ಠವಾಗಿ ಬೆಳೆಯಬೇಕು ಎಂದು ಅಧಿಕಾರಿಗಳಿಗೆ ಸಲಹೆಯನ್ನು ನೀಡಿದರು.


ಉದಯವಾಹಿನಿ ಚಿತ್ರ

ಎಂಇಐ ಸಂಸ್ಥೆ ಪ್ರಸ್ತುತ ವರ್ಷದಲ್ಲಿ 2 ಕೋಟಿ ರೂ. ಹೆಚ್ಚು ಲಾಭಾಂಶಗಳಿಸಿರುವುದರಿಂದ ಅಧ್ಯಕ್ಷರಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಅಧಿಕಾರಿಗಳಿಗೆ ಮತ್ತು ನೌಕರರಿಗೆ, ಮಾನ್ಯ ಸಚಿವರು ಅಭಿನಂದನೆ ವ್ಯಕ್ತಪಡಿಸಿದರು. ಸರ್ಕಾರಿ ಸಂಸ್ಥೆಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವುದರಿಂದ ನಮ್ಮ ಕನ್ನಡದ ಇತಿಹಾಸ, ಸಂಸ್ಕೃತಿ ಮತ್ತು ಭಾಷೆಯ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಹಾಗೂ ಮತ್ತೊಬ್ಬರಿಗೆ ತಿಳಿಸಬೇಕು ಎಂದು ಅವರು ಹೇಳಿದರು. ಕನ್ನಡ ಹಾಗೂ ಕರ್ನಾಟಕಕ್ಕಾಗಿ ಶ್ರಮಿಸುವ ಸಂಕಲ್ಪದೊಂದಿಗೆ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ತಿಳಿಸಿದರು, ಸಂಸ್ಥೆ ಲಾಭಾಂಶದಲ್ಲಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡುವ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ನಿರುದ್ಯೋಗ ನಿವಾರಣೆಯತ್ತ ಗಮನ ಹರಿಸಬೇಕೆಂದು ಅವರು ತಿಳಿಸಿದರು ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಸ್ ಮನೋಹರ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಅನಿತಾ ಸಿ ಕೆ ಎ ಎಸ್. ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಇನ್ನಷ್ಟು ಬಲಿಷ್ಠವಾಗಿ ಬೆಳೆಯಬೇಕು**

## ಸಿದ್ಧಸೂಕ್ತಿ



**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಕಣೇರಿ ಶ್ರೀಗಳ ಬೈಗುಳ

ಕಣೇರಿ ಶ್ರೀಗಳು ಸೂ. ಮಕ್ಕಳನ್ನು ಮೆ.. ಹೊಡೆಯಬೇಕು ಎಂದಿರುವುದನ್ನು ಒಪ್ಪಲಾಗದು. ಆದರೆ, ಪ್ರಕರ್ಷತಂತ್ರಾ ಹಿ ರಣೇ ಜಯಶ್ರೀಃ. ಭಾರವಿಯ ಕಿರಾತಾರ್ಜುನೀಯ ಮಹಾಕಾವ್ಯದ ಮಾತಿದು. ಕೃಷ್ಣ ಅರ್ಜುನನಿಗೆ ಹೇಳಿದ್ದು. ಯುದ್ಧದಲ್ಲಿ ತಂತ್ರಗಾರಿಕೆ ಗೆಲ್ಲುವುದು. ಕೌರವರು ಸಂಖ್ಯೆಯಲ್ಲಿ ಹೆಚ್ಚು, ಕುಟಿಲತೆಯುಳ್ಳವರು. ನೀನು ಮಹಾಯೋಧನಾಗಿದ್ದರೂ ಹೆಚ್ಚಿನ ಬಲಕ್ಕಾಗಿ ಪಾಶುಪತಾಸ್ತ್ರ ಪಡೆ. ಒಬ್ಬ ಭೂಮಿಯ ಮೇಲೆ ನಿಂತು ಮತ್ತೊಬ್ಬ ಆಕಾಶದಲ್ಲಿದ್ದು, ಒಬ್ಬ ಸಶಸ್ತ್ರ ಮತ್ತೊಬ್ಬ ಅಶಸ್ತ್ರ ಯುದ್ಧ ಮಾಡಿದರೆ ಯುದ್ಧ ಎನಿಸದು. ಕೆಳ ನಿಂತವನಿಗೆ ಶಸ್ತ್ರವಿಲ್ಲದವನಿಗೆ ಜಯ ಸಿಗದು. ತಂತ್ರಕ್ಕೆ ಪ್ರತಿ ತಂತ್ರ ಇರಲೇಬೇಕು. ಕಣೇರಿ ಶ್ರೀಗಳು ಅವಾಚ್ಯ ಶಬ್ದ ಬಳಸಿದ್ದನ್ನು ಬೆಂಬಲಿಸುವುದು ಈ ನಿಟ್ಟಿನಲ್ಲಿ. ಹಲವರು ಹಿಂದುಧರ್ಮದ ಬಗ್ಗೆ ದೇವ ದೇವಿಯರ ಬಗ್ಗೆ ಅಸಹ್ಯ ಅಶ್ಲೀಲ ಟೀಕೆ ಮಾಡಿದ್ದರಿಂದ ಈ ಶಬ್ದ ಪ್ರಯೋಗ. ನೀರಿನಿಂದಾದ ಕೆಸರನ್ನು ನೀರಿನಿಂದಲೇ ತೊಳೆಯಬೇಕು. ಮಾನುಳ್ಳವನಿಗೆ ಮಾತಿನ ಪೆಟ್ಟು ಮಾನಗೇಡಿಗೆ ಮಚ್ಚೆ ಪೆಟ್ಟುಗಾದೆ. ಹಿಂದುಧರ್ಮದ ಬಗ್ಗೆ ದೇವ ದೇವಿಯರ ಬಗ್ಗೆ ಟೀಕೆ ಮಾಡಿದವರು ಕ್ಷಮೆ ಕೇಳಿದರೆ ಕಣೇರಿ ಶ್ರೀಗಳೂ ಕ್ಷಮೆ ಕೋರಬೇಕಾಗಬಹುದು.

# ರಾಜಧಾನಿಗೆ 3 ಮಹತ್ವದ ಯೋಜನೆಯ ಸುಳಿವು

## ನೈಸ್ ನವರು ತಾವು ಸರ್ಕಾರಕ್ಕಿಂತ ದೊಡ್ಡವರಲ್ಲ ಅವರಿಗೆ ಹೇಗೆ ಪಾಠ ಕಲಿಸಬೇಕು ಗೊತ್ತಿದೆ

• ಉದಯವಾಹಿನಿ, ಬೆಂಗಳೂರು

ಗೃಹ ಇಲಾಖೆ ಭದ್ರತೆಯಿಂದ ಬೆಂಗಳೂರಿನಲ್ಲಿ ಜನ 2025ಕ್ಕೆ ಬೀಳ್ಕೊಡುಗೆ ನೀಡಿ, 2026ರ ವರ್ಷವನ್ನು ಸ್ವಾಗತಿಸಿದೆ. 2026ರ ಆರಂಭವೇ ಶುಭವಾಗಿದೆ ಹೆಬ್ಬಾಳ ಮೇಲ್ಸೇತುವೆಯ ಎರಡನೇ ಲೂಪ್ ಅನ್ನು ಉದ್ಘಾಟಿಸಿದ್ದೇವೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಬೆಂಗಳೂರು ನಗರದ ಉಸ್ತುವಾರಿಯೂ ಆಗಿರುವ ಡಿಕೆ ಶಿವಕುಮಾರ್, ಜಿಬಿಎ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ಇದೇ ವರ್ಷದಲ್ಲಿ ನಡೆಯಲಿದೆ. ಪ್ರಧಾನಿಗಳು ಬೆಂಗಳೂರಿಗೆ ಬಂದಾಗ ಈ ನಗರವನ್ನು ಕೊಂಡಾಡಿದ್ದಾರೆ. ಅವರು ನಮಗೆ ಅನುದಾನ ನೀಡದಿದ್ದರೂ, ನಗರಕ್ಕೆ ಹೊಸ ರೂಪ ಕೊಡಲು ಮುಂದಾಗಿದ್ದೇವೆ ಎಂದು ಡಿಸಿಎಂ ಹೇಳಿದ್ದಾರೆ.

**2ನೇ ಲೂಪ್ ಉದ್ಘಾಟನೆ**

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಬೆಂಗಳೂರಿನ ಉತ್ತರ ಭಾಗದ ಜನರ ಸುಗಮ ವಾಹನ ಸಂಚಾರಕ್ಕಾಗಿ ಹೆಬ್ಬಾಳ ಮೇಲ್ಸೇತುವೆಯ ಎರಡನೇ ಲೂಪ್ ಅನ್ನು ಇಂದು ಉದ್ಘಾಟನೆ ಮಾಡಿದ್ದೇವೆ. ಈ ಭಾಗದ ಜನರು ಹೆಬ್ಬಾಳ ಮೇಲ್ಸೇತುವೆ ಬಳಿ ಸಂಚಾರ ದಟ್ಟಣೆ ದೂರು ಹೇಳುತ್ತಿದ್ದರು. ಹೀಗಾಗಿ ನಾವು ತ್ವರಿತ ಗತಿಯಲ್ಲಿ ಪರಿಹಾರ ಕಂಡು ಹಿಡಿದಿದ್ದೇವೆ. ಆಮೂಲಕ ಸಂಚಾರ ದಟ್ಟಣೆ ನಿವಾರಿಸಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು.

**ನೈಸ್ ನವರಿಗೆ ಪಾಠ ಕಲಿಸುವುದು ಗೊತ್ತಿದೆ**

**ನೈಸ್ ಸಂಸ್ಥೆಯ ಕೆಲವು ಕೆಐಎಡಿಬಿ ಜಾಗವನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದೆವು. ಇದಕ್ಕೆ ಅವರು ತಕರಾರು ಎತ್ತಿದ್ದಾರೆ. ನೈಸ್ ನವರು ತಾವು ಸರ್ಕಾರಕ್ಕಿಂತ ದೊಡ್ಡವರು ಎಂದು ಭಾವಿಸಿದ್ದಾರೆ ಎಂದು ಡಿಕೆ ಶಿವಕುಮಾರ್ ಆಕ್ರೋಶ ಹೊರಹಾಕಿದ್ದಾರೆ. ನೈಸ್ ಸಂಸ್ಥೆಯ ನಿರ್ಧಾರದಿಂದಾಗಿ, ಬೇರೆ ದಾರಿ ಹುಡುಕುತ್ತೇವೆ. ಅವರಿಗೆ ಹೇಗೆ ಪಾಠ ಕಲಿಸಬೇಕು ಎಂಬುದು ಗೊತ್ತಿದೆ. ಹೀಗಾಗಿ ಸ್ಕೈಡೆಕ್ ಗಾಗಿ ನಾವು ಬೇರೆ ಕಡೆ ಬಿಡಿಎ ಜಾಗ ಗುರುತಿಸಿದ್ದೇವೆ. ವಿಮಾನ ಹಾರಾಟದ ಟವರ್ ಸಮಸ್ಯೆ ಇರುವ ಕಾರಣ, ಇದನ್ನು ಸೂಕ್ತ ಜಾಗದಲ್ಲಿ ನಿರ್ಮಿಸುತ್ತೇವೆ ಎಂದರು.**


ಉದಯವಾಹಿನಿ ಚಿತ್ರ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಈ ವರ್ಷ ಐವತ್ತನೇ ವಸಂತಕ್ಕೆ ಕಾಲಿಟ್ಟಿದ್ದು, ನನ್ನ ರಾಜಕೀಯ ಜೀವನದಲ್ಲಿ ಹಿಂದೆಂದೂ ಮಾಡಲಾಗದ ಐತಿಹಾಸಿಕ ಯೋಜನೆಗಳನ್ನು ಹಮ್ಮಿಕೊಂಡಿದೆ.**
**-ಡಿಕೆ ಶಿವಕುಮಾರ್, ಡಿಸಿಎಂ**

- **120 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ (ಬಿಬಿಸಿ) ಅನ್ನು ಕಾರ್ಯರೂಪಕ್ಕೆ ತರಲು ರೈತರ ಬಳಿ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ 35% ವಾಣಿಜ್ಯ ಭೂಮಿಯನ್ನು ರೈತರಿಗೆ ಪರಿಹಾರವಾಗಿ ನೀಡಲಾಗುತ್ತಿದೆ. ಜತೆಗೆ ಸಣ್ಣ ಟೌನ್ ಶಿಪ್ ನಿರ್ಮಾಣಕ್ಕೆ ರೈತರಿಗೆ ಉತ್ತಮ ಪರಿಹಾರ ನೀಡುತ್ತಿದ್ದೇವೆ.**
- **ಹೆಬ್ಬಾಳ ಭಾಗದಲ್ಲಿ ಒಂದೂವರೇ ಕಿ.ಮೀ ಟನಲ್ ರಸ್ತೆ ಬರಲಿದೆ. ಮೇಕ್ರಿ ವೃತ್ತದ ಬಳಿ ಮೇಲ್ಸೇತುವೆ ಸಾಗಲಿದೆ. ಇದನ್ನು ಮೂರು ಭಾಗವಾಗಿ ಕಟ್ಟಲಾಗುವುದು.**
- **ತುಮಕೂರು ರಸ್ತೆಯಿಂದ ಕೆ.ಆರ್ ಪುರದ ವರೆಗೆ ಮೇಲ್ಸೇತುವೆ ಮೂಲಕ ಹೊರ ವರ್ತುಲ ರಸ್ತೆ (ಒಆರ್ ಆರ್) ಮಾಡಲು ಮುಂದಾಗಿದ್ದೇವೆ ಎಂದು ವಿವರಿಸಿದರು.**

# ಸಿಎಂ ರೇಸ್ : ನೇರ ಅಖಾಡಕ್ಕಿಳಿದ ಪರಂ

• ಉದಯವಾಹಿನಿ, ಬೆಂಗಳೂರು

ರಾಜಕೀಯವಾಗಿ ಪದೋನ್ನತಿ ಹೊಂದುವ ಮಹಾತ್ವಾಕಾಂಕ್ಷೆ ತಮಗೂ ಇದೆ ಎಂದು ಹೇಳುವ ಮೂಲಕ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮುಖ್ಯಮಂತ್ರಿ ಹುದ್ದೆಯ ರೇಸ್‌ಗೆ ನೇರವಾಗಿ ಅಖಾಡಕ್ಕಿಳಿದಿದ್ದಾರೆ. ನಾಯಕತ್ವ ಬದಲಾವಣೆ ಯಾಗಬೇಕು, ತಮಗೆ ಮುಖ್ಯಮಂತ್ರಿ ಸ್ಥಾನ ದೊರೆಯಬೇಕು ಎಂದು ಈವರೆಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತ್ರ ಪಟ್ಟು ಹಿಡಿದು ನಾನಾ ರೀತಿಯ ಕಸರತ್ತುಗಳನ್ನು ನಡೆಸುತ್ತಿದ್ದರು. ಈಗ ಪರಮೇಶ್ವರ್ ತೆರೆಮರೆಯಲ್ಲಿ ತಮ್ಮದೇ ಆದ ಲಾಬಿ ನಡೆಸುವ ಮೂಲಕ ನೇರವಾಗಿ ಸ್ಪರ್ಧೆಗಿಳಿಯುತ್ತಿದ್ದಾರೆ.

ಕೆಲವು ಹಿರಿಯ ನಾಯಕರು ದೆಹಲಿಗೆ ಹೋಗಿ ಪರಮೇಶ್ವರ್ ಪರವಾಗಿ ವರದಿ ನೀಡಿದ್ದಾರೆ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡುವುದರಿಂದ ಪಕ್ಷಕ್ಕಾಗುವ ಲಾಭ ನಷ್ಟಗಳ ಬಗ್ಗೆ ಪಕ್ಷದ ವರಿಷ್ಠರಿಗೆ ವರದಿ ನೀಡಿದ್ದಾರೆ. ಅಲ್ಲಲ್ಲಿ ಪರಮೇಶ್ವರ್ ಪರವಾದ ಪ್ರತಿಭಟನೆಗಳು ನಡೆದಿದ್ದವು. ಪರಮೇಶ್ವರ್‌ಮುಖ್ಯಮಂತ್ರಿ ಯಾಗಬೇಕು ಎಂಬ ಚರ್ಚೆಗಳ ನಡುವೆ ನಾನಾ ರೀತಿಯ ಗೊಂದಲದ ವಾತಾವರಣಗಳು ಸೃಷ್ಟಿಯಾಗುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣ ಒಂದು ವೇಳೆ ನಾಯಕತ್ವ ಬದಲಾವಣೆಯಾಗುವುದೇ ಆದರೆ ದಲಿತರಿಗೆ ಮುಖ್ಯಮಂತ್ರಿ ಆಗಲು ಅವಕಾಶ ನೀಡಬೇಕು ಎಂದು ಪ್ರತಿಪಾದಿಸುವ ಮೂಲಕ ಪರೋಕ್ಷವಾಗಿ ಪರಮೇಶ್ವರ್ ಹೆಸರನ್ನು ಮುನ್ನೆಲೆಗೆ ತಂದಿದೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡುವ ವೇಳೆಯಲ್ಲಿ ಪರಮೇಶ್ವರ್, ತಾವು ಪದೋನ್ನತಿ ಪಡೆಯುವ ಮಹಾತ್ವಾಕಾಂಕ್ಷೆ ಹೊಂದಿರುವುದಾಗಿ ಹೇಳಿದ್ದಾರೆ. ರಾಜಕೀಯವಾಗಿ ತಮ್ಮ ವೈಯಕ್ತಿಕ ಪದೋನ್ನತಿ ವಿಚಾರವಾಗಿ ಪಕ್ಷದ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಬೇಕು. ರಾಜಕೀಯವಾಗಿ ನಾನು ಆಶಾವಾದಿಯಾಗಿಯೇ ಈವರೆಗೂ ಬದುಕಿದ್ದೇನೆ. ಎಲ್ಲರಿಗೂ ಜೀವನದಲ್ಲಿ ಮಹತ್ವಾಕಾಂಕ್ಷೆಗಳಿರುತ್ತವೆ. ಅದೇ ರೀತಿ ನನಗೂ ಮಹಾತ್ವಾಕಾಂಕ್ಷೆ ಇದ್ದೇ ಇದೆ ಎಂದರು. ರಾಜಕೀಯಕ್ಕೆ ಬಂದಾಗ ಶಾಸಕರಾಗಬೇಕು ಎಂಬ ಅಭಿಲಾಷೆಯಿತ್ತು, ಆನಂತರ ಮಂತ್ರಿಯಾಗಬೇಕು ಎಂಬ ಆಕಾಂಕ್ಷೆ ಇತ್ತು. ಪ್ರತಿ ಹಂತದಲ್ಲೂ ಮುಂದಿನ ಹಂತಕ್ಕೇರುವ ಅಭಿಲಾಷೆಗಳಿರುತ್ತವೆ. ಆದರೆ ಅಂತಿಮವಾಗಿ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟ ವಿಚಾರ ಎಂದರು. ರಾಜ್ಯ ರಾಜಕೀಯದಲ್ಲಿ ವಾತಾವರಣ ಯಾರಿಗೆ ಪೂರಕವಾಗಿದೆ ಎಂದು ಪ್ರತಿನಿತ್ಯವೂ ಚರ್ಚೆಯಾಗುತ್ತಿದೆ. ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ



# ನಿವೃತ್ತ ಪೊಲೀಸ್ ಮಹಾನಿರೀಕ್ಷರಾದ ಬಿಎನ್ ಎಸ್ ರೆಡ್ಡಿರವರಿಗೆ ಅಭಿನಂದನಾ ಸಮಾರಂಭ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಆಚಾರ್ಯ ಶ್ರೀ ರಾಕುಂಜೀ ಶಾಲೆಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಪೊಲೀಸ್ ಮಹಾನಿರೀಕ್ಷರಾದ ಬಿ.ಎನ್.ರೆಡ್ಡಿರವರ ಹುಟ್ಟುಹಬ್ಬದ ಪ್ರಯುಕ್ತ ಅಭಿನಂದನಾ ಕಾರ್ಯಕ್ರಮ. ಆಚಾರ್ಯ ಶ್ರೀರಾಕುಂ ಶಾಲೆ ಸಂಸ್ಥಾಪಕರಾದ ಆಚಾರ್ಯ ಶ್ರೀ ಸ್ವಾಮಿ ರಾಕುಂಜೀರವರು ನಿವೃತ್ತ ಐಪಿಎಸ್ ನಿವೃತ್ತ ಪೊಲೀಸ್ ಮಹಾ ನಿರೀಕ್ಷರಾದ ಬಿ.ಎನ್.ಎಸ್.ರೆಡ್ಡಿರವರಿಗೆ ಆತ್ಮೀಯವಾಗಿ ಸನ್ಮಾನಿಸಿದರು. ಶ್ರೀಮತಿ ಡಾ||ಕವಿತಾ ರೆಡ್ಡಿರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಆಚಾರ್ಯ ಶ್ರೀ ಸ್ವಾಮಿ ರಾಕುಂಜೀರವರು ಮಾತನಾಡಿ ಮಕ್ಕಳು ದೇವರ ಸಮಾನ ಅವರಿಗೆ ಶಿಕ್ಷಣದ ಜೊತೆಯಲ್ಲಿ ಕಾನೂನಿ ಪರಿಪಾಲನೆ ಕುರಿತು ಅರಿವು ಮೂಡಿಸಬೇಕು. ಸಮಾಜದಲ್ಲಿ ಅನಾಮಧೇಯ ವ್ಯಕ್ತಿಗಳ ಕುರಿತು ಎಚ್ಚರಿಕೆಯಿಂದ ಇರಲು, ಸಂಕಷ್ಟದ ಸಮಯದಲ್ಲಿ ಪೊಲೀಸ್ ಅಧಿಕಾರಿಗಳ ಸಹಾಯ ಹೇಗೆ ಪಡೆಯಬೇಕು ಎಂಬುದು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಗೊತ್ತಿರಬೇಕು. ಮಕ್ಕಳ ಸುರಕ್ಷತೆ ಕಾನೂನು ಬಲಿಷ್ಠವಾಗಿದೆ. ಪ್ರತಿ ಮಕ್ಕಳು ಶಿಕ್ಷಣ, ಉದ್ಯೋಗ ಮತ್ತು ಆಶ್ರಯ ಪಡೆಯುವ ಹಕ್ಕು ಇದೆ ಎಂದು ಹೇಳಿದರು. ಬಿ.ಎನ್.ಎಸ್.ರೆಡ್ಡಿರವರು ಮಾತನಾಡಿ ಸಾರ್ವಜನಿಕರು ಮತ್ತು ಪೊಲೀಸ್ ನಡುವೆ ಜನಸ್ನೇಹಿಯಾಗಿರಬೇಕು. ಅಪರಾಧಗಳು ತಡೆಗಟ್ಟಲು ಜನರ ಸಹಕಾರ ಬೇಕು. ಮಕ್ಕಳ ಸುರಕ್ಷತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಕಠಿಣ ಕಾನೂನುಗಳು ರೂಪಿಸಿದೆ. ಮಕ್ಕಳ ಸುರಕ್ಷತೆ ಕಾನೂನಿನ ಕುರಿತು ಮಕ್ಕಳಿಗೆ ತಿಳಿಸಬೇಕು.

# ಮೋದಿ ನಾಯಕತ್ವದಲ್ಲಿ ಹೊಸ ವರ್ಷದಲ್ಲಿ ಮತ್ತಷ್ಟು ಮೈಲುಗಲ್ಲುಗಳ ಸಾಧನೆ : ಹೆಚ್ಡಿಕೆ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಹೊಸ ವರ್ಷದಲ್ಲಿ ಸಾಧನೆಯ ಮತ್ತಷ್ಟು ಮೈಲುಗಲ್ಲುಗಳನ್ನು ಸಾಧಿಸಲಿದೆ ಎಂಬ ಅಚಲ ವಿಶ್ವಾಸವನ್ನು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವ್ಯಕ್ತಪಡಿಸಿದ್ದಾರೆ. ಎಲ್ಲರಿಗೂ ಹೊಸ ವರುಷದ ಹಾರ್ದಿಕ ಶುಭಾಶಯಗಳನ್ನು ಕೋರಿರುವ ಅವರು, 2026ರ ವರ್ಷವು ಸರ್ವರಿಗೂ ಶುಭವನ್ನುಂಟು ಮಾಡಲಿ. ಎಲ್ಲರ ಮನ ಮನೆಗಳಲ್ಲಿ ಹಾಗೂ ಎಲ್ಲೆಡೆಯೂ ಸುಖ-ಸಂತೋಷ, ನೆಮದಿ-ಸಮೃದ್ಧಿ ನೆಲೆಸಲಿ ಎಂದು ಹಾರೈಸಿದ್ದಾರೆ. ಪ್ರಧಾನಮಂತ್ರಿಗಳ ನಿರ್ಣಾಯಕ ಮತ್ತು ದೂರದೃಷ್ಟಿಯ ನಾಯಕತ್ವದಲ್ಲಿ, ಭಾರತವು ನವವೇಗದೊಂದಿಗೆ ಪ್ರಗತಿ ಸಾಧಿಸುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಪರಿವರ್ತನಾತಕ ಬೆಳವಣಿಗೆಗೆ ರಾಷ್ಟ್ರವು ಸಾಕ್ಷಿಯಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವಾಲಯವು ಸ್ವದೇಶಿ ಉತ್ಪಾದನೆ ಬಲಪಡಿಸಲು, ಉಕ್ಕು ಉತ್ಪಾದನೆ ಸಾಮರ್ಥ್ಯ ವಿಸ್ತರಿಸಲು, ಶುದ್ಧ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಹಾಗೂ ಉದ್ಯೋಗವನ್ನು ಸೃಷ್ಟಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಇವೆಲ್ಲವೂ ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತದ ಪ್ರಮುಖ ಆಧಾರಸ್ತಂಭಗಳಾಗಿವೆ ಎಂದು ಅವರು ಹೇಳಿದ್ದಾರೆ.

# ಗುರುವಾರದಿಂದ ಅಂತರ ಸಾರಿಗೆ ನಿಗಮಗಳ ನೌಕರರ ವರ್ಗಾವಣೆ ಪ್ರಕ್ರಿಯೆ ಆರಂಭ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರವು ಗುರುವಾರದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ದರ್ಜೆ-3ರ ಮೇಲ್ವಿಚಾರಕೇತರ ಮತ್ತು ದರ್ಜೆ-4ರ ನೌಕರರಿಗೆ ಅಂತರ ನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸಿದೆ. 2026ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಯು ಗುರುವಾರ ಬೆಳಿಗ್ಗೆ 11 ಗಂಟೆಯಿಂದ ಪ್ರಾರಂಭವಾಗಿದ್ದು, ಜ.31ರ ಸಂಜೆ 5.30ರ ವರೆಗೆ ನಡೆಯಲಿದೆ. ವರ್ಗಾವಣೆಗೆ ಅರ್ಜಿ ಸಲ್ಲಿಸಲು ನೌಕರರಿಗೆ ಆನ್‌ಲೈನ್ ಮೂಲಕ ಅವಕಾಶ ನೀಡಲಾಗಿದೆ. ಸಾಮಾನು ವರ್ಗಾವಣೆ, ಪತಿ-ಪತ್ನಿ, ಶೇ.40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ವಿಕಲ ಚೇತನ ನೌಕರರು, ತೀವ್ರ ತರಹದ ಅನಾರೋಗ್ಯ ಹೊಂದಿರುವ ನೌಕರರು ಮತ್ತು ಪರಸ್ಪರ ವರ್ಗಾವಣೇಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿಯ ವರ್ಗಾವಣೆ ಸಮಿತಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್‌ಐವಿ, ಹೃದಯರೋಗ, ಕ್ಯಾನ್ಸರ್, ಸ್ಪೈನಲ್‌ಕಾರ್ಡ್, ಕಿಡ್ನಿ ವೈಫಲ್ಯ, ಮೆದುಳಿಗೆ ಸಂಬಂಧಿಸಿದ ರೋಗಗಳನ್ನು ತೀವ್ರ ತರಹದ ಅನಾರೋಗ್ಯವೆಂದು ಪರಿಗಣಿಸಲಾಗುತ್ತದೆ ಎಂದು ಹೇಳಿದೆ.

# ನೂತನ ವರ್ಷಕ್ಕೆ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದ ಸಹಸ್ರಾರು ಭಕ್ತರು

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್, ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಗುರುವಾರದ ಪ್ರಯುಕ್ತ ಅಭಿಷೇಕಾದಿ ಪೂಜೆಗಳು ನೆರವೇರಿತು, ವಿಶೇಷವಾಗಿ ಗುರುರಾಯರ ಬೃಂದಾವನಕ್ಕೆ ನವರತ್ನ ಕವಚದ ಅಲಂಕಾರ, ಪುಷ್ಪಾಲಂಕಾರ, ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂಭಾಗದಲ್ಲಿ ನೂತನವಾದ ನವರತ್ನದ ಗುರುರಾಯರ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು ಹಾಗೂ ಸ್ವರ್ಣ ಸಿಂಹಾಸನದಲ್ಲಿ ಶ್ರೀನಿವಾಸ ದೇವರ ವಿಗ್ರಹ ಮತ್ತು ಸ್ವರ್ಣ ತೊಟ್ಟಿಲಿನಲ್ಲಿ ಪ್ರಹ್ಲಾದ ರಾಜರ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು ಎಂದು ಶ್ರೀ ಪುರೋಹಿತರಾದ ಶ್ರೀ ನಂದಕಿಶೋರಾಚಾರ್ಯರು ತಿಳಿಸಿದರು.

ಈ ವಿಶೇಷವಾದ ಪೂಜೆಯಲ್ಲಿ ಹೊಸ ವರ್ಷದ ಅಂಗವಾಗಿ ಸಹಸ್ರಾರು ಭಕ್ತರು ಸನ್ನಿಧಿಗೆ ಆಗಮಿಸಿ ಗುರುರಾಯರಿಗೆ ದೀಪಗಳನ್ನು ಬೆಳಗಿಸುವ ಮೂಲಕ ಪ್ರಾರ್ಥನೆ, ಅರ್ಚನೆಯನ್ನು ಸಲ್ಲಿಸಿ ತೀರ್ಥ ಫಲ ಮಂತ್ರಾಕ್ಷತೆ ಅನ್ನಸಂತರ್ಪಣೆಯ ಮಹಾಪ್ರಸಾದವನ್ನು ಸ್ವೀಕರಿಸಿದ ಸಹಸ್ರಾರು ಭಕ್ತರು ಶ್ರೀ ರಾಘವೇಂದ್ರ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು, ರಾಯರ ದರ್ಶನಕ್ಕೆ ಆಗಮಿಸುವ ಪ್ರತಿಯೊಬ್ಬ ಭಕ್ತಾದಿಗಳಿಗೂ ಶ್ರೀಮಠದ ವತಿಯಿಂದ ಭಕ್ತರಿಗಾಗಿ ದರ್ಶನ ಪಡೆಯಲು ಪ್ರಸಾದ ಸ್ವೀಕರಿಸಲು ಸಾಲಾಗಿ ಬರಲು ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಿದ್ದರು. ಈ ವ್ಯವಸ್ಥೆಯನ್ನು ಕಂಡ ಭಕ್ತರೂ ಬಹಳ ಅತ್ಯಂತ ಸಂತೋಷವನ್ನು ವ್ಯಕ್ತಪಡಿಸುತ್ತಾ ಶ್ರೀ ಮಠದ ವ್ಯವಸ್ಥಾಪಕರಿಗೂ ಸಿಬ್ಬಂದಿಯವರೆಗೂ ಅಭಿನಂದನೆ ಸಲ್ಲಿಸಿದರು. ಪ್ರತಿ ಗುರುವಾರಕ್ಕಿಂತಲೂ ಹೆಚ್ಚಿನ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಭಕ್ತಿಯಲ್ಲಿ ಮಿಂದೆದ್ದರು. ಎಲ್ಲಿ ನೋಡಿದರೂ ಭಕ್ತರ ಜನ ಜಾತ್ರೆ, ಜಂಗುಳಿಯಿಂದ ತುಂಬಿತ್ತು ಪ್ರಕಾರದಲ್ಲಿ ಪೂಜಾ ಮಂದಿರದಲ್ಲಿ ಹೊರಭಾಗದ ಶ್ರೀ ಮಠದ ಮುಂಭಾಗದಲ್ಲಿ ಮತ್ತು ಅಕ್ಕ ಪಕ್ಕದ ಸುತ್ತಲಿನ ಹೊರ ಭಾಗದಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ರಾಯರ ಭಕ್ತರು ಆಗಮಿಸಿದ್ದರು. ಈ ಗುರುವಾರದ ಸೇವೆಯಲ್ಲಿ ಭಾಗವಹಿಸಿದ ಸಹಸ್ರಾರು ಪ್ರತಿಯೊಬ್ಬ ಭಕ್ತರಿಗೂ ಸೇವಾ ಕರ್ತೃಗಳಿಗೂ ಗುರುರಾಯರ ಅನುಗ್ರಹ ಸದಾಕಾಲ ಇರಲಿ ಎಂದು ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ಯರು ತಿಳಿಸಿದರು.


ಉದಯವಾಹಿನಿ ಚಿತ್ರ

# 2025ರಲ್ಲಿ ವಾಡಿಕೆಗಿಂತ ಶೇ.14ರಷ್ಟು ಹೆಚ್ಚು ಮಳೆ

• ಉದಯವಾಹಿನಿ, ಬೆಂಗಳೂರು

ಕಳೆದ 2025ನೇ ವರ್ಷದಲ್ಲಿ ರಾಜ್ಯದಲ್ಲಿ ವಾಡಿಕೆಗಿಂತ ಶೇ.14 ರಷ್ಟು ಹೆಚ್ಚು ಮಳೆಯಾಗಿದೆ. ಜನವರಿ 1ರಿಂದ ಡಿಸೆಂಬರ್ 31ರ ನಡುವಿನ ಅವಧಿಯಲ್ಲಿ ರಾಜ್ಯದ ವಾಡಿಕೆ ಮಳೆ ಪ್ರಮಾಣ 1153 ಮಿ.ಮೀ.ಆಗಿದ್ದು, ಕಳೆದ ಒಂದು ವರ್ಷದಲ್ಲಿ 1319 ಮಿ.ಮೀ.ನಷ್ಟು ಮಳೆಯಾಗಿದೆ. ಕಳೆದ ಎರಡು ವರ್ಷಗಳಿಂದ ಮುಂಗಾರು ಮಳೆಯು ವಾಡಿಕೆಗಿಂತ ಹೆಚ್ಚಾಗಿದ್ದು, ಪ್ರಮುಖ ಜಲಾಶಯಗಳ ನೀರಿನ ಕೊರತೆಯನ್ನು ನೀಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ರಾಜ್ಯ 14 ಪ್ರಮುಖ ಜಲಾಶಗಳಲ್ಲಿ ಪ್ರಸ್ತುತ ಶೇ.70ರಷ್ಟು ನೀರಿನ ಸಂಗ್ರಹವಿದೆ. ಎಲ್ಲಾ ಜಲಾಶಯಗಳಿಂದ ಒಟ್ಟು 895.07 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯವಿದ್ದು, 649.05 ಟಿಎಂಸಿ ಅಡಿ ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 731.34 ಟಿಎಂಸಿ ಅಡಿಯಷ್ಟು ನೀರಿತ್ತು.


ಉದಯವಾಹಿನಿ ಚಿತ್ರ

ಹಿಂಗಾರು ಮಳೆ ವಾಡಿಕೆಗಿಂತ ಕಡಿಮೆಯಾದ ಪರಿಣಾಮದಿಂದ ಕಳೆದ ವರ್ಷಕ್ಕಿಂತಲೂ ಜಲಾಶಯಗಳ ನೀರಿನ ಸಂಗ್ರಹದಲ್ಲಿ ಕಡಿಮೆ ಆಗಿದೆ. ಆದರೂ ಬೇಸಿಗೆಯಲ್ಲಿ ಕುಡಿಯುವ ನೀರು ಹಾಗೂ ಬೆಳೆಗಳಿಗೆ ನೀರಿನ ಅಭಾವ ಉಂಟಾಗುವ ಸಾಧ್ಯತೆ ವಿರಳ. 2025ರ ಜನವರಿ ಒಂದರಿಂದ ಡಿಸೆಂಬರ್ ಅಂತ್ಯದವರೆಗಿನ ಒಂದು ವರ್ಷದ ಅವಧಿಯಲ್ಲಿ ದಕ್ಷಿಣ ಒಳನಾಡಿನಲ್ಲಿ ಶೇ.4, ಉತ್ತರ ಒಳನಾಡಿನಲ್ಲಿ ಶೇ. 21, ಮಲೆನಾಡು ಭಾಗದಲ್ಲಿ ಶೇ.9, ಕರಾವಳಿ ಭಾಗದಲ್ಲಿ ಶೇ. 19ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.

# ಹೊಸ ವರ್ಷದ ದಿನ; ದೇವಾಲಯಗಳಿಗೆ ಹರಿದು ಬಂದ ಭಕ್ತ ಸಾಗರ

• ಉದಯವಾಹಿನಿ, ಬೆಂಗಳೂರು

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಗುರುವಾರ ಬೆಂಗಳೂರು ಸೇರಿದಂತೆ ವಿವಿಧ ದೇವಾಲಯಗಳಿಗೆ ಭಕ್ತರ ದಂಡೇ ಹರಿದುಬಂದಿತ್ತು. ರಾಜ್ಯಾದ್ಯಂತ ಸಂಭ್ರಮದಿಂದ ಹೊಸ ವರ್ಷವನ್ನು ಬರಮಾಡಿಕೊಂಡಿದ್ದು, ವರ್ಷದ ಮೊದಲ ದಿನವಾದ ಬೆಳಗ್ಗೆ ಜನರು ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿ 2025ರ ಕಹಿ ನೆನಪುಗಳು ಮರೆಯಾಗಿ ಹೊಸ ವರ್ಷ ಸುಖ, ಶಾಂತಿ, ನೆಮದಿ, ಸಂಪತ್ತು ಕರುಣಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದ ದೃಶ್ಯಗಳು ಸಾಮಾನ್ಯವಾಗಿದ್ದವು. ಇಂದು ಮುಂಜಾನೆಯಿಂದಲೇ ದೇವಾಲಯಗಳಲ್ಲಿ ಅಭಿಷೇಕ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಹೂವಿನ ಅಲಂಕಾರದೊಂದಿಗೆ ಧಾರ್ಮಿಕ ಕಾರ್ಯಗಳು ನೆರವೇರಿದವು.


ಉದಯವಾಹಿನಿ ಚಿತ್ರ

ಬೆಂಗಳೂರಿನ ಐತಿಹಾಸಿಕ ದೇವಾಲಯಗಳಾದ ಗವಿಗಂಗಾಧರೇಶ್ವರ, ಮಲ್ಲೇಶ್ವರದ ಕಾಡುಮಲ್ಲೇಶ್ವರ, ಮೈಸೂರು ರಸ್ತೆಯ ಗಾಳಿ ಆಂಜನೇಯ, ರಾಜಾಜಿನಗರ ಶ್ರೀರಾಮಮಂದಿರ, ಸಾಯಿಬಾಬಾ ದೇಗುಲ, ವಿಜಯನಗರ ಮಾರುತಿ ಬಂಡೆ ದೇವಾಲಯ, ಬನಶಂಕರಿ, ಆರ್‌ಆರ್‌ನಗರದ ರಾಜರಾಜೇಶ್ವರಿ ದೇವಾಲಯ, ಜ್ಞಾನಭಾರತಿ ಆವರಣದಲ್ಲಿರುವ ವಿಘ್ನೇಶ್ವರ ದೇವಾಲಯ, ಗುಟ್ಟಳ್ಳಿ ಆಂಜನೇಯ ದೇವಾಲಯ ಮತ್ತಿತರ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು.

ಭಕ್ತರು ಸಹ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅದೇ ರೀತಿ ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ನಂಜುಂಡೇಶ್ವರ ದೇವಾಲಯ, ಚಿಕ್ಕಬಳ್ಳಾಪುರ ಜಿಲ್ಲೆಯ ಭೋಗನಂದೀಶ್ವರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿವಗಂಗೆ, ಯಡಿಯೂರು ಸಿದ್ದಲಿಂಗೇಶ್ವರ, ಗೊರವನಹಳ್ಳಿಯ ಮಹಾಲಕ್ಷ್ಮಿ ದೇವಾಲಯಗಳಲ್ಲಿ ಸಹ ಪೂಜೆಗಳು ನೆರವೇರಿದವು.

# ಕರ್ನಾಟಕದಲ್ಲಿ 2026ರಲ್ಲಿ ನಡೆಯಲಿದೆ ಬೃಹತ್ ನೇಮಕಾತಿ


## ಹೊಸ ವರ್ಷಕ್ಕೆ ಸರ್ಕಾರದಿಂದ ಸಿಹಿ ಸುದ್ದಿ. 56,000ಕ್ಕೂ ಹೆಚ್ಚು ಹುದ್ದೆಗಳ ಭರ್ತಿಗೆ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಹೊಸ 2026ರ ಆರಂಭದಲ್ಲೇ ಸರ್ಕಾರ ಉದ್ಯೋಗ ಆಕಾಂಕ್ಷಿಗಳಿಗೆ ಸಿಹಿ ಸುದ್ದಿ ನೀಡಿದೆ. ಹೊಸ ವರ್ಷವು ಸರ್ಕಾರಿ ನೇಮಕಾತಿಯಲ್ಲಿ ದೊಡ್ಡ ಬದಲಾವಣೆಯನ್ನು ತರುವ ನಿರೀಕ್ಷೆಯಿದೆ. ಮೊದಲ ವರ್ಷದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಭರವಸೆ ನೀಡಿದ್ದ ಆಡಳಿತ ಈಗ ಮಹತ್ವದ ನೇಮಕಾತಿ ಪ್ರಕ್ರಿಯೆಗೆ ಸಿದ್ಧತೆ ನಡೆಸಿದೆ. ಸರ್ಕಾರ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಿದ್ದೇ ಆದಲ್ಲಿ, ಹೊಸ ವರ್ಷದ ಆರಂಭದಲ್ಲಿ 24,300 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಲಿದೆ.

- **2026ರ ಆರಂಭದಲ್ಲಿ ಸರ್ಕಾರವು ಒಟ್ಟು 24,300 ಹುದ್ದೆಗಳ ಭರ್ತಿಗೆ ಚಾಲನೆ ನೀಡಲು ಆರ್ಥಿಕ ಇಲಾಖೆಯಿಂದ ಹಸಿರು ನಿಶಾನೆ**
- **ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಅಡಿಯಲ್ಲಿ ಖಾಲಿ ಇರುವ 32,132 ಹುದ್ದೆಗಳನ್ನು ವಿಶೇಷವಾಗಿ ಭರ್ತಿ ಮಾಡಲು ಕ್ರಮ**
- **ಶಾಲಾ ಶಿಕ್ಷಣ ಇಲಾಖೆಯಲ್ಲಿ 79,694 ಹಾಗೂ ಆರೋಗ್ಯ ಇಲಾಖೆಯಲ್ಲಿ 37,572 ಹುದ್ದೆಗಳು ಖಾಲಿ, ಇವುಗಳ ಭರ್ತಿಗೆ ಮೊದಲ ಆದ್ಯತೆ**

ಮುಖ್ಯಮಂತ್ರಿಗಳು ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿ, ಆಂತರಿಕ ಮೀಸಲಾತಿಯ ಅನುಷ್ಠಾನದಿಂದ ಉಂಟಾದ ವಿಳಂಬದಿಂದಾಗಿ ಪ್ರಕ್ರಿಯೆ ನಿಧಾನವಾಗಿತ್ತು, ಆದರೆ ಈಗ ಹಂತ ಹಂತದ ನೇಮಕಾತಿ ಮತ್ತೆ ಹಾದಿಗೆ ಮರಳಿದೆ ಎಂದು ತಿಳಿಸಿದ್ದಾರೆ. ಹಣಕಾಸು ಇಲಾಖೆಯು ಈಗಾಗಲೇ ಮೊದಲ ಹಂತದಲ್ಲಿ 24,300 ಹುದ್ದೆಗಳಿಗೆ ಅನುಮೋದನೆ ನೀಡಿದೆ. ಇದರ ಜೊತೆಗೆ, ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ 32,132 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.



**ಭರ್ಜರಿ ಗುಡ್ ನ್ಯೂಸ್**

**2026ರ ಹೊಸ ವರ್ಷದ ಹೊಸ್ತಿಲಲ್ಲೇ, ಉದ್ಯೋಗ ಹುಡುಕುತ್ತಿರುವವರಿಗೆ ಭರ್ಜರಿ ಗುಡ್ ನ್ಯೂಸ್! ರಾಜ್ಯ ಸರ್ಕಾರ ಬರೋಬ್ಬರಿ 24,300 ಹುದ್ದೆಗಳಿಗೆ ನೇಮಕಾತಿ ಅಖಾಡಕ್ಕೆ ಇಳಿಯಲಿದೆ. ಹಣಕಾಸು ಇಲಾಖೆ ಹಸಿರು ನಿಶಾನೆ ತೋರಿದ್ದು, ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆ ನೀಗಿಸಲು ವಿಶೇಷ ಗಮನ ಹರಿಸಲಾಗುತ್ತಿದೆ. ಕರ್ನಾಟಕದಾದ್ಯಂತ ದೊಡ್ಡ ಮಟ್ಟದ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ.**

**ಯಾವಯಾವ ಹುದ್ದೆಗಳು ಭರ್ತಿ:** ಕರ್ನಾಟಕದಲ್ಲಿ ಒಟ್ಟು 2,84,881 ಖಾಲಿ ಹುದ್ದೆಗಳಿವೆ. ಇವುಗಳಲ್ಲಿ 96,844 ಹುದ್ದೆಗಳನ್ನು ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಭರ್ತಿ ಮಾಡಲಾಗಿದೆ. ಉಳಿದ 1,88,037 ಹುದ್ದೆಗಳಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕಾರ್ಯೋನ್ಮುಖವಾಗಿದೆ. ಕಳೆದ ಮೂರು ವರ್ಷಗಳಲ್ಲಿ, 562 ಗ್ರೂಪ್ ಎ, 619 ಗ್ರೂಪ್ ಬಿ, 23,119 ಗ್ರೂಪ್ ಸಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ನೀಡಲಾಗಿದೆ. ವಿವಿಧ ನೇಮಕಾತಿ ಪ್ರಾಧಿಕಾರಗಳ ಮೂಲಕ 8,157 ನೇಮಕಾತಿಗಳು ಪೂರ್ಣಗೊಂಡಿವೆ ಮತ್ತು 3,081 ಪ್ರಗತಿಯಲ್ಲಿವೆ.

**ಶಿಕ್ಷಣ ಇಲಾಖೆಯಲ್ಲಿ ಹೆಚ್ಚು ಹುದ್ದೆಗಳು ಖಾಲಿ:** ಅತಿ ಹೆಚ್ಚು ಖಾಲಿ ಹುದ್ದೆಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿವೆ, ಅವುಗಳ ಸಂಖ್ಯೆ 79,694. ನಂತರ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ 37,572, ನಗರಾಭಿವೃದ್ಧಿಯಲ್ಲಿ 28,188, ಉನ್ನತ ಶಿಕ್ಷಣದಲ್ಲಿ 13,599, ಕಂದಾಯ ಇಲಾಖೆಯಲ್ಲಿ 10,867, ಪಶುಸಂಗೋಪನೆಯಲ್ಲಿ 11,020, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನಲ್ಲಿ 10,504, ಪರಿಶಿಷ್ಟ ಜಾತಿಗಳ ಕಲ್ಯಾಣದಲ್ಲಿ 9,646 ಮತ್ತು ಹಿಂದುಳಿದ ವರ್ಗಗಳ ಕಲ್ಯಾಣದಲ್ಲಿ 8,525 ಹುದ್ದೆಗಳು ಖಾಲಿ ಇವೆ. ಒಂದು ವೇಳೆ ನೇಮಕ ಪ್ರಕ್ರಿಯೆಗಳು ಅಂದುಕೊಂಡಂತೆ ನಡೆದರೆ, ಕರ್ನಾಟಕವು 2026 ಅನ್ನು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಸಕ್ರಿಯ ನೇಮಕಾತಿ ಅಭಿಯಾನದೊಂದಿಗೆ ಪ್ರಾರಂಭಿಸಬಹುದು, ಇದು ಪ್ರಮುಖ ಸಾರ್ವಜನಿಕ ಸೇವಾ ವಲಯಗಳಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಲು ಕಾಲಮಿತಿಯನ್ನು ನಿಗದಿಪಡಿಸುತ್ತದೆ.

### ವೈದ್ಯರ ನೇಮಕಾತಿಗೆ ಹೆಚ್ಚಿನ ಆದ್ಯತೆ

**2026ರ ಆರಂಭಿಕ ತಿಂಗಳುಗಳಲ್ಲಿ ಆರೋಗ್ಯ ಸೇವೆಗಳ ಮೇಲೆ ಹೆಚ್ಚಿನ ಗಮನ ನೀಡಲಾಗುವುದು. 3,000 ವೈದ್ಯರ ಹುದ್ದೆಗಳಲ್ಲಿ, 1,500 ಹುದ್ದೆಗಳನ್ನು ಈ ವರ್ಷ ಭರ್ತಿ ಮಾಡಲಾಗುವುದು. 800 ವೈದ್ಯರ ನೇಮಕಾತಿ ಪೂರ್ಣಗೊಂಡಿದ್ದು, ಅವರಿಗೆ ಕೌನ್ಸೆಲಿಂಗ್ ಮೂಲಕ ಪೋಸ್ಟಿಂಗ್ ಗಳನ್ನು ನೀಡಲಾಗುವುದು. ತಕ್ಷಣದ ಅಗತ್ಯಗಳನ್ನು ಪೂರೈಸಲು ಸರ್ಕಾರವು 337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುತ್ತಿದೆ.**

# ಕಲ್ಲಿನಲ್ಲಿ ದೇವರನ್ನು ಕಂಡ ಮಹಾನ್ ಶಿಲ್ಪಿ ಜಕಣಾಚಾರಿ

## ■ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನ ಆಚರಣೆ : ಸಾಧಕರಿಗೆ ಸನ್ಮಾನ

• ಉದಯವಾಹಿನಿ, ಗುಂಡ್ಲುಪೇಟೆ

ಕಲ್ಲಿನಲ್ಲಿ ದೇವರನ್ನು ಕಂಡ ಮಹಾನ್ ಶಿಲ್ಪಿ ಜಕಣಾಚಾರಿ ಎಂದು ಮುಖ್ಯ ಶಿಕ್ಷಕ ವೆಂಕಟಾಚಲಚಾರಿ ತಿಳಿಸಿದರು. ಪಟ್ಟಣದ ತಾಲ್ಲೂಕು ಕಚೇರಿ ಸಭಾ ಭವನದಲ್ಲಿ ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಶ್ರೀವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಕರಣಾ ಆಚರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೇಲೂರು, ಹಳೇಬೀಡು, ಸೋಮನಾಥಪುರ ದೇವಾಲಯ ಸೇರಿದಂತೆ ಹಲವಾರು ದೇವಸ್ಥಾನಗಳನ್ನು ಕೆತ್ತನೆ ಮಾಡಿ ಮೂಕವಾಗಿದ್ದ ಕಲ್ಲಿಗೆ ಜಕಣಾಚಾರಿ ಜೀವ ನೀಡಿದ್ದಾರೆ. ಜೊತೆಗೆ ಕಲೆಗೆ ತನ್ನ ಕೈಯನ್ನು ಸಹ ಕಳೆದುಕೊಂಡ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

**ಕಲೆಗೆ ತನ್ನ ಕೈಯನ್ನು ಕಳೆದುಕೊಂಡ ಮಹಾನ್ ವ್ಯಕ್ತಿ**

12ನೇ ಶತಮಾನದಲ್ಲಿ ಕಲ್ಲನ್ನು ಸುಂದರವಾಗಿ ಕೆತ್ತನೆ ಮಾಡಿ ಯಾವ ಕಲ್ಲು ಯಾವ ವಿಗ್ರಹ ಕೆತ್ತನೆ ಮಾಡಬಹುದು ಎನ್ನುವಷ್ಟು ಕಲ್ಲಿನ ಗುಣಾತ್ಮಕ ಶಕ್ತಿ ಗ್ರಹಿಸುವಷ್ಟು ನಿಪುಣರಾಗಿದ್ದ ಜಕಣಾಚಾರಿ ವಿಗ್ರಹದಲ್ಲಿ ಕೂದಲು, ಉಗುರನ್ನು ಸಹ ಕೆತ್ತನೆ ಮಾಡುವಷ್ಟು ಕಲಾ ನೈಪುಣ್ಯತೆ ಹೊಂದಿದ್ದರು. ಬೇಲೂರಿನಲ್ಲಿ ಚೆನ್ನಿಗರಾಯ ಮೂರ್ತಿಯನ್ನು ಕೆತ್ತನೆಯ ಸಮಯದಲ್ಲಿ ತಂದೆಯನ್ನು ಹುಡುಕುತ್ತ ಬರುತ್ತಾನೆ. ಡಕಣಾಚಾರಿಯು ಜಕಣಾಚಾರಿಯೇ ತನ್ನ ತಂದೆ ಎಂದು ತಿಳಿಯದೇ ಚೆನ್ನಿಗರಾಯಮೂರ್ತಿ ಕಡೆಯುತ್ತಿರುವ ಶಿಲೆಯಲ್ಲಿ ದೋಷವಿದೆ ಎಂದು ಸವಾಲು ಹಾಕುತ್ತಾನೆ.


ಉದಯವಾಹಿನಿ ಚಿತ್ರ

> ಮಗನಿಂದಲೇ ಈ ರೀತಿ ಅವಮಾನಿತನಾದ ಖ್ಯಾತ ಶಿಲ್ಪಿ ಜಕಣಾಚಾರಿ ತನ್ನ ಬಲಗೈಯನ್ನೇ ಕತ್ತರಿಸಿಕೊಳ್ಳುತ್ತಾನೆ. ನಂತರದಲ್ಲಿ ತನ್ನ ಜನ್ಮ ಸ್ಥಳವಾದ ಕ್ರೀಡಾಪುರದಲ್ಲಿ ಎಡಗೈಯಲ್ಲಿ ಚೆನ್ನಿಗರಾಯನ ದೇವಾಲಯ ನಿರ್ಮಿಸಿದಾಗ ಜಕಣಾಚಾರಿಗೆ ಮತ್ತೆ ಕೈ ಬಂತು, ಹೀಗಾಗಿ ಕೈ ದಾಳವೆಂದು ಎಂದು ಪ್ರಸಿದ್ದಿಯಾಯಿತು, ಸಮುದಾಯದ ಅಭಿವೃದ್ಧಿಗೆ ಸಂಘಟನೆ ಬಹುಮುಖ್ಯವಾಗಿದೆ. ಆದ್ದರಿಂದ ಎಲ್ಲರು ಸಂಘಟಿತರಾಗಬೇಕು. ಸಮಾಜದ ಕೆಲವು ಮಂದಿ ತಮ್ಮ ಮೂಲ ಕೆಲಸಕ್ಕೆ ಮಕ್ಕಳನ್ನು ಬಳಕೆ ಮಾಡಿಕೊಳ್ಳದೆ ವಿದ್ಯಾಭ್ಯಾಸ ಕೊಡಿಸಬೇಕು. ಸರ್ಕಾರವೂ ಕೂಡ ವಿಶ್ವಕರ್ಮ ಸಮುದಾಯಕ್ಕೆ ಸೌಲಭ್ಯಗಳನ್ನು ನೀಡುತ್ತಿದ್ದು, ಅದನ್ನು ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕು.
>
> – ವೆಂಕಟಾಚಲಚಾರಿ, ಮುಖ್ಯ ಶಿಕ್ಷಕ

ಅದರಂತೆ ಇಬ್ಬರ ನಡುವೆ ಸವಾಲು ಏರ್ಪಟ್ಟು ಜಕಣಾಚಾರಿಯು ನೀನು ಹೇಳಿದ್ದೇ ನಿಜವಾಗಿದ್ದು, ಮೂರ್ತಿಯಲ್ಲಿ ದೋಷವಿದ್ದರೆ ನಾನು ನನ್ನ ಬಲ ಕೈಯನ್ನು ಕತ್ತರಿಸುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾನೆ. ಆಗ ಅಲ್ಲಿನ ರಾಜರೆದುರು ಮೂರ್ತಿಯ ಪರೀಕ್ಷೆ ನಡೆಯುತ್ತದೆ.

ಚೆನ್ನಿಗರಾಯ ಶಿಲ್ಪದ ಹೊಟ್ಟೆಯ ಭಾಗದಲ್ಲಿ ಉಳಿಯಿಂದ ಹೊಡೆದಾಗ, ಆ ಭಾಗ ಒಡೆದು ಅದರಿಂದ ಕಪ್ಪೆಯೊಂದು ಹೊರ ಬರುತ್ತದೆ. ಹೀಗಾಗಿ ಈ ದೇವಾಲಯದಲ್ಲಿರುವ ದೇವರನ್ನು ಕಪ್ಪೆ ಚೆನ್ನಿಗರಾಯ ಎಂದು ಕರೆಯುತ್ತಾರೆ ಎಂದು ತಿಳಿಸಿದರು. ಈ ವೇಳೆ ಕಬ್ಬಹಳ್ಳಿ ಬಂಗಾರಚಾರಿ, ಹಂಗಳ ಸುರೇಶಚಾರಿ, ಶ್ರೀನಿವಾಸಚಾರಿ, ಪ್ರಕಾಶಚಾರಿ, ಶಿವರಾಜ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗ್ರೇಡ್–2 ತಹಶೀಲ್ದಾರ್ ಜಯಪ್ರಕಾಶ್, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಷಣ್ಮುಗಂ, ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್.ಸ್ವಾಮಿ, ಸಿಡಿಪಿಓ ಹೇಮಾವತಿ, ಹಿರಿಯ ಹೋರಾಟಗಾರ ಬ್ರಹ್ಮಾನಂದ, ಮೂಖಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಹದೇವಚಾರಿ, ಹಂಗಳ ಪುಟ್ಟಚಾರಿ, ರತ್ನಮ್ಮ, ಕಬ್ಬಹಳ್ಳಿ ಮಹೇಶ್, ಸೌಭಾಗ್ಯ, ಶ್ರೀಕಂಠಚಾರ್ ಸೇರಿದಂತೆ ಇತರರು ಹಾಜರಿದ್ದರು.

# ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ನಿರ್ಮಲಾನಂದನಾಥ ಸ್ವಾಮೀಜಿ ಭೇಟಿ

• ಉದಯವಾಹಿನಿ, ಚಿಂತಾಮಣಿ

ನಗರದ ಹೊರವಲಯದ ಬೆಂಗಳೂರು ರಸ್ತೆಯಿಂದ ಕೈಲಾಸಗಿರಿಗೆ ಹೋಗುವ ರಸ್ತೆಯ ಪಕ್ಕದ ಗುಡ್ಡದ ಮೇಲೆ 1.49 ಕೋಟಿ ವೆಚ್ಚದಲ್ಲಿ ಎಂಜಿನಿಯರಿಂಗ್ ಕಾಲೇಜಿನ ಕಟ್ಟಡ ಕಾಮಗಾರಿ ಭರದಿಂದ ನಡೆಯುತ್ತಿರುವ ಬೆನ್ನಲ್ಲೇ, ವೈದ್ಯಕೀಯ ಕಾಲೇಜು ಸ್ಥಾಪನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಕಾರ್ಯ ಪ್ರವೃತ್ತರಾಗಿದ್ದಾರೆ. ಈ ನಿಟ್ಟಿನಲ್ಲಿ ಈಗಾಗಲೇ ವೈದ್ಯಕೀಯ ಕಾಲೇಜು ನಡೆಸುತ್ತಿರುವ ಅನೇಕ ಸಂಘ ಸಂಸ್ಥೆಗಳನ್ನು ಅವರು ಸಂಪರ್ಕಿಸುತ್ತಿದ್ದಾರೆ. ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ನಗರದ ಸರ್ಕಾರಿ ಆಸ್ಪತ್ರೆಗೆ ಸಚಿವ ಡಾ.ಎಂ.ಸಿ. ಸುಧಾಕರ್ ಅವರೊಂದಿಗೆ ಭೇಟಿ ನೀಡಿ, ಎಲ್ಲಾ ವಿಭಾಗಗಳನ್ನು ವೀಕ್ಷಿಸಿದರು.


ಉದಯವಾಹಿನಿ ಚಿತ್ರ

100 ಹಾಸಿಗೆಗಳ ಸರ್ಕಾರಿ ಆಸ್ಪತ್ರೆಯನ್ನು 250 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಯೋಜನೆ ರೂಪಿಸಿ ಕಾಮಗಾರಿ ಆರಂಭಿಸಲಾಗಿದೆ. ಆಸ್ಪತ್ರೆ ಸಮೀಪ ಇದ್ದ ಲೋಕೋಪಯೋಗಿ ಇಲಾಖೆ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಆ ಜಾಗದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಆಸ್ಪತ್ರೆ ಸ್ಥಾಪಿಸಲಾಗಿದೆ.

ಅದರಲ್ಲಿ ಸುಮಾರು 250 ಹಾಸಿಗೆಗಳ ಸೌಲಭ್ಯ ಕಲ್ಪಿಸಲು ಅವಕಾಶವಿದೆ ಆಸ್ಪತ್ರೆಯನ್ನು ಅತ್ಯಾಧುನಿಕ ಕಾರ್ಪೋರೇಟ್ ಶೈಲಿಯಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ತಿಳಿಸಿದರು.

ವೈದ್ಯಕೀಯ ಕಾಲೇಜು ಸ್ಥಾಪನೆಗೆ 15–20 ಎಕರೆ ಜಾಗ ಗುರುತಿಸಲಾಗಿದೆ. ವೈದ್ಯಕೀಯ ಕಾಲೇಜು ಸ್ಥಾಪನೆಗೆ ಹಲವರೊಂದಿಗೆ ಸಂಪರ್ಕದಲ್ಲಿದ್ದೇನೆ. ನಗರದ ಸರ್ಕಾರಿ ಆಸ್ಪತ್ರೆಯನ್ನು ವೈದ್ಯಕೀಯ ಕಾಲೇಜು ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು. ವೈದ್ಯಕೀಯ ಶಿಕ್ಷಣ ಸಚಿವರ ಜೊತೆಗೂ ಈಗಾಗಲೇ ಮಾತನಾಡಿದ್ದೇನೆ ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ಇತ್ತೀಚೆಗೆ ಹೇಳಿದ್ದರು.

# ಜಿ.ಪಂ ಮಾಜಿ ಅಧ್ಯಕ್ಷ ಮುನೇಗೌಡ ವಿರುದ್ಧ ಬಿಜೆಪಿ ಟೀಂ ಆಕ್ರೋಶ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಸಂಸದ ಡಾ.ಕೆ.ಸುಧಾಕರ್ ವಿರುದ್ಧ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮುನೇಗೌಡ ಟೀಕೆಗೆ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಮರಳುಕುಂಟೆ ಕೃಷ್ಣಮೂರ್ತಿ, ಡಾ.ಕೆ.ಸುಧಾಕರ್ ಶಾಸಕ ಮತ್ತು ಸಚಿವರಾಗಿದ್ದ ವೇಳೆ ಹಲವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದರು ಮುನೇಗೌಡ ಆರೋಪಿಸಿದ್ದಾರೆ. ನಮ್ಮ ನಾಯಕ ಸುಧಾಕರ್ ಅವರು ಈ ಕೆಲಸ ಮಾಡಿಸಿಲ್ಲ ಎಂದರು. ಕೆಲವು ಮುಖಂಡರು ವೈಯಕ್ತಿಕ ಕಾರಣದಿಂದ ಈ ಕೆಲಸ ಮಾಡಿಸಿರಬಹುದು. ನಮ್ಮ ನಾಯಕರು ಪ್ರಕರಣಗಳನ್ನು ದಾಖಲಿಸಿಲ್ಲ ಎಂದು ಹೇಳಿದರು.

ಪೆರೇಸಂದ್ರ ಕಾರ್ಯಕ್ರಮದಲ್ಲಿ ಡಾ.ಕೆ ಸುಧಾಕರ್ ಅವರ ಬಗ್ಗೆ ಮುನೇಗೌಡ ಕೆಟ್ಟದಾಗಿ ಮಾತನಾಡಿದ್ದಾರೆ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ 70 ವರ್ಷದಲ್ಲಿ ಆಗದ ಕೆಲಸಗಳನ್ನು 10 ವರ್ಷದಲ್ಲಿ ಸುಧಾಕರ್ ಅವರು ಮಾಡಿಸಿದ್ದಾರೆ ಎಂದರು.

ವೈದ್ಯಕೀಯ ಶಿಕ್ಷಣ ಕಾಲೇಜು, ಪ್ರತಿ ಹೋಬಳಿ ಕೇಂದ್ರದಲ್ಲಿ ಉತ್ತಮ ಆಸ್ಪತ್ರೆ, ಗೌರಿಬಿದನೂರು ರಸ್ತೆ ಅಭಿವೃದ್ಧಿ ಸೇರಿದಂತೆ ಸುಮಾರು 5 ಸಾವಿರ ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಇದು ಮುನೇಗೌಡ ಅವರಿಗೆ ಗೊತ್ತಿಲ್ಲವೇ ಎಂದರು.


ಉದಯವಾಹಿನಿ ಚಿತ್ರ

**5 ಸಾವಿರ ಕೋಟಿ ವೆಚ್ಚದಲ್ಲಿ ಅಭಿವೃದ್ಧಿ**

ಬಚ್ಚೇಗೌಡ ಅವರು ಶಾಸಕರಾಗಿದ್ದ ವೇಳೆ ಇವರನ್ನು ಜಿ.ಪಂ ಅಧ್ಯಕ್ಷರನ್ನಾಗಿ ಮಾಡಿದರು. ಮುನೇಗೌಡ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ತಕ್ಷಣ ಬಚ್ಚೇಗೌಡರ ವಿರುದ್ಧ ಏಕವಚನದಲ್ಲಿ ಮಾತನಾಡಿದ್ದರು. ಆದರೆ ಈಗ ಮತ್ತೆ ಅವರ ಕಾಲು ಹಿಡಿದಿದ್ದಾರೆ ಎಂದರು.

ಪ್ರದೀಪ್ ಈಶ್ವರ್‌ಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಕಾಂಗ್ರೆಸ್ ಸೇರಿದರು. ಬಿಜೆಪಿಗೆ ಬಂದು ನಮ್ಮಲ್ಲಿಯೂ ಎರಡು ಬಣಗಳನ್ನು ಮಾಡಿದರು. ಈಗ ಕಾಂಗ್ರೆಸ್‌ಗೆ ಕಾಲಿಟ್ಟ ಸ್ವಲ್ಪ ದಿನದಲ್ಲಿಯೇ ಅಲ್ಲಿಯೂ ಎರಡು ಬಣ ಮಾಡಿದ್ದಾರೆ ಎಂದು ಹೇಳಿದರು. ಮುನೇಗೌಡ ದಿಟ್ಟೂರು ವಿಎಸ್‌ಎಸ್ಎನ್ ಅಧ್ಯಕ್ಷರಾಗಿದ್ದಾರೆ. ಕಚೇರಿಯ ಬೀಗ ಮುರಿದು ತಮಗೆ ಬೇಕಾದ ರೀತಿಯಲ್ಲಿ ರೆಜುಲೂಷನ್ ಮಾಡಿಸಿ ಕೊಂಡಿದ್ದಾರೆ. ಈ ಬಗ್ಗೆ ನಾವು ದೂರು ನೀಡಿದರೆ ಗ್ರಾಮಾಂತರ ಠಾಣೆಯ ಪಿಎಸ್ಐ ಪ್ರಕರಣ ದಾಖಲಿಸಲಿಲ್ಲ. ನಾವು ಮೇಲಧಿಕಾರಿಗಳ ಬಳಿಗೆ ಹೋದ ನಂತರ ದೂರು ಪಡೆದರು ಎಂದು ಹೇಳಿದರು. ಮುನೇಗೌಡ ಯಾವ ಪಕ್ಷಕ್ಕೆ ಹೋದರೂ ಆ ಪಕ್ಷದ ಅಭ್ಯರ್ಥಿಗಳು ಸೋಲುತ್ತಾರೆ. ಪ್ರದೀಪ್ ಈಶ್ವರ್ ಜೊತೆಯಲ್ಲಿಯೂ ಹೆಚ್ಚು ದಿನ ಇರುವುದಿಲ್ಲ ಎಂದರು. ಟಿಎಪಿಸಿಎಂಎಸ್ ಅಧ್ಯಕ್ಷ ಅವುಲಕೊಂಡರಾಯಪ್ಪ ಮಾತನಾಡಿ, ಮುನೇಗೌಡ ತಮ್ಮ ವರ್ತನೆ ಬದಲಿಸಿಕೊಳ್ಳದಿದ್ದರೆ ಅವರ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದರು.

# ಶಿರಾ: ಹುಯಿಲ್ ದೊರೆ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟನೆ

• ಉದಯವಾಹಿನಿ, ಶಿರಾ:

ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರ ಏನಾದರೂ ಹೆಸರು ಇಟ್ಟುಕೊಳ್ಳಲಿ ಅದರೆ ಅದರ ಮಹತ್ವವನ್ನು ಕೇಂದ್ರ ಸರ್ಕಾರ ಅರಿತು ಕೆಲಸ ಮಾಡಬೇಕು ಎಂದು ಶಾಸಕ ಟಿ.ಬಿ.ಜಯಚಂದ್ರ ಹೇಳಿದರು. ತಾಲ್ಲೂಕಿನ ಹುಯಿಲ್ ದೊರೆ ಗ್ರಾಮದಲ್ಲಿ ನೂತನ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಸಹಭಾಗಿತ್ವದ ಜಲಜೀವನ್ ಮನೆ ಮನೆ ಗಂಗೆ ಯೋಜನೆಗೆ ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡದೆ ಯೋಜನೆಯನ್ನು ಹಳ್ಳ ಹಿಡಿಸಿದ್ದಾರೆ. ಈಗ ಉದ್ಯೋಗ ಖಾತ್ರಿ ಯೋಜನೆಯನ್ನು ಹಳ್ಳ ಹಿಡಿಸುವ ಕೆಲಸ ಮಾಡಲು ಹೊರಟಿದ್ದು ಈ ಬಗ್ಗೆ ಎಲ್ಲರೂ ಎಚ್ಚರ ವಹಿಸಬೇಕು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು 5300 ಕೋಟಿ ಅನುದಾನ ನೀಡುವುದಾಗಿ ಕೇಂದ್ರ ಸರ್ಕಾರ ಹೇಳಿದ್ದು ಇದುವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಯೋಜನೆ ಜಾರಿಯಾದರೆ ಮಾತ್ರ ಶಿರಾ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಭಿವೃದ್ಧಿಯಾಗುವುದು ಎಂದರು. ಚಿಕ್ಕನಾಯಕನಹಳ್ಳಿ ಕ್ಷೇತ್ರದ ಶಾಸಕ ಸಿ.ಬಿ.ಸುರೇಶ್ ಬಾಬು ಮಾತನಾಡಿ, ಚಿಕ್ಕನಾಯಕನಹಳ್ಳಿ ಕ್ಷೇತ್ರಕ್ಕೆ ಬಂದ ಅನುದಾನದಲ್ಲಿ ಬುಕ್ಕಾಪಟ್ಟಣ ಹೋಬಳಿಗೆ ಹೆಚ್ಚು ಅನುದಾನ ನೀಡಲಾಗಿದೆ. ಹಿಂದೆ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಅರ್ಜಿ ಹಿಡಿದುಕೊಂಡು ಕೇಂದ್ರದ ಬಳಿ ಹೋಗದೆ 29 ಸಾವಿರ ಕೋಟಿ ಸಾಲ ಮನ್ನಾ ಮಾಡಿದರು. ಆದರೆ ಈಗ ಬಿಟ್ಟಿ ಭಾಗ್ಯಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಜನಪರ ಕಾಳಜಿ ಹೊಂದಿರುವ ಶಾಸಕ ಟಿ.ಬಿ.ಜಯಚಂದ್ರ ಅವರು ಇದರ ಬಗ್ಗೆ ಚಾಟಿ ಬೀಸಬೇಕು ಎಂದರು.


ಉದಯವಾಹಿನಿ ಚಿತ್ರ

# ಒಂದೂವರೆ ಗಂಟೆಯಲ್ಲಿ 21 ಮಂದಿಗೆ ಕಚ್ಚಿದ ನಾಯಿ

• ಉದಯವಾಹಿನಿ, ಕೋಲಾರ

ನಗರದ ಆರ್‌ಟಿಓ ಕಚೇರಿ ಮುಂಭಾಗ ಬೀದಿನಾಯಿಯು ಒಂದೂವರೆ ತಾಸಿನಲ್ಲಿ ಆರ್‌ಟಿಓ ಬ್ರೇಕ್ ಇನ್ಸ್‌ಪೆಕ್ಟರ್ ಸೇರಿದಂತೆ 21 ಜನರನ್ನು ಕಚ್ಚಿ ಗಾಯಗೊಳಿಸಿದೆ. ಕೊನೆಯಲ್ಲಿ ಸಾರ್ವಜನಿಕರೇ ಆ ನಾಯಿಯನ್ನು ಅಟ್ಟಾಡಿಸಿ ಹೊಡೆದು ಸಾಯಿಸಿದ್ದಾರೆ. ಅದು ಹುಚ್ಚು ನಾಯಿಯೋ ಅಥವಾ ಸಾಮಾನ್ಯ ನಾಯಿಯೋ ಎಂಬುದು ಗೊತ್ತಾಗಿಲ್ಲ. ಬಾಯಿಯಿಂದ ಜೊಲ್ಲು ಬರುತ್ತಿದ್ದು, ಅದು ಹುಚ್ಚುನಾಯಿ ಎಂದು ಗಾಯಾಳುಗಳು ಹೇಳಿದರು. ಬೆಳಗ್ಗೆ 11 ಗಂಟೆಗೆ ಆರ್‌ಟಿಓ ಕಚೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಓಡಾಡುತ್ತಿದ್ದವರ ಮೇಲೆ ನಾಯಿಗಳು ಏಕಾಏಕಿ ದಾಳಿ ಮಾಡಿವೆ.

ಅದರಲ್ಲಿ ಒಂದು ನಾಯಿ ರಕ್ತ ಬರುವಂತೆಯೇ ಕಚ್ಚಿ ಗಾಯಗೊಳಿಸಿದೆ. ಅಲ್ಲಿಂದ ಓಡಿದ ನಾಯಿ ಪಕ್ಕದಲ್ಲಿರುವ ಹಳೆ ಹೆಂಚಿನ ಕಾರ್ಖಾನೆ ಬಡಾವಣೆ, ಬಿಜಿಎಸ್ ಪಿಯು ಕಾಲೇಜು ಬಳಿಗೆ ಹೋಗಿ ಅಲ್ಲಿಯೂ ನಾಲ್ಕೈದು ಮಂದಿಯನ್ನು ಕಚ್ಚಿ ಗಾಯಗೊಳಿಸಿತು. ನಾಯಿಯಿಂದ ಕಡಿತಕ್ಕೊಳಗಾದ ಗಾಯಾಳುಗಳನ್ನು ಕೂಡಲೇ ನಗರದ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಯಿತು. ಪ್ರಥಮ ಚಿಕಿತ್ಸೆ ಮಾಡಿಸಿ ಲಸಿಕೆ ನೀಡಿ ಕಳಿಸಲಾಯಿತು.


ಉದಯವಾಹಿನಿ ಚಿತ್ರ

ನಾಯಿ ದಾಳಿ ಮಾಡಿ ಕಚ್ಚುತ್ತಿದ್ದಂತೆ ಸಾರ್ವಜನಿಕರೇ ನಗರಸಭೆಗೆ ಮಾಹಿತಿ ನೀಡಿದ್ದಾರೆ. ಕೋಲಾರ ನಗರಸಭೆ ಆಯುಕ್ತ ನವೀನ್ ಚಂದ್ರ ಅವರು ಕೆಜಿಎಫ್‌ನಿಂದ ನಾಯಿ ಹಿಡಿಯುವ ಪರಿಣತರನ್ನು ಕರೆಸಲು ಮುಂದಾಗಿದ್ದಾರೆ. ಅಷ್ಟರಲ್ಲಿ ರಾಷ್ಟ್ರೀಯ ಹೆದ್ದಾರಿ –75 ರತ್ತ ತೆರಳುತ್ತಿದ್ದ ಆ ನಾಯಿಯನ್ನು ಸಾರ್ವಜನಿಕರೇ ಹಿಡಿದು ಕೊಂದು ಹಾಕಿದರು. ಚರಂಡಿಗೆ ತಳ್ಳಿ ಕೋಲಿನಿಂದ ಹೊಡೆದರು.

ನವೀನ್ ಚಂದ್ರ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಜಗದೀಶ್ ಎಸ್‌ಎನ್‌ಆರ್ ಆಸ್ಪತ್ರೆಯ ವಾರ್ಡ್‌ಗಳಿಗೆ ಭೇಟಿ ನೀಡಿ ಗಾಯಾಳುಗಳೊಂದಿಗೆ ಮಾತನಾಡಿ ಚಿಕಿತ್ಸೆ ಕೊಡಿಸಲು ಕ್ರಮ ವಹಿಸಿದರು. ಆರ್‌ಟಿಓ ಕಚೇರಿಯ ಆವರಣದಲ್ಲಿ ವಿವಿಧ ಕೆಲಸಕ್ಕೆಂದು ಬಂದವರು ಬೀದಿನಾಯಿ ದಾಳಿಗೆ ಬೆದರಿ ಕಂಗಾಲಾಗಿ ಓಡುತ್ತಿದ್ದ ದೃಶ್ಯ ಕಂಡುಬಂತು. ಕೆಲ ದೃಶ್ಯಗಳು ಕಚೇರಿಯ ಬಳಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಈಚೆಗೆ ನಗರದ ವಿವಿಧ ಬಡಾವಣೆಗಳಲ್ಲಿ ಬೀದಿನಾಯಿಗಳ ಉಪಟಳ ಹೆಚ್ಚಾಗಿದ್ದು, ಯಾವುದೇ ಕ್ರಮ ಕೈಗೊಂಡಿಲ್ಲ. ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಬೀದಿನಾಯಿಗಳಿಗೆ ಕಡಿವಾಣ ಹಾಕಬೇಕು, ಬೇರೆಡೆಗೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

# ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಬಂಗಾರ ಕವಚದ ಅಲಂಕಾರ

• ಉದಯವಾಹಿನಿ, ಮೇಲುಕೋಟೆ



ಭೂವೈಕುಂಠ ಎಂದೇ ಪ್ರಖ್ಯಾತಿಗೊಂಡಿರುವ ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿ ದೇವಾಲಯದಲ್ಲಿ ಮುಕ್ಕೋಟಿ ದ್ವಾದಶಿ ಪ್ರಯುಕ್ತ ಸ್ವಾಮಿಗೆ ಬಂಗಾರದ ಕವಚದ ವಿಶೇಷ ಅಲಂಕಾರ, ಪೂಜಾ ಕೈಂಕರ್ಯ ನೂರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ಇಲ್ಲಿನ ದೇವಾಲಯದಲ್ಲಿ ಮುಂಜಾನೆ 5ರಿಂದಲೇ ಸುಪ್ರಭಾತ, ವಿಶ್ವರೂಪ, ಸಹಸ್ರ ನಾಮ ಪೂಜಾ ಕಾರ್ಯಕ್ರಮಗಳೊಂದಿಗೆ ಆರಂಭವಾಯಿತು. ಗೋಷ್ಠಿಯೊಂದಿಗೆ ಪಾರಾಯಣ ಮಾಡಿ ಮಹಾ ಮಂಗಳಾರತಿ ನೆರವೇರಿಸಲಾಯಿತು. ಧನುರ್ಮಾಸದ ಪೂಜೆಯಲ್ಲೂ ನೂರಾರು ಭಕ್ತರು ಪಾಲ್ಗೊಂಡಿದ್ದರು. ಭಕ್ತರಿಗೆ ಪೊಂಗಲ್, ಲಾಡು ಪ್ರಸಾದ ವಿತರಣೆ ಮಾಡಲಾಯಿತು. ಮೇಲುಕೋಟೆಯಲ್ಲಿ ಏಕಾದಶಿಗಿಂತ ದ್ವಾದಶಿ ಆಚರಣೆ ಬಹಳ ವಿಶೇಷ ಪಡೆದಿದ್ದು, ದ್ವಾದಶಿ ದಿನ ದೇವರ ದರ್ಶನ ಪಡೆಯುವುದು ಬಹು ವರ್ಷಗಳ ಪುಣ್ಯ ಪ್ರಾಪ್ತಿಯಾಗುತ್ತದೆ. ಜತೆಗೆ ಇಷ್ಟಾರ್ಥ ಲಭಿಸಲಿದೆ. ದ್ವಾದಶಿಯಂದು ಇಲ್ಲಿನ ದೇವಾಲಯ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಚೆಲುವನಾರಾಯಣ ಹಾಗೂ ಯಧುಗಿರಿ ನಾಯಕಿ, ಶ್ರೀಮಾನ್ ರಾಮಾನುಜಾಚಾರ್ಯರ ಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆಯುತ್ತಾರೆ ಎಂದು ದೇವಾಲಯ ಕೈಂಕರ್ಯಪರ ವಿದ್ವಾನ್ ರಾಮಪ್ರಿಯ ಹೇಳಿದರು.

# ಫೆಬ್ರವರಿಗೆ ಚಾಮರಾಜನಗರದ ರೈಲು ನಿಲ್ದಾಣ ರೆಡಿ

• ಉದಯವಾಹಿನಿ, ಚಾಮರಾಜನಗರ

ನಗರದ ರೈಲು ನಿಲ್ದಾಣವನ್ನು ನವೀಕೃತಗೊಳಿಸಿ ಅಮೃತ್ ಭಾರತ್ ಸ್ಟೇಷನ್ ಆಗಿ ಪರಿವರ್ತಿಸುವ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದು, ಫೆಬ್ರವರಿಯಲ್ಲಿ ಪೂರ್ಣಗೊಳ್ಳಲಿದೆ. ಪ್ಲಾಟ್‌ಫಾರಂ ವಿಸ್ತರಣೆ, ಸುಸಜ್ಜಿತ ಪ್ರಯಾಣಿಕರ ತಂಗುದಾಣ, ಆವರಣದಲ್ಲಿ ಉದ್ಯಾನ, ಮುಂಭಾಗ ದಲ್ಲಿಜೋಡಿ ಕಾಂಕ್ರಿಟ್ ರಸ್ತೆ, ಪೋರ್ಟಿಕೊ, ವಾಹನಗಳ ಪಾರ್ಕಿಂಗ್ ಸೇರಿದಂತೆ ಹಲವು ಕಾಮಗಾರಿಗಳು ಸದ್ಯ ಮುಕ್ತಾಯ ಹಂತದಲ್ಲಿವೆ. ಹಾಗೆ ನೋಡಿದರೆ ಈವರೆಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. 2023 ಕೊನೆ ಭಾಗದಲ್ಲಿಕಾಮಗಾರಿ ಆರಂಭಗೊಂಡಿತ್ತು.ಆದರೆ, ವಿದ್ಯುತ್ ಚಾಲಿತ ಮಾರ್ಗದ ಕಾರಣಕ್ಕೆ ಅಮೃತ್ ಭಾರತ್ ನಿಲ್ದಾಣ ಕಾಮಗಾರಿ ಸಹ ವಿಳಂಬವಾಯಿತು. ಆದರೆ, ಜನವರಿ ಕೊನೆ ವಾರ ಅಥವಾ ಫೆಬ್ರವರಿಯಲ್ಲಿ ಕಾಮಗಾರಿ ಪೂರ್ಣಗೊಂಡು, ನವೀಕೃತ ನಿಲ್ದಾಣವು ಸಿದ್ಧಗೊಳ್ಳಲಿದೆ ಎಂದು ಕಾಮಗಾರಿ ನಿರ್ವಹಣೆ ಹೊತ್ತಿರುವ ಬೆಂಗಳೂರು ಮೂಲದ ಎಂವಿವಿ ನಾರಾಯಣ ಗುತ್ತಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ. ಆರಂಭದಲ್ಲಿ ಮೈಸೂರು ರಾಜನ ಆಡಳಿತವಿದ್ದ ಸಂದರ್ಭದಲ್ಲೇ ಚಾಮರಾಜನಗರಕ್ಕೆ ರೈಲು ಬಂದಿತ್ತು. ಆಗ ಮೀಟರ್ ಗೇಜ್ ಆಗಿದ್ದ ಈ ಮಾರ್ಗವು, 2008ರಲ್ಲಿ ಬ್ರಾಡ್‌ಗೇಜ್ ಆಗಿ ಪರಿವರ್ತನೆಗೊಂಡಿತು. ಪುಟ್ಟದಾಗಿದ್ದ ರೈಲು ನಿಲ್ದಾಣ ಕಟ್ಟಡ, ಫ್ಲಾಟ್‌ಫಾರಂ ಅನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಮುಂದಾಗಿದ್ದು, ಅಮೃತ್ ಭಾರತ್ ರೈಲು ನಿಲ್ದಾಣ ಯೋಜನೆಯಡಿ 23 ಬೋಗಿಗಳ ರೈಲುಗಾಡಿ ನಿಲ್ಲುವಷ್ಟು ಫ್ಲಾಟ್‌ಫಾರಂ ಅನ್ನು ವಿಸ್ತರಣೆ ಮಾಡಿದೆ. ಅದಕ್ಕೆ ತಕ್ಕಂತೆಯೇ ಎಲ್ಲಾ ಸೌಲಭ್ಯಗಳು ಇವೆ. ಒಂದು ಟ್ರ್ಯಾಕ್‌ನಿಂದ ಮತ್ತೊಂದು ಬದಿಯ ಟ್ರ್ಯಾಕ್‌ಗೆ ಹೋಗಲು ಇದೀಗ ಹೆಚ್ಚುವರಿ ಮೇಲ್ಸಾಗದ ಮಾರ್ಗವನ್ನು ನಿರ್ಮಿಸಲಾಗಿದೆ. ಇದಕ್ಕೆ ಮೆಟ್ಟಿಲುಗಳಲ್ಲದೇ ಲಿಫ್ಟ್ ಸಹ ಇರಲಿದೆ.






# ಮೈಸೂರು ನಗರದ ಅರಮನೆ ಬಳಿ ಜಮಾಯಿಸಿದ ಜನರು

## ● ಮೈಸೂರಲ್ಲಿ ನವ ವರ್ಷಾಚರಣೆ ಹೇಗಿತ್ತು ಗೊತ್ತಾ? ಚಾಮುಂಡಿ ಬೆಟ್ಟದಲ್ಲಿ ದರ್ಶನಕ್ಕೆ ಸಕಲ ವ್ಯವಸ್ಥೆ

• ಉದಯವಾಹಿನಿ, ಮೈಸೂರು

ಹ್ಯಾಪಿ ನ್ಯೂ ಇಯರ್, ಹೊಸ ವರ್ಷದ ಶುಭಾಶಯಗಳು... ಹೀಗೆಂದು ಪರಸ್ಪರ ಹಸ್ತಲಾಘವ ಮಾಡಿಕೊಳ್ಳುತ್ತಾ ಸಂಭ್ರಮ, ಸಡಗರದಿಂದ ಕುಣಿದು ಕುಪ್ಪಳಿಸಿದರು. ಕೇಕ್ ಕತ್ತರಿಸಿ ಸಿಹಿ ಹಂಚಿಕೆ ಮಾಡಿದರು. ಈ ರೀತಿಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹೊಸ ವರ್ಷವನ್ನು ಸಂಭ್ರಮ, ಸಡಗರದಿಂದ ಸ್ವಾಗತಿಸಲಾಯಿತು. ಮೈಸೂರಿನ ಅರಮನೆ ಆವರಣ ಸೇರಿದಂತೆ ಖಾಸಗಿ ಹೋಟೆಲ್, ಕ್ಲಬ್‌ಗಳಲ್ಲಿ ನೆರೆದಿದ್ದ ಸಾರ್ವಜನಿಕರು, 2026 ಆರಂಭವಾಗುತ್ತಿದ್ದಂತೆ ಸಂಭ್ರಮ ಸಡಗರದಿಂದ ಸ್ವಾಗತಿಸಿದರು.

ರಾತ್ರಿ 11 ಗಂಟೆಯಾಗುತ್ತಿದ್ದಂತೆ ಮೈಸೂರು ನಗರದ ಹೃದಯ ಭಾಗಕ್ಕೆ ಜನ ಸಾಗರವೇ ಹರಿದು ಬಂತು. ಖಾಸಗಿ ಬೈಕ್, ಸ್ಕೂಟರ್ ಮತ್ತು ಕಾರುಗಳಲ್ಲಿ ಮೈಸೂರು ನಗರದ ಅರಮನೆ ಬಳಿ ಜಮಾಯಿಸಿದ ಜನರು, 12 ಗಂಟೆಯಾಗುತ್ತಿದ್ದಂತೆ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದ್ದ ಅರಮನೆ ಎದುರು ನಿಂತು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು. ಬಾನೆತ್ತರದಲ್ಲಿ ಚಿಮ್ಮಿ ಸಿಡಿದ ಪಟಾಕಿಗಳನ್ನು ಕಂಡು ಸಂತಸ ಪಟ್ಟರು. ಅರಮನೆ ಆವರಣದಲ್ಲಿ ನೆರದಿದ್ದ ಸಾವಿರಾರು ಮಂದಿ ಆಗಸದಲ್ಲಿ ಬಾಣ ಬಿರುಸುಗಳ ಪ್ರದರ್ಶನ ಕಂಡು ರೋಮಾಂಚಿತಗೊಂಡರು. ಈ ಮಧ್ಯೆ ಮೈಸೂರು ನಗರ ಪೊಲೀಸರ ಪೊಲೀಸ್ ಬ್ಯಾಂಡ್ ಸಂಗೀತ ಕಾರ್ಯಕ್ರಮ ಆಲಿಸಿ ಪುಳಕಿತಗೊಂಡರು.

**ಪುಂಡರ ಮೇಲೆ ನಿಗಾ ಇರಿಸಿದ್ದ ಪೊಲೀಸರು**



**ಹೋಟೆಲ್, ಕ್ಲಬ್‌ಗಳಲ್ಲಿ ರಶ್**

ಹೊಸ ವರ್ಷದ ಆಚರಣೆಹಿನ್ನೆಲೆಯಲ್ಲಿ ಮೈಸೂರು ನಗರದ ಎಲ್ಲಾ ಹೋಟೆಲ್, ಕ್ಲಬ್‌ಗಳಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಫ್ಯಾಷನ್ ಶೋ ಸೇರಿದಂತೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬಹುತೇಕ ಎಲ್ಲಾಹೋಟೆಲ್, ಕ್ಲಬ್‌ಗಳು ಹೌಸ್ ಫುಲ್ ಆಗಿದ್ದವು. ನಾನಾ ಬಗೆಯ ಭರ್ಜರಿ ಊಟದ ವ್ಯವಸ್ಥೆಯೊಂದಿಗೆ ಮದ್ಯ ಸೇವನೆಗೂ ಅವಕಾಶ ಕಲ್ಪಿಸಲಾಗಿತ್ತು.

- ಅರಮನೆ ಆವರಣದಲ್ಲಿ ನೆರದಿದ್ದ ಸಾವಿರಾರು ಮಂದಿ ಆಗಸದಲ್ಲಿ ಬಾಣ ಬಿರುಸುಗಳ ಪ್ರದರ್ಶನ ಕಂಡು ರೋಮಾಂಚಿತಗೊಂಡರು.
- ಮೈಸೂರು ನಗರದ ಅರಮನೆ ಬಳಿ ಜಮಾಯಿಸಿದ ಜನರು, 12 ಗಂಟೆಯಾಗುತ್ತಿದ್ದಂತೆ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿದ್ದ ಅರಮನೆ ಎದುರು ನಿಂತು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

**ಬಂದೋಬಸ್ತ್** : ಹೊಸ ವರ್ಷದ ಆಚರಣೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮೈಸೂರು ನಗರ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು. 1500ಕ್ಕೂ ಹೆಚ್ಚು ಮಂದಿ ಪೊಲೀಸರು ಭದ್ರತಾ ಕಾರ್ಯದಲ್ಲಿ ನಿರತರಾಗಿದ್ದರು. ಹೆಜ್ಜೆ ಹೆಜ್ಜೆಗೂ ಪೊಲೀಸರನ್ನು ನಿಯೋಜಿಸುವ ಮೂಲಕ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲಾಗಿತ್ತು. ಶುಭಾಶಯ ನೆಪದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಕಿರಿಕಿರಿ ಉಂಟು ಮಾಡುವ ಪುಂಡರ ಮೇಲೆ ನಿಗಾ ಇರಿಸಿದ್ದ ಪೊಲೀಸರು, ಎಲ್ಲೆಡೆ ಗಸ್ತು ನಿರತರಾಗಿದ್ದರು. ಅಲ್ಲದೇ ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡದಂತೆ ಎಚ್ಚರಿಕೆ ನೀಡುತ್ತಿರುವುದು ಕಂಡು ಬಂತು.

## ಮಿನಿ ನ್ಯೂಸ್

### ಬೈಕ್‌ಗೆ ಕಾರು ಡಿಕ್ಕಿ: ಪತ್ನಿ ಸಾವು, ಪತಿ- ಮಗುವಿಗೆ ಗಂಭೀರ ಗಾಯ

• ಉದಯವಾಹಿನಿ, ಮಾಗಡಿ

ಪತಿ, ಪತ್ನಿ, ಮಗು ಪ್ರಯಾಣಿಸುತ್ತಿದ್ದ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದ್ದರಿಂದ ಪತ್ನಿ ಮೃತಪಟ್ಟಿದ್ದು, ಪತಿ, ಮಗು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕುದೂರು ಹೋಬಳಿಯ ಲಕ್ಕೇನಹಳ್ಳಿಯಲ್ಲಿ ಗುರುವಾರ ನಡೆದಿದೆ. ಅಶ್ವಿನಿ (26) ಮೃತರು. ಗಾಯಾಳುಗಳಾದ ಪತಿ ಪರಮೇಶ್, ಒಂದು ವರ್ಷದ ಪುತ್ರ ಯುವಾನ್ ನೆಲಮಂಗಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರಮೇಶ್ ಅವರು ಕುಟುಂಬದೊಂದಿಗೆ ಬೆಳಿಗ್ಗೆ 7.30ರ ಸುಮಾರಿಗೆ ಬೆಂಗಳೂರು ಕಡೆಗೆ ಹೋಗುತ್ತಿದ್ದರು. ಈ ವೇಳೆ ಕುಣಿಗಲ್ ಕಡೆಯಿಂದ ಮೂವರು ಯುವಕರಿದ್ದ ಕಾರು ವೇಗವಾಗಿ ಬಂದಿದೆ. ಲಕ್ಕೇನಹಳ್ಳಿಯಲ್ಲಿ ಕಾರಿನ ನಿಯಂತ್ರಣ ಕಳೆದುಕೊಂಡ ಚಾಲಕ, ರಸ್ತೆ ವಿಭಜಕದ ಮೇಲೆ ಹತ್ತಿ ಪಲ್ಟಿಯಾಗಿ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕೆಳಕ್ಕೆ ಬಿದ್ದ ಅಶ್ವಿನಿ ಅವರ ತಲೆಗೆ ಗಂಭೀರವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟರು. ಪತಿ ಮತ್ತು ಮಗು ಗಾಯಗೊಂಡರು. ಘಟನೆಯಲ್ಲಿ ಬೈಕ್ ಮತ್ತು ಕಾರು ನಜ್ಜುಗುಜ್ಜಾಗಿದೆ. ಶವವನ್ನು ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ. ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಕುದೂರು ಠಾಣೆ ಪೊಲೀಸರು ತಿಳಿಸಿದರು.

### ವೈಚಾರಿಕೆ ಪ್ರಜ್ಞೆ ಮೂಡಿಸಿದ ಕುವೆಂಪು : ಆರ್.ವಿ.ನಾರಾಯಣ್

• ಉದಯವಾಹಿನಿ, ಹಾರೋಹಳ್ಳಿ

ಕನ್ನಡ ಸಾಹಿತ್ಯ ಪರಿಷತ್‌ನಿಂದ ರಾಷ್ಟ್ರಕವಿ ಕುವೆಂಪು ಅವರ 121ನೇ ಜಯಂತಿಯನ್ನು ತಾಲ್ಲೂಕಿನ ಕೊಟ್ಟಗಾಳು ಸಂಗಮ ಪ್ರೌಢಶಾಲೆ ಆವರಣದಲ್ಲಿ ಆಚರಿಸಲಾಯಿತು. ಕುವೆಂಪು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಕರ್ನಾಟಕ ವಿಕಾಸ ರಂಗ ಜಿಲ್ಲಾ ಘಟಕದ ಅಧ್ಯಕ್ಷ ಆರ್.ವಿ.ನಾರಾಯಣ್ ಮಾತನಾಡಿ, ಸಮಾಜದಲ್ಲಿ ವೈಚಾರಿಕೆ ಪ್ರಜ್ಞೆ ಮೂಡಿಸಿದ ಕುವೆಂಪು ಅಘಾದ ಪಾಂಡಿತ್ಯದ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದರು. ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ಬರೆಯದ ಸಾಹಿತ್ಯವಿಲ್ಲ ಎನ್ನುವುದು ಸಾಹಿತ್ಯ ಕ್ಷೇತ್ರದಲ್ಲಿ ಜನಜನಿತ ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವನಹಳ್ಳಿ ಶಿವಲಿಂಗಯ್ಯ ಮಾತನಾಡಿ, ಮಾನವನನ್ನು ವಿಶ್ವಮಾನವ ಮಾಡಬೇಕು ಎನ್ನುವುದು ಕುವೆಂಪು ಅವರ ಕನಸಾಗಿತ್ತು. ಕುವೆಂಪು ಒಬ್ಬ ರಾಷ್ಟ್ರ ಕವಿ ಅವರು ತಮ್ಮ ಆಲೋಚನೆಗಳನ್ನು ಸಾಹಿತ್ಯ ಹಾಗೂ ಕೃತಿಗಳ ಮೂಲಕ ಸಮಾಜಕ್ಕೆ ನೀಡಿದ್ದಾರೆ. ದುಂದುವೆಚ್ಚ ಮಾಡದೆ ಪ್ರಪಂಚಕ್ಕೆ ಮಂತ್ರ ಮಾಂಗಲ್ಯ ಪರಿಚಯಿಸಿದ್ದಾರೆ. ಕುವೆಂಪು ರಚಿಸಿದ ನಾಡಗೀತೆ ವಿಶ್ವಕ್ಕೆ ಮಾದರಿ ಎಂದು ಹೇಳಿದರು.

### ಅರ್ಹರಿಗೆ ನಿವೇಶನ: ಶಾಸಕ ಯೋಗೇಶ್ವರ ಸೂಚನೆ

• ಉದಯವಾಹಿನಿ, ಚನ್ನಪಟ್ಟಣ

ನಗರದ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ನಗರಸಭೆ ಅಧಿಕಾರಿಗಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಸೂಚಿಸಿದರು. ನಗರದಲ್ಲಿ ನಡೆದ ಆಶ್ರಯ ಸಮಿತಿ ಸಭೆ, ನಗರಸಭೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ನಗರಸಭೆ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಭೂಮಿ ಗುರುತಿಸಿ, ನಿವೇಶನ ರಹಿತರಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಬೇಕು. ನಗರಸಭೆ ವ್ಯಾಪ್ತಿಯಲ್ಲಿ ಲಭ್ಯವಿಲ್ಲದಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿ ಗುರುತಿಸಬೇಕು.

ನಗರದಲ್ಲಿ ವಾಸಿಸುತ್ತಿರುವ ಸಾಕಷ್ಟು ಮಂದಿಗೆ ನಿವೇಶನ ಇಲ್ಲ. ಅದರಲ್ಲೂ ಪೌರಕಾರ್ಮಿಕರಿಗೆ ಮೊದಲು ನಿವೇಶನ ನೀಡಬೇಕು. ಅವರ ಬಹುದಿನಗಳ ಬೇಡಿಕೆ ಈಡೇರಿಸಬೇಕು. ಕೂಲಿ ಕೆಲಸ ಹಾಗೂ ಮನೆ ಕೆಲಸಗಳಿಗೆ ಹೋಗುವ ನಿರ್ಗತಿಕ ಫಲಾನುಭವಿಗಳನ್ನು ಗುರುತಿಸಿಬೇಕು ಎಂದು ಸೂಚಿಸಿದರು. ನಿವೇಶನ ನೀಡುವ ವಿಚಾರದಲ್ಲಿ ಲಾಟರಿ ಪದ್ಧತಿ ರದ್ದು ಮಾಡಬೇಕು. ನಗರಸಭೆ ಅಥವಾ ಗ್ರಾಮೀಣ ಪ್ರದೇಶದಲ್ಲಿ ನಿವೇಶನಗಳನ್ನು ಹಂಚುವಾಗ ಫಲಾನುಭವಿಗಳ ಬಡತನದ ಮಾನದಂಡ ಪರಿಗಣಿಸಬೇಕು. ಕೆಲವು ಉಳ್ಳವರಿಗೆ ನಿವೇಶನ ಪತ್ರಗಳು ದೊರೆತಿವೆ ಎಂಬ ಮಾಹಿತಿ ಇದೆ. ಅಂತಹವರನ್ನು ಗುರ್ತಿಸಿ ಹಕ್ಕುಪತ್ರಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಸೂಚಿಸಿದರು.

### ಕಳಪೆ ಕೇಕ್; ಬೇಕರಿಗಳಿಗೆ ಆಹಾರ ಸುರಕ್ಷತಾ ಅಧಿಕಾರಿ ದಿಢೀರ್ ಭೇಟಿ


• ಉದಯವಾಹಿನಿ, ಗೌರಿಬಿದನೂರು

ತಾಲ್ಲೂಕಿನ ಕೋಟಾಲದಿನ್ನೆಯಲ್ಲಿನ ವಿವಿಧ ಬೇಕರಿಗಳಿಗೆ ಆಹಾರ ಸುರಕ್ಷತಾ ಅಧಿಕಾರಿ ಡಾ. ಹೇಮಾ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಹೊಸ ವರ್ಷದ ಪ್ರಯುಕ್ತ ಬೇಕರಿಗಳಲ್ಲಿ ತಯಾರು ಮಾಡುತ್ತಿರುವ ಕೇಕ್, ಸಿಹಿ ತಿನಿಸುಗಳು ಸೇರಿದಂತೆ ವಿವಿಧ ಪದಾರ್ಥಗಳ ಗುಣಮಟ್ಟ ಮತ್ತು ಸ್ವಚ್ಛತೆ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಲಾಯಿತು. ಕೆಲವು ಬೇಕರಿಗಳಲ್ಲಿನ ತಿನಿಸುಗಳ ಮಾದರಿಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಜಿಲ್ಲಾ, ರಾಜ್ಯ ಮಟ್ಟದ ಎಫ್‌ಎಸ್‌ಎಸ್ಐ ಪ್ರಯೋಗಾಲಯಕ್ಕೆ ಕಳಿಸಿಕೊಡಲಾಗಿದೆ ಎಂದರು.

ಅಂತರಾಳದಿಂದ..
EDITORIAL

# ರಸ್ತೆ ಸುರಕ್ಷತೆ: ರಾಜಿ ಬೇಡ ಜೀವದೊಂದಿಗೆ ಆಟ ಸಲ್ಲದು

ಹಿರಿಯೂರು ತಾಲ್ಲೂಕು ಗೋರ್ಲಡುಕು ಕ್ರಾಸ್ ಬಳಿ ಡಿಸೆಂಬರ್ 25ರಂದು ಸಂಭವಿಸಿದ ಸ್ಲೀಪರ್ ಬಸ್ ಬೆಂಕಿಗೆ ಆಹುತಿಯಾದ ದುರಂತ ಮತ್ತೊಂದು ಅಪಘಾತದ ಘಟನೆ ಮಾತ್ರವಲ್ಲ; ಅದು, ಸುರಕ್ಷತೆಯನ್ನು ಐಚ್ಛಿಕ ಎಂದಷ್ಟೇ ಭಾವಿಸುವ ಸಾರಿಗೆ ವ್ಯವಸ್ಥೆಯ ನಿರೀಕ್ಷಿತ ಫಲಶ್ರುತಿಯಾಗಿದೆ. ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಖಾಸಗಿ ಸ್ಲೀಪರ್ ಬಸ್ ಹಾಗೂ ಕಂಟೇನರ್ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ, ಕೆಲವೇ ನಿಮಿಷಗಳಲ್ಲಿ ಬಸ್ ಬೆಂಕಿಗೆ ತುತ್ತಾಗಿತ್ತು. ಆ ದುರ್ಘಟನೆಯಲ್ಲಿ ಏಳು ಜನರು ಸಾವಿಗೀಡಾಗಿ, ಹಲವರು ಗಾಯಗೊಂಡಿದ್ದರು. ಕುದಿ ಕುಲುಮೆಯಂತಾದ ಬಸ್ ನಿದ್ದೆಯಲ್ಲಿದ್ದವರ ಜೀವಗಳನ್ನು ಬಲಿ ತೆಗೆದುಕೊಂಡಿತ್ತು. ಹೊತ್ತಿ ಉರಿಯಬಹುದಾದ ತೈಲದ ಕ್ಯಾನ್‌ಗಳನ್ನು ಬಸ್‌ನಲ್ಲಿ ಸಾಗಿಸುತ್ತಿದ್ದು, ಅವುಗಳಿಂದಾಗಿಯೇ ಅಪಘಾತದಿಂದ ಉಂಟಾದ ಬೆಂಕಿಯು ತೀವ್ರ ಸ್ವರೂಪ ಪಡೆದುಕೊಂಡಿತು ಎನ್ನಲಾಗುತ್ತಿದೆ. ಆ ದುರಂತದಿಂದ ವ್ಯವಸ್ಥೆ ಯಾವ ಪಾಠವನ್ನೂ ಕಲಿಯಲಿಲ್ಲ ಎನ್ನುವುದಕ್ಕೆ ಹಿರಿಯೂರು ಸಮೀಪ ನಡೆದ ದುರ್ಘಟನೆಯು ಉದಾಹರಣೆಯಂತಿದೆ.



ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿ ಇರಿಸಿಕೊಂಡು ಬಸ್‌ಗಳನ್ನು ವಿನ್ಯಾಸ ಮಾಡಲಾಗಿದೆಯೆ? ಬಸ್‌ಗಳಲ್ಲಿ ಯಾವೆಲ್ಲ ವಸ್ತುಗಳನ್ನು ಸಾಗಿಸಲು ಅನುಮತಿ ನೀಡಲಾಗಿದೆ? ಸಾವುನೋವಿನ ಘಟನೆಗಳ ನಂತರವಷ್ಟೇ ಕಾನೂನು ಉಲ್ಲಂಘನೆಗಳು ಬೆಳಕಿಗೆ ಬರುವುದು ಏಕೆ? ಹೀಗೆ, ಸರ್ಕಾರಕ್ಕೆ ಹಿತಕರವಲ್ಲದ ಪ್ರಶ್ನೆಗಳನ್ನು ಪಟ್ಟಿ ಮಾಡಬಹುದು. ಅಪಘಾತಕ್ಕೀಡಾದ ನಿರ್ದಿಷ್ಟ ಬಸ್ ತಪಾಸಣೆಗೆ ಒಳಗಾಗಿತ್ತು ಹಾಗೂ ಆ ತಪಾಸಣೆಯಲ್ಲಿ ಸದೃಢತೆಯ ಪ್ರಮಾಣಪತ್ರ, ತುರ್ತು ನಿರ್ಗಮನ ವ್ಯವಸ್ಥೆ ಸೇರಿದಂತೆ ಅದರ ಎಲ್ಲಾ ದಾಖಲೆಗಳೂ ಕ್ರಮಬದ್ಧವಾಗಿದ್ದವು ಎನ್ನಲಾಗಿದೆ. ಆದರೆ, ಈ ನಿರ್ದಿಷ್ಟ ಉದಾಹರಣೆ ಇಡೀ ವ್ಯವಸ್ಥೆ ಸಮರ್ಪಕವಾಗಿದೆ ಎನ್ನುವುದಕ್ಕೆ ಸಾಕ್ಷ್ಯವಲ್ಲ. ತುರ್ತು ನಿರ್ಗಮನ ವ್ಯವಸ್ಥೆ ಇಲ್ಲದ,ಬೆಂಕಿ ಹೊತ್ತಿ ಉರಿಯಬಹುದಾದ ಒಳಾಂಗಣ ವ್ಯವಸ್ಥೆ ಹೊಂದಿರುವ ಹಾಗೂ ವಿನ್ಯಾಸದಲ್ಲಿ ನಿಯಮಬದ್ಧವಲ್ಲದ ರೂಪಾಂತರಗಳನ್ನು ಹೊಂದಿರುವ ಕೆಲವು ಸ್ಲೀಪರ್ ಬಸ್‌ಗಳ ಸಂಚಾರ ಈಗಲೂ ಮುಂದುವರಿದಿದೆ. ದುರಂತಗಳು ಸಂಭವಿಸಿದಾಗ ಅತಿವೇಗದ ಚಾಲನೆಯನ್ನು ತೆಗಳುವ ಅಥವಾ, ಚಾಲಕರ ನಿರ್ಲಕ್ಷ್ಯವನ್ನು ಎತ್ತಿತೋರಿಸುವಂಥ ಸಿದ್ಧ ಮಾದರಿಯ ಪ್ರತಿಕ್ರಿಯೆಗಳು ಎದುರಾಗುತ್ತವೆ. ಇವೆಲ್ಲವೂ ಸಕಾರಣಗಳೇ ಆದರೂ, ಬಹು ಮುಖ್ಯವಾದ ಸತ್ಯವೊಂದನ್ನು ಮರೆಮಾಚಲಾಗುತ್ತಿದೆ. ಅದು, ಹೆದ್ದಾರಿಯ ವಿನ್ಯಾಸವೇ ತನ್ನಷ್ಟಕ್ಕೆ ನಿಶ್ಯಬ್ದ ಹಂತಕನಂತಿದ್ದು ಅಪಘಾತಗಳಿಗೆ ಪೂರಕವಾಗಿರುವುದು. ಇದಕ್ಕೆ ಬೆಂಗಳೂರು–ಮೈಸೂರು ಹೆದ್ದಾರಿ ಅತ್ಯುತ್ತಮ ಉದಾಹರಣೆ. ಈ ಹೆದ್ದಾರಿ ಬಳಕೆಗೆ ಮುಕ್ತವಾದಾಗಿನಿಂದ 1,500ಕ್ಕೂ ಹೆಚ್ಚು ಅಪಘಾತಗಳು ಹಾಗೂ 200ಕ್ಕೂ ಹೆಚ್ಚು ಸಾವುಗಳನ್ನು ಕಂಡಿದೆ. ಅವೈಜ್ಞಾನಿಕ ಪ್ರವೇಶ ಹಾಗೂ ನಿರ್ಗಮನ ಕೇಂದ್ರಗಳು, ರಸ್ತೆಯಲ್ಲಿ ನೀರು ತುಂಬಿಕೊಳ್ಳುವ ದುಃಸ್ಥಿತಿ, ಹಳ್ಳಿಗಳಿಗೆ ಸುರಕ್ಷಿತ ದಾಟುವಿಕೆ ವ್ಯವಸ್ಥೆ ಇಲ್ಲದಿರುವುದು, ಇವೆಲ್ಲದರಿಂದಾಗಿ ಸಣ್ಣದೊಂದು ಪ್ರಮಾದವೂ ಮಾರಣಾಂತಿಕ ಅಪಾಯವಾಗಿ ಬದಲಾಗುವ ಸಾಧ್ಯತೆಯಿದೆ. ದುರ್ಘಟನೆಗಳನ್ನು ತಡೆಗಟ್ಟಲಿಕ್ಕೆ ಕೈಗೊಳ್ಳಬೇಕಾದ ಕ್ರಮಗಳು ಸ್ಪಷ್ಟವಾಗಿವೆ. ಸ್ಲೀಪರ್ ಬಸ್‌ಗಳಿಗೆ ಅನ್ವಯಿಸುವ ಕೇಂದ್ರ ಸರ್ಕಾರ ರೂಪಿಸಿರುವ ಬೆಂಕಿ ಪತ್ತೆ ಮತ್ತು ನಿರೋಧಕ ನಿಯಮಗಳನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರಬೇಕಾಗಿದೆ. ಬಸ್‌ಗಳ ಭೌತಿಕ ಸಾಮರ್ಥ್ಯವನ್ನು ಕಠಿಣ ಪರೀಕ್ಷೆಗಳಿಗೆ ಒಳಪಡಿಸಬೇಕಾಗಿದೆ ಹಾಗೂ ಸಾರ್ವಜನಿಕ ವಾಹನಗಳಲ್ಲಿ ಅಪಾಯಕಾರಿ ವಸ್ತುಗಳನ್ನು ಅಕ್ರಮವಾಗಿ ಸಾಗಿಸುವ ಪ್ರಕರಣಗಳಲ್ಲಿ ಕಠಿಣ ಶಿಕ್ಷೆ ವಿಧಿಸಬೇಕಾಗಿದೆ. ಇದೆಲ್ಲದರ ಜೊತೆಗೆ ಅಪಾಯಕಾರಿ, ಅವೈಜ್ಞಾನಿಕವಾದ ಹೆದ್ದಾರಿ ವಲಯಗಳಲ್ಲಿ ವೇಗಮಿತಿ ಫಲಕಗಳ ಅಳವಡಿಕೆಗಷ್ಟೇ ಸುರಕ್ಷತಾ ಕ್ರಮ ಸೀಮಿತಗೊಳ್ಳದೆ, ರಸ್ತೆಯ ವಿನ್ಯಾಸದ ಪರಿಷ್ಕರಣೆಯ ಬಗ್ಗೆಯೂ ಗಮನಹರಿಸಬೇಕಾಗಿದೆ. ಅವಘಡ ಸಂಭವಿಸಿದಾಗಷ್ಟೇ ಎಚ್ಚೆತ್ತು ಪ್ರತಿಕ್ರಿಯಿಸುವ ಪ್ರವೃತ್ತಿಯಿಂದ ಸರ್ಕಾರ ಹೊರ ಬರಬೇಕಾಗಿದೆ. ಹಿರಿಯೂರು ಸಮೀಪದ ದುರ್ಘಟನೆಯನ್ನು ಒಂದು ಗಂಭೀರ ಎಚ್ಚರಿಕೆಯನ್ನಾಗಿ ಸರ್ಕಾರ ಪರಿಗಣಿಸಬೇಕು. ಚಲಿಸುವ ಅರಗಿನ ಮನೆಗಳಂತೆ ಕಾಣಿಸುತ್ತಿರುವ ಸ್ಲೀಪರ್ ಬಸ್‌ಗಳ ಸುರಕ್ಷತೆಯನ್ನು ಖಾತರಿಗೊಳಿಸಲು, ಎಲ್ಲಾ ಅಗತ್ಯ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು.

**ಎರಡು ತಿಂಗಳ ಹಿಂದಷ್ಟೇ, ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಸ್ಲೀಪರ್ ಬಸ್ ಅಂಧ್ರಪ್ರದೇಶದ ಕರ್ನೂಲ್ ಬಳಿ ಅಪಘಾತಕ್ಕೀಡಾಗಿ ಹೊತ್ತಿಕೊಂಡ ಬೆಂಕಿಯಲ್ಲಿ ಇಪ್ಪತ್ತು ಪ್ರಯಾಣಿಕರು ಸುಟ್ಟುಹೋಗಿದ್ದರು. ಆ ಬಸ್‌ನಲ್ಲಿ ಸಾಗಿಸುತ್ತಿದ್ದ ಸ್ಮಾರ್ಟ್ ಫೋನ್‌ಗಳ ಲಿಥಿಯಂ-ಅಯಾನ್ ಬ್ಯಾಟರಿಗಳ ಸ್ಫೋಟ ದುರಂತದ ತೀವ್ರತೆಯನ್ನು ಹೆಚ್ಚಿಸಿತು ಎನ್ನಲಾಗಿದೆ.**



# ರಾಮಾಯಣ

## ಶ್ರೀರಾಮನು ಸುಗ್ರೀವನಿಗೆ ಕೊಟ್ಟ ಅಭಯ

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ಆದ್ದರಿಂದ ಮೊದಲು ನಾನು ನಿನ್ನ ಕಾರ್ಯವನ್ನು ಸಾಧ್ಯಮಾಡಿ ಕೊಟ್ಟಮೇಲೆ ನೀನು ನನ್ನ ಕಾರ್ಯವನ್ನು ಸಾಧಿಸಬಹುದು ಎಂದು ನುಡಿದನು. ಆ ಮಾತನ್ನು ಕೇಳಿ ಸುಗ್ರೀವನು ಅತ್ಯಂತ ಸಂತೋಷಯುಕ್ತನಾಗಿ ತನ್ನ ನಾಲ್ವರು ಪ್ರಧಾನರನ್ನು ಕೂಡಿಕೊಂಡು ರಾಮಲಕ್ಷ್ಮಣರೊಡನೆ ಅನ್ಯೋನ್ಯ ಸುಖದುಃಖಾದಿಗಳನ್ನು ಮಾತ ನಾಡಿಕೊಂಡನು. ಶ್ರೀರಾಮನ ಮಾತನ್ನು ಕೇಳಿ ಸುಗ್ರೀವನು ತನ್ನ ಕಾರ್ಯವು ಸಾಧ್ಯವಾಗುವುದೆಂದು ಸಂತೋಷಪಟ್ಟನು. ಸುಗ್ರೀವನ ಮಾತನ್ನು ಕೇಳಿ ಶ್ರೀರಾಮನು ತನ್ನ ಕಾರ್ಯವು ಸಾಧ್ಯವಾಯಿತೆಂದು ಅತರಂಗದಲ್ಲಿ ಸಂತೋಷಿಸಿದನು.

### ವಾಲಿಯನ್ನು ವಧಿಸುತ್ತೇನೆಂದು ಶ್ರೀರಾಮನ ಪ್ರತಿಜ್ಞೆ

ಸುಗ್ರೀವನು ಶ್ರೀರಾಮನನ್ನು ಕುರಿತು ಶ್ರೀರಾಮ, ನಿನ್ನಂಥ ಪರಮಪುರುಷನು ನನಗೆ ಸಖನಾದ್ದರಿಂದ ನನಗೆ ದೇವತಾಕೃಪೆಯುಂಟಾಯಿತು. ನಿನ್ನ ಸಹಾಯದಿಂದ ನನಗೆ ಸ್ವರ್ಗ ಲೋಕಾಧಿಪತ್ಯವಾದರೂ ಸಾಧ್ಯವಾಗುವುದು, ಇನ್ನು ಈ ಕಪಿರಾಜ್ಯಾಧಿಪತ್ಯ ಸಿಗುವುದರಲ್ಲಿ ಆಶ್ಚರ್ಯವೇನು? ನೀನು ನನಗೆ ಅಗ್ನಿಸಾಕ್ಷಿಯಾಗಿ ಮಿತ್ರನಾದ್ದರಿಂದ ನನ್ನ ಸಮಸ್ತಬಂಧುಗಳಲ್ಲಿಯೂ ಮಿತ್ರರಲ್ಲಿಯೂ ನಾನೇ ಭಾಗ್ಯವಂತನು. ನಾನು ನಿನಗೆ ಯೋಗ್ಯನಾದ ಸಖನೆಂದೆಣಿಸು. ನನ್ನ ಗುಣಗಳನ್ನು ಮುಂದೆ ಕಾಣುವೆ. ನನ್ನ ಸಾಮರ್ಥ್ಯವನ್ನೂ ನನ್ನ ಗುಣಕಥನಗಳನ್ನೂ ನಾನೇ ಹೇಳಿಕೊಳ್ಳಬಾರದು. ಲೋಕದಲ್ಲಿ ಮಹಾತ್ಮರಾದವರ ಮಿತ್ರತ್ವವು ದಿನದಿನಕ್ಕೂ ಅನ್ಯೋನ್ಯ ಪ್ರೀತಿಯನ್ನುಂಟುಮಾಡುವುದಲ್ಲದೆ ಹಾನಿಯನ್ನುಂಟುಮಾಡದು. ಸತ್ಪುರುಷರು ಸತ್ಪುರುಷರ ಮಿತ್ರತ್ವವನ್ನು ಬಯಸುವರಲ್ಲದೆ ಚಿನ್ನ ಬೆಳ್ಳಿ ರತ್ನಾಭರಣಗಳನ್ನಾ ಬಯಸರು. ಐಶ್ವರ್ಯವಂತನಾದರೂ ದರಿದ್ರನಾದರೂ ದಾಖಿಯಾದರೂ ಸುಖಿಯಾದರೂ ಕ್ಷಮೆಯುಳ್ಳವನಾಗಿ ಕಪಟವಿಲ್ಲದಿರುವ ಸ್ನೇಹಿತನೇ ಪರಗತಿಸಾಧನನೆಂದು ಸತ್ಪುರುಷರು ತಿಳಿಯುತ್ತಾರೆ. ಶ್ರೀರಾಮ, ಮಹಾತ್ಮರು ಸ್ನೇಹಿತರ ಕಾರ್ಯನಿಮಿತ್ತವಾಗಿ ಧನವನ್ನಾದರೂ ಬಿಡುವರು. ಕಡೆಗೆ ಸ್ನೇಹನಿಮಿತ್ತವಾಗಿ ದೇಶತ್ಯಾಗ ವನ್ನಾದರೂ ಮಾಡುವರು. ಶ್ರೀರಾಮ, ನನಗೆ ನನ್ನ ಭಾಗ್ಯವಶದಿಂದ ನಿನ್ನ ಸ್ನೇಹವು ಸಂಭವಿಸಿತು ಎಂದು ನುಡಿದನು. ಆ ಮಾತನ್ನು ಕೇಳಿ ಶ್ರೀರಾಮನು ''ಸುಗ್ರೀವ, ಹೌದು'' ಎಂದು ಸಂತೋಷಪಟ್ಟು ಸುಗ್ರೀವ ನೊಡನೆ ಅನೇಕ ಪ್ರಿಯವಚನಗಳನ್ನು ನುಡಿಯತೊಡಗಿದನು. ಆಮೇಲೆ ಸುಗ್ರೀವನು ಇಕ್ಕೆಲದಲ್ಲಿದ್ದ ವೃಕ್ಷಗಳನ್ನು ನೋಡಿ ಸಮೀಪದಲ್ಲಿ ಪಲ್ಲವಿತವೂ ಪುಷ್ಪಿತವೂ ಆದ ಮರದ ಕಿರುಗೊಂಬೆಗಳನ್ನು ಮುರಿದು ಶ್ರೀರಾಮನಿಗೆ ಆಸನವನ್ನು ಮಾಡಿ ಕುಳ್ಳಿರಿಸಿ ತಾನೂ ಕುಳಿತುಕೊಂಡನು. ಹನುಮಂತನೂ ಮನೋಹರವಾಗಿದ್ದ ತಳಿರುಗಳುಳ್ಳ ಕೊಂಬೆಗಳನ್ನು ಮುರಿದು ಲಕ್ಷ್ಮಣನಿಗೆ ಕುಳ್ಳಿರ ಹೇಳಿದನು. ಈ ಪ್ರಕಾರ ರಾಮಲಕ್ಷ್ಮಣರು ಶಚಿತ್ತರಾಗಿ ಕುಳಿತುಕೊಂಡಿರುವ ಸಮಯದಲ್ಲಿ ಸುಗ್ರೀವನು ಶ್ರೀರಾಮನನ್ನು ಕುರಿತು ವಿನಯಯುಕ್ತವಾದ ಮೃದುನುಡಿಯಿಂದ ಶ್ರೀರಾಮ್ಮ ನಾನು ನನ್ನ ಅಣ್ಣನಾದ ವಾಲಿಯಿಂದ ಪರಾಜಿತನಾದೆನು. ಅದಲ್ಲದೆ ವಾಲಿಯಂ ನನ್ನ ಸ್ತ್ರೀಯನ್ನು ಅಪಹರಿಸಿದನು. ಅದರಿಂದ ನಾನು ದುಃಖಾಕ್ರಾಂತನಾಗಿ ಆತನಿಗೆ ಅಂಜಿಕೊಂಡು ಭಯದಿಂದ ಕಂಗೆಟ್ಟು ಯಷ್ಯಮೂಕಪರ್ವತದಲ್ಲಿ ಸಂಚರಿಸಿಕೊಂಡಿದ್ದೇನೆ. ಎಲೈ ಲೋಕನಾಯಕನಾದ ಶ್ರೀರಾಮನೆ, ವಾಲಿಯಿಂದ ಭಯಪಟ್ಟಿರುವ ನನ್ನ ಭಯವನ್ನು ಪರಿಹರಿಸಿ ರಕ್ಷಿಸುವುದಕ್ಕೆ ನೀನೇ ಸಮರ್ಥನಲ್ಲದೆ ಮತ್ತೊಬ್ಬರಲ್ಲ ಎಂದು ನುಡಿದನು.

ಮುಂದುವರಿಯುವುದು...

# ಕೃಷಿ ಆಧಾರಿತ ಕೈಗಾರಿಕೆಗಳು



☛ ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಭೂಮಿಯು ಸೃಷ್ಟಿಯಾದಾಗಿನಿಂದ ಈ ತನಕ ನೈಸರ್ಗಿಕ ಸೂತ್ರಗಳ ಅನ್ವಯತೆಗೆ ಒಳಪಟ್ಟು ಮುನ್ನಡೆದಿದೆ. ಈ ಸೃಷ್ಟಿಯ ಅಣುರೇಣು ತೃಣಕ್ಕೆ ಸಮಾನನಾದ ಈ ಮಾನವನ ಬದುಕು ಶಾಶ್ವತವೇ ಎಂಬ ಪ್ರಶ್ನೆಗೆ ನಿಸರ್ಗದ ಸೃಷ್ಟಿ ಮತ್ತು ಲಯದ ಸೂತ್ರ ಉತ್ತರ ನೀಡ ಬಲ್ಲದು. ವಿಶ್ವವು ಶೂನ್ಯದಿಂದ ಸೃಷ್ಟಿಯಾಗಿ 1375 ಕೋಟಿ ವರ್ಷಗಳಾದರೂ 465 ಕೋಟಿ ವರ್ಷದ ಈ ಭೂಮಿಗೆ ಅಂಬೆಗಾಲಿಡುವ ಮಗುವಿನ ವಯಸ್ಸು ಎಂದು ಸರಳವಾಗಿ ಹೇಳಬಹುದು. ಇನ್ನೂ ಸಾವಿರಾರು ಕೋಟಿ ವರ್ಷಗಳ ಆಯಸ್ಸು ಈ ಭೂಮಂಡಲಕ್ಕೆ ಇದೆ. ಕೇವಲ 70 ಲಕ್ಷ ವರ್ಷಗಳ ಇತಿಹಾಸ ಇರುವ ಮಾನವ ಈ ಭೂಮಿಗೆ ಕೊಟ್ಟ ಕೊಡುಗೆ ಏನು? ಈ ಪ್ರಶ್ನೆ ಮೇಲಿಂದ ಮೇಲೆ ಕಾಡುತ್ತದೆ. ನಿಸರ್ಗವು ಕ್ಷಣದಿಂದ ಕ್ಷಣಕ್ಕೆ ಹೊಸ ಹೊಸ ಸೃಷ್ಟಿಯ ಕ್ರಿಯೆಗಳಿಂದ ಹೊಸದನ್ನು ನೀಡುತ್ತಾ ಬಂದಿದೆ. ಸೃಷ್ಟಿಯ ಈ ಕ್ರಿಯೆ ಸಸ್ಯ/ಜೀವರಾಶಿಗಳ ಒಳಿತಿಗಾಗಿಯೇ ನಡೆಯುತ್ತಿರುತ್ತದೆ. ಈ ಸೂಕ್ಷ್ಮತೆಯನ್ನ ಅರಿತು ಲಕ್ಷಾಂತರ ಸಸ್ಯ ಪ್ರಭೇದಗಳು ಮತ್ತು ಕೋಟ್ಯಾಂತರ ಜೀವಿಗಳು ಸಮನ್ವಯ ಜೀವನ ನಡೆಸುವ ಮೂಲಕ ಪ್ರಕೃತಿಯ ಸಮತೋಲನಕ್ಕೆ ತಮ್ಮದೇಯಾದ ಕೊಡುಗೆ ನೀಡುತ್ತಾ ಬಂದಿವೆ. ಆದರೆ ಮಾನವ ಮಾಡಿದ್ದೇನು?

1780 ರ ಕೈಗಾರಿಕಾ ಕ್ರಾಂತಿ ಕೃಷಿ ಕ್ಷೇತ್ರವನ್ನು ಅವಲಂಬನೆಗೊಂಡೇ ನಡೆಯಿತು. ಹತ್ತಿಯಿಂದ ನೂಲು ತಯಾರಿಕೆ, ನೂಲಿನಿಂದ ವಸ್ತ್ರ ತಯಾರಿಕೆಗೆ ಮೊದಲ ಹಂತದ ಕ್ರಾಂತಿ. ನಂತರ ವಸ್ತ್ರ ತಯಾರಿಕೆಗೆ ಯಂತ್ರಗಳ ತಯಾರಿಕೆ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆ. ಇದಕ್ಕಾಗಿ ಬೇಕಾಗುವ ಖಚ್ಚಾ ವಸ್ತುಗಳಿಗಾಗಿ ಭೂಮಿಯನ್ನು ಕೊರೆಯುವ ಕ್ರಿಯೆ ಪ್ರಾರಂಭವಾಯಿತು. ಇವುಗಳ ಸಾಗಾಣಿಕೆಗಾಗಿ ರಸ್ತೆಗಳು ನಿರ್ಮಾಣಗೊಂಡವು. ಕೈಗಾರಿಕೆಯ ಕಾರಣದಿಂದ ಅಭಿವೃದ್ಧಿಯನ್ನು ವೈಭವೀಕರಿಸುತ್ತಾ ಪ್ರಕೃತಿಯನ್ನು ಕಡೆಗಣಿಸಿದ್ದು ಈಗಿನ ಅನಾಹುತಗಳಿಗೆ ಕಾರಣವಾಗಿದೆ. ಕೃಷಿ ಆಧಾರಿತ ಕೈಗಾರಿಕೆಗಳು ಸ್ಥಾಪನೆಗೊಂಡರೆ ವಿದೇಶಿ ವಿನಿಮಯ ಹೆಚ್ಚಾಗುತ್ತದೆ. ಮಹಿಳೆಯರು ಕೃಷಿಯಲ್ಲಿ ತೊಡಗಿಸಿಕೊಳ್ಳಬಹುದು.



ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗುತ್ತದೆ. ಮಾರುಕಟ್ಟೆಯ ವಿಸ್ತರಣೆಗೆ ಅನುಕೂಲವಾಗುತ್ತದೆ ಎಂಬ ಉದ್ದೇಶ ಇಟ್ಟುಕೊಂಡು ಕೃಷಿ ಆಧಾರಿತ ಕೈಗಾರಿಕೆಗೆ ಒತ್ತು ಕೊಡಲಾಯಿತು. ಕೃಷಿ ಆಧಾರಿತ ಕೈಗಾರಿಕೆಗಳು ಪ್ರಾರಂಭಗೊಂಡ ಮೇಲೆ ಸಕ್ಕರೆ, ಕಾಗದ, ಎಣ್ಣೆ, ಜವಳಿ ಮತ್ತಿತರ ಉದ್ಯಮಗಳು ಬೃಹತ್ತಾಗಿ ಬೆಳೆದವು. ಜವಳಿ ಕ್ಷೇತ್ರ ಒಂದರಲ್ಲಿಯೇ ದೇಶದಲ್ಲಿ 2000 ಕ್ಕೂ ಹೆಚ್ಚಿನ ಹತ್ತಿ ಗಿರಣಿಗಳು, ನೂಲಿನ ಗಿರಣಿಗಳು ಸ್ಥಾಪನೆಯಾಗಿದ್ದರಿಂದ ಲಕ್ಷಾಂತರ ಜನರಿಗೆ ಉದ್ಯೋಗ ಸೃಷ್ಟಿಯಾಯಿತು. ಇದೆಲ್ಲಾ ಸತ್ಯ. ಆದರೆ ಕೈಗಾರಿಕೆ ವಿಸ್ತರಣೆಯಿಂದ ಪ್ರಕೃತಿಯ ಸ್ಥಿತಿ ಏನಾಯಿತು? ರೈತನ ಗತಿಯೇನಾಗಿದೆ? ಕೃಷಿ ಉಪ ಕಸುಬುದಾರರು, ಕೃಷಿ ಕಾರ್ಮಿಕರು ಕೈಗಾರಿಕೆಯ ಪ್ರವಾಹದಲ್ಲಿ ಕೊಚ್ಚಿ ನಗರದ ದಡ ಸೇರಿದ್ದಾರೆ. ಇದರಿಂದ ಕೃಷಿ ಕಾರ್ಯಕ್ಕೆ ಹಿನ್ನೆಡೆಯಾಗಿದ್ದನ್ನು ಯಾರು ಗಂಭೀರವಾಗಿ ಗಮನಿಸಲೇ ಇಲ್ಲ. ಇದರ ಫಲವಾಗಿ ಭಾರತದಲ್ಲಿ ಶೇಕಡ 87 ರಷ್ಟಿದ್ದ ಕೃಷಿಕರ ಸಂಖ್ಯೆ ಶೇಕಡ 47 ಕ್ಕೆ ಇಳಿದಿದೆ. ಕೃಷಿಯಲ್ಲಿ ಕಾರ್ಮಿಕರ ಕೊರತೆ ಕಂಡುಬಂದ ತಕ್ಷಣ ಕೈಗಾರಿಕೋದ್ಯಮಿಗಳು ಕೃಷಿಯನ್ನು ಯಾಂತ್ರೀಕರಣಗೊಳಿಸಿ ನೈಸರ್ಗಿಕ ಕ್ರಿಯೆಗಳಿಗೆ ತಿಲಾಂಜಲಿ ಇಟ್ಟರು. ಕೃಷಿಗೆ ನೀರು ಮತ್ತು ಕೈಗಾರಿಕೆಯನ್ನು ಜೋಡಿಸಿದ ಉದ್ಯಮಿಗಳು ಈ ಮೂರರಲ್ಲಿ ಯಾವುದೇ ಒಂದನ್ನೂ ಬೇರ್ಪಡಿಸಲು ಸಾಧ್ಯವೇ ಇಲ್ಲ. ಹಾಗೇನಾದರೂ ಬೇರ್ಪಡಿಸಿದರೆ ಪ್ರಗತಿ ಸಾಧ್ಯವಿಲ್ಲ ಎಂದು ಬಿಂಬಿಸತೊಡಗಿ ದೊಡ್ಡ ದೊಡ್ಡ ಅಣೆಕಟ್ಟುಗಳ ಮೂಲಕ ನೀರಿನ ವ್ಯವಸ್ಥೆ ಮಾಡಲು ಮುಂದಾಗಿದ್ದು ಈ ಭೂಮಿಯ ನೈಸರ್ಗಿಕ ಕ್ರಿಯೆಗೆ ಪೆಟ್ಟು ಕೊಟ್ಟಿದ್ದು ಮತ್ತೊಂದು ದುರಂತ.

- **1) ಕೃಷಿ ಕೈಗಾರಿಕೆಗಳ ಪ್ರಭಾವಕ್ಕೆ ಸಿಲುಕಿದ್ದು.**
- **2) ದುಡಿಯುವ ಕೈಗಳ ಕೊರತೆಯಿಂದ ಯಂತ್ರಗಳ ಅವಲಂಬನೆ ಹೆಚ್ಚಾಗಿದ್ದು.**
- **3) ಆಧುನಿಕ ಕೃಷಿ ಹೆಸರಲ್ಲಿ ಪಾಶ್ಚಿಮಾತ್ಯದ ರಾಸಾಯನಿಕ ಗೊಬ್ಬರಗಳ ಬಳಕೆ ಮಾಡತೊಡಗಿದ್ದು.**
- **4) ಕೃಷಿ ಉದ್ಯಮವಾಗಿ ಮಾರ್ಪಟ್ಟಿದ್ದು.**
- **5) ಉದ್ಯಮಿಗಳ ಹುನ್ನಾರಕ್ಕೆ ಕೃಷಿಗೆ ನೀರಾವರಿ ವ್ಯವಸ್ಥೆ ಅನಿವಾರ್ಯವಾಗಿದ್ದು. ಮೇಲಿನ ಈ 5 ಅಂಶಗಳು ನಿಸರ್ಗದತ್ತವಾಗಿದ್ದ ಕೃಷಿಯನ್ನು ನಾಶಗೊಳಿಸಿದವು. ಇದು ಕೃಷಿ ಕ್ಷೇತ್ರಕ್ಕಷ್ಟೇ ಅಲ್ಲ ನಿಸರ್ಗದ ಮೇಲು ಪರಿಣಾಮ ಬೀರಿದೆ. ಭೂಮಿಯ ನಿಸರ್ಗ ಸೂತ್ರಗಳು ಹಳಿ ತಪ್ಪಿವೆ. ಹಳಿ ತಪ್ಪಿದ ನಿಸರ್ಗವು ಲಯ ದಿಂದ ಸರಿಯಾಗ ಬೇಕಷ್ಟೆ.**

# ಶ್ರೀ ಸಿದ್ದೇಶ್ವರ ಸ್ವಾಮೀಜಿರವರ ಮೂರನೇ ವರ್ಷದ ಪುಣ್ಯ ಸ್ಮರಣೆ




ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ವಿಜಯಪುರ ಜ್ಞಾನಯೋಗಾಶ್ರಮದ ಜ್ಞಾನ ಯೋಗಿ ಪೂಜ್ಯ ಶ್ರೀಶ್ರೀಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ದೈವ ಸಂಭೂತರು, ಜ್ಞಾನ ಬಂಡಾರ ಉಳ್ಳವರು, ಜ್ಞಾನಯೋಗಿಗಳು,ಅತ್ಯಂತ ಸಾಮಾನ್ಯ,ಸರಳ ಸಜ್ಜನಿಕೆಯ ಸಾಕಾರ, ಸಹನೆ ಹಾಗೂ ಕರುಣಾಮೂರ್ತಿಯವರು. ಈ ಕಲಿಯುಗದ ಸಾಕ್ಷಾತ್ ಭಗವಂತನ ನಿಜ ಸ್ವರೂಪಿ ಉಳ್ಳವರು, ಮಿಗಿಲಾಗಿ ಮಹಾನ್ ಚೇತನ, ಮಹಾನ್ ಮಾನವತಾವಾದಿ ಉಳ್ಳವರು. ಈಗಿನ ಕಾಲಘಟ್ಟದಲ್ಲಿ ಇಂತಹ ಮಹಾನ್ ಸಂತರು ನಮ್ಮ ಪುಣ್ಯ ಭೂಮಿಯಲ್ಲಿ ಜನಿಸಿ ಪ್ರತಿನಿತ್ಯ ಸಾರ್ವಜನಿಕರಿಗೆ ದರ್ಶನ ಕೊಡುವುದರ ಜೊತೆಗೆ ಬದುಕಲು ಕಲಿಯಿರಿ ಎಂಬ ಬಗ್ಗೆ ಅತ್ಯಂತ ಉತ್ತಮ ಹಾಗೂ ಒಪ್ಪುವ ಸತ್ಸಂಗ, ಪ್ರವಚನಗಳನ್ನು ನೀಡುವುದರ ಮೂಲಕ ಕೋಟ್ಯಾಂತರ ಜನರ ಹೃದಯಗಳನ್ನು ಗೆದ್ದು ಜನಮಾಸದಲ್ಲಿ ಉಳಿದುಕೊಂಡಿದ್ದಾರೆ. ಈ ರೀತಿ ಇರುವ ಸ್ವಾಮೀಜಿಗಳು ಅಪರೂಪದಲ್ಲಿ ಅಪರೂಪ. ಇವರ ಆದರ್ಶಗಳು,ಇವರ ಪ್ರವಚನಗಳು, ಸತ್ಸಂಗಗಳು ಇವರ ಸಾಮಾನ್ಯ ಸರಳ ಬದುಕು ಜಗತ್ತಿನ ಎಲ್ಲರ ಬದುಕಿಗೆ ದಾರಿದೀಪಗಳಾಗಿವೆ. ಅವರ ಆದರ್ಶಗಳನ್ನ ನಿಜ ಜೀವನದಲ್ಲಿ ನಾವುಗಳು ಪಾಲಿಸಿದ್ದೇ ಆದರೆ ನಮ್ಮ ಬದುಕು ಪಾವನವಾಗುವುದರ ಜೊತೆಗೆ ಅವರ ಆದರ್ಶಗಳಿಗೆ ಗೌರವ ನೀಡಿದಂತಾಗುತ್ತದೆ. ಪೂಜ್ಯ ಸ್ವಾಮೀಜಿಗಳು ಎಲ್ಲರ ಹೃದಯವನ್ನು ಗೆದ್ದು, ಎಲ್ಲರ ಹೃದಯದಲ್ಲೂ ಕೂಡ ಜಾಗ ಮಾಡಿಕೊಂಡಿದ್ದಾರೆ. ಸ್ವಾಮೀಜಿಯವರ ದೇಹ ಅಸ್ತಂಗತ ಆಗಿದ್ದರೂ ಸಹ ಅವರು ಈ ಭೂಮಂಡಲದಲ್ಲಿ ಅಮರವಾಗಿರುತ್ತಾರೆ ಹಾಗೂ ಅವರ ಆದರ್ಶಗಳು, ತತ್ವಸಿದ್ಧಾಂತಗಳು, ಪ್ರವಚನಗಳು, ಸತ್ಸಂಗಗಳು ಜೀವಂತವಾಗಿರುತ್ತವೆ. ಪೂಜ್ಯ ಸ್ವಾಮೀಜಿರವರು ತನ್ನ ಇಚ್ಛೆಯಂತೆ ಇಚ್ಛಾ ಮರಣದ ಮೂಲಕ ದಿನಾಂಕ 02.01.2023 ರಂದು ಸೋಮವಾರ ಸ್ವರ್ಗಸ್ಥರಾದರು. ಇಂದು ಪೂಜ್ಯ ಸ್ವಾಮೀಜಿರವರ ಮೂರನೇ ವರ್ಷದ ಪುಣ್ಯ ಸ್ಮರಣೆಯ ದಿನ ನಾವುಗಳು ಪೂಜ್ಯರನ್ನು ಸ್ಮರಿಸಿ, ನೆನೆಯುತ್ತಾ ಅವರ ಆದರ್ಶಗಳನ್ನು ಮತ್ತು ತತ್ವಸಿದ್ಧಾಂತಗಳನ್ನ ಹಾಗೂ ಸರಳ ಬದುಕನ್ನು ಅವರವರ ಬದುಕಿನಲ್ಲಿ ಬದುಕಿರುವವರೆಗೂ ಅಳವಡಿಸಿಕೊಳ್ಳಲು ಸಂಕಲ್ಪ ಮಾಡೋಣ.




# ಡಾ. ಚಂದ್ರಶೇಖರ ಕಂಬಾರರವರ 89ನೇ ಜನ್ಮಜಯಂತಿ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಡಾ:ಚಂದ್ರಶೇಖರ ಕಂಬಾರರವರು 1937 ನೇ ಜನವರಿ 02 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ ಜನಿಸಿದರು.ತಂದೆ ಬಸವಣ್ಣಪ್ಪ ತಾಯಿ ಚನ್ನವ್ವ. ಕಂಬಾರರ ವಿದ್ಯಾಭ್ಯಾಸ ಗೋಕಾಕ್, ಬೆಳಗಾವಿ ಮತ್ತು ಧಾರವಾಡಗಳಲ್ಲಿ ನಡೆಯಿತು.ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ ಹಾಗೂ ಪಿ.ಎಚ್ ಡಿ ಪದವಿಗಳನ್ನು ಗಳಿಸಿದರು. ಇವರು ಬೆಳಗಾವಿ, ಸಾಗರ ಮತ್ತು ಉಡುಪಿಯ ಕಾಲೇಜುಗಳಲ್ಲಿ ಉಪನ್ಯಾಸಕರಾಗಿದ್ದರು. ಕಂಬಾರರು 1968 ರಲ್ಲಿ ಅಮೆರಿಕಾದ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಕಾಲ ಅಧ್ಯಾಪಕ ವೃತ್ತಿ ನಡೆಸಿದರು. ಕಂಬಾರರು ಸ್ವದೇಶಕ್ಕೆ ಹಿಂತಿರುಗಿದ ಬಳಿಕ ಬೆಂಗಳೂರು ವಿಶ್ವವಿದ್ಯಾಲಯ ಸೇರಿ ಮುಂದೆ ಕನ್ನಡ ವಿಭಾಗದ ಮುಖ್ಯಸ್ಥರಾಗಿ 1991ರಲ್ಲಿ ನಿವೃತ್ತರಾದರು. ನಂತರ 1992ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿಯಾಗಿ ನೇಮಕಗೊಂಡರು. ಕಂಬಾರರು ಮುಗುಳು, ಹೇಳುತೇನ ಕೇಳು, ತಕರಾರಿನವರು, ಸಾವಿರದ ನೆರಳು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳೆ, ಚಕೋರಿ ಮುಂತಾದ ಕಾವ್ಯ ಸಂಕಲನಗಳನ್ನು ರಚಿಸಿದ್ದಾರೆ. ಬೆಂಬತ್ತಿದ ಕಣ್ಣು, ನಾಶಿಶ್ನ, ಋಷ್ಯಶೃಂಗ, ಜೋಕುಮಾರಸ್ವಾಮಿ, ಚಾಳೇಶ, ಜೈಸಿದ್ದನಾಯಕ, ಕಾಡು ಕುದುರೆ, ಸಂಗ್ಯ ಬಾಳ್ಯಾ, ಹರಕೆಯ ಕುರಿ, ತುಕ್ರನ ಕನಸು, ಪುಷ್ಪರಾಣಿ, ಹುಲಿಯ ನೆರಳು, ಸಿರಿಸಂಪಿಗೆ, ಮಹಾಮಾಯಿ, ಶಿವರಾತ್ರಿ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಕಂಬಾರರು ಕನ್ನಡ ಸಾರಸ್ವತ ಲೋಕಕ್ಕೆ ಚಿರಪರಿಚಿತರಾದ ಖ್ಯಾತ ಲೇಖಕರು. ಅವರ ಪ್ರತಿಭೆ ಬಹುಮುಖವಾಗಿದ್ದು ಇವರು ಕವಿಗಳಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಜಾನಪದ ವಿದ್ವಾಂಸರಾಗಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯ ಕೃತಿಗಳನ್ನು ನೀಡಿ ಕನ್ನಡ ಜನಮಾನಸದಲ್ಲಿ ತುಂಬಿ ಹೋಗಿದ್ದಾರೆ. ಕಂಬಾರರ ಸಾಧನೆ, ಅವರ ಕೊಡುಗೆ,ಅವರ ವ್ಯಕ್ತಿತ್ವ,ಅವರ ಸಾಹಿತ್ಯ ಅಭಿರುಚಿ, ಸಾಹಿತ್ಯ ಲೋಕಕ್ಕೆ ಕೊಟ್ಟ ಕೊಡುಗೆ ಇವುಗಳನ್ನು ಗುರುತಿಸಿ ಈ ಕೆಳಕಂಡ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗಿದೆ. ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ,ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ,ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ,ಕಲ್ಕತ್ತೆಯ ನಾಂದಿ ಕರ ಪ್ರಶಸ್ತಿ,ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕಬೀರ ಸಮ್ಮಾನ ಪ್ರಶಸ್ತಿ, ಪಂಪ ಪ್ರಶಸ್ತಿ ಇತ್ಯಾದಿ. ಮಿಗಿಲಾಗಿ 2011ರಲ್ಲಿ ಅವರ ಸಮಗ್ರ ಸಾಹಿತ್ಯಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಕನ್ನಡಕ್ಕೆ ಎಂಟನೆಯದಾಗಿ ದೊರೆತಿರುವುದು ಕನ್ನಡಿಗರೆಲ್ಲರಿಗೆ ಹೆಮ್ಮೆ ತಂದಿದೆ. ಇಂತಹ ಮೇರು ಸಾಹಿತಿ ಯವರು ಕನ್ನಡ ಸಾಹಿತ್ಯ ಲೋಕಕ್ಕೆ ಕೊಟ್ಟ ಕೊಡುಗೆ ಅಪಾರ. ಇಂದು ಸನ್ಮಾನ್ಯರ 89ನೇ ವರ್ಷದ ಜನ್ಮ ಜಯಂತಿಯನ್ನು ಕನ್ನಡಿಗರಾದ ನಾವುಗಳು ಆಚರಿಸುವುದರ ಮೂಲಕ, ಅವರಿಗೆ ಆಯಸ್ಸು, ಆರೋಗ್ಯ ಶಾಂತಿ , ನೆಮ್ಮದಿ, ಸಂತೋಷ ದೊರಕಲಿ ಎಂದು ಪ್ರಾರ್ಥಿಸೋಣ.



# ಜ್ವರಕ್ಕೆ ಸಿಂಪಲ್ ಮನೆಮದ್ದು

ಹವಾಮಾನ ಬದಲಾವಣೆ ಮತ್ತು ವೈರಲ್ ಸೋಂಕುಗಳ ಹೆಚ್ಚಳದ ನಡುವೆ ಜ್ವರ ಪ್ರಕರಣಗಳು ದಿಢೀರ್ ಏರಿಕೆಯಾಗಿದ್ದು, ನಾಗರಿಕರು ಸರಳ ಹಾಗೂ ಬಳಕೆಗೆ ಸುಲಭವಾದ ಮನೆಮದ್ದುಗಳತ್ತ ಮುಖ ಮಾಡಿದ್ದಾರೆ. ಸಾಮಾನ್ಯ ಜ್ವರಕ್ಕೆ ಮನೆಮದ್ದುಗಳು ಸಹಕಾರಿ ಆಗಬಹುದು. ಆದರೆ ತೀವ್ರ ಲಕ್ಷಣಗಳು ಕಂಡುಬಂದರೆ ವಿಳಂಬವಿಲ್ಲದೆ ವೈದ್ಯಕೀಯ ನೆರವು ಅಗತ್ಯ.

## ಹೆಚ್ಚು ಪ್ರಯೋಜನಕಾರಿ ಮನೆಮದ್ದುಗಳು

**ಶುಂಠಿ ಕಷಾಯ:** ಶುಂಠಿ, ಜೀರಿಗೆ ಅಥವಾ ಸೊಪ್ಪು ಮತ್ತು



ಸ್ವಲ್ಪ ಬೆಲ್ಲ ಸೇರಿಸಿ ಕಷಾಯ ಮಾಡಿ ಕುಡಿಯುವುದು ದೇಹದ ದಹನ ಕಡಿಮೆ ಮಾಡಲು ನೆರವಾಗುತ್ತದೆ.

**ತುಳಸಿ ಕಷಾಯ:** ತುಳಸಿ ಎಲೆಗಳನ್ನು ನೀರಿನಲ್ಲಿ ಕುದಿಸಿ ಕುಡಿಯುವುದರಿಂದ ಜ್ವರದ ಅಸ್ವಸ್ಥತೆ ತಗ್ಗುತ್ತದೆ.

**ಬೆಚ್ಚಗಿನ ನೀರಿನ ಸೇವನೆ:** ಜ್ವರದಲ್ಲಿ ದೇಹ ಡೀಹೈಡ್ರೇಟ್ ಆಗುವ ಸಾಧ್ಯತೆ ಇರುವುದರಿಂದ ಹೆಚ್ಚು ಬೇಯಿಸಿದ ನೀರು, ಸೂಪ್ ಮತ್ತು ಸಾರುಗಳನ್ನು ಸೇವಿಸಲು ತಜ್ಞರು ಸಲಹೆ ನೀಡಿದ್ದಾರೆ.

**ತಣ್ಣೀರಿನ ಒರೆಸುವಿಕೆ:** ತೀವ್ರ ಜ್ವರದ ಸಂದರ್ಭದಲ್ಲಿ ನೆತ್ತಿ, ಕುತ್ತಿಗೆ ಮತ್ತು ಕೈಮುಟ್ಟಿಗೆ ತಣ್ಣೀರಿನ ಬಟ್ಟೆಯನ್ನು ಇಡುವುದು ತಾಪಮಾನ ತಗ್ಗಿಸಲು ಪರಿಣಾಮಕಾರಿ ವಿಧಾನ.

**ವಿಶ್ರಾಂತಿ ಮತ್ತು ಆಹಾರ:** ಯಥೇಚ್ಛ ವಿಶ್ರಾಂತಿ ಹಾಗೂ ಗಂಜಿ, ಹಣ್ಣು, ಸೂಪ್‌ಗಳಂತಹ ಹಗುರ ಆಹಾರ ಸೇವನೆ ದೇಹ ಪುನರುಜ್ಜೀವನಕ್ಕೆ ಸಹಕಾರಿ.

**ಯಾವಾಗ ವೈದ್ಯರನ್ನು ಸಂಪರ್ಕಿಸಬೇಕು?:** ಜ್ವರ 72 ಗಂಟೆಗಳಿಗಿಂತ ಹೆಚ್ಚು ಮುಂದುವರಿದರೆ, ಉಸಿರಾಟದ ತೊಂದರೆ ಕಂಡುಬಂದರೆ, ದೇಹದಲ್ಲಿ ಅತಿಯಾದ ನೋವು ಮಕ್ಕಳು, ಹಿರಿಯರು ಹಾಗೂ ಗರ್ಭಿಣಿಯರಿಗೆ ಜ್ವರ ಇದ್ದಲ್ಲಿ ಕೂಡಲೇ ವೈದ್ಯರನ್ನು ಭೇಟಿಯಾಗಬೇಕು

# ಹೊಸ ವರ್ಷಕ್ಕೆ ಈ ಪುಟ್ಟ ಅಭ್ಯಾಸಗಳನ್ನು ಪಾಲಿಸಿದ್ರೆ ನಿಮ್ಮ ಆರೋಗ್ಯ ಉತ್ತಮವಾಗಿರೋದಂತೂ ಖಂಡಿತ

ನಮ್ಮ ಆರೋಗ್ಯ, ನಮ್ಮ ಕೈಯಲ್ಲೇ ಇದೇ. ನಾವು ಯಾವ ರೀತಿ ನಮ್ಮ ದೇಹವನ್ನು ನೋಡಿಕೊಳ್ಳುತ್ತೇವೋ, ಆರೋಗ್ಯಕರ ದಿನಚರಿಯನ್ನು ಅಳವಡಿಸಿಕೊಳ್ಳುತ್ತೇವೋ ಅದು ನೇರವಾಗಿ ನಮ್ಮ ಆರೋಗ್ಯ ಕಾಪಾಡಲು ಸಹಕಾರಿಯಾಗಬಲ್ಲದು. ಆರೋಗ್ಯವಾಗಿರಲು ಯಾವಾಗಲೂ ಸಂಕೀರ್ಣವಾದ ದಿನಚರಿ ಅಥವಾ ದುಬಾರಿ ಮಧ್ಯಸ್ಥಿಕೆಗಳು ಬೇಕಾಗುವುದಿಲ್ಲ. ಸೂಕ್ಷ್ಮ ಕ್ಷೇಮ ಅಭ್ಯಾಸಗಳು ಎಂದು ಕರೆಯಲ್ಪಡುವ ಸಣ್ಣ, ವಿಜ್ಞಾನ ಬೆಂಬಲಿತ ಅಭ್ಯಾಸಗಳು ನಿಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ದೊಡ್ಡ ವ್ಯತ್ಯಾಸವನ್ನುಂಟುಮಾಡಬಹುದು. ನಿಮ್ಮ ಒಟ್ಟಾರೆ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತವೆ. ಈ ಸೂಕ್ಷ್ಮ ಹೊಂದಾಣಿಕೆಗಳನ್ನು ನಿಮ್ಮಲ್ಲಿ ಸೇರಿಸಲು ಹೆಚ್ಚಿನ ಶ್ರಮದ ಅಗತ್ಯವಿಲ್ಲ.

**ಆಗಾಗ್ಗೆ ವಾಕಿಂಗ್ ಮಾಡಿ:** ಮಧುಮೇಹ, ಹೃದ್ರೋಗ, ಬೊಜ್ಜು ಮುಂತಾದ ಹಲವಾರು ಆರೋಗ್ಯ ಅಪಾಯಗಳು ಜಡ ಜೀವನಶೈಲಿಯೊಂದಿಗೆ ಸಂಬಂಧ ಹೊಂದಿವೆ. ಇದನ್ನು ಎದುರಿಸಲು, ದಿನವಿಡೀ ಕೆಲವು ಸಣ್ಣ ಚಲನೆಯ ವಿರಾಮಗಳನ್ನು ಸೇರಿಸುವುದು ಅತ್ಯಗತ್ಯ; ನಿಮ್ಮ ರಕ್ತ ಪರಿಚಲನೆ ಮತ್ತು ನಿಮ್ಮ ಕೀಲುಗಳನ್ನು ಚಲಿಸುವಂತೆ ಮಾಡಲು 5 ರಿಂದ 10 ನಿಮಿಷಗಳ ತ್ವರಿತ ವಿಸ್ತರಣೆ ಅಥವಾ ಲಘು ನಡಿಗೆ ಉತ್ತಮ.


**ನೀರಿನಂಶ ಕಾಪಾಡಿಕೊಳ್ಳಿ:** ನೀರು ಮೂತ್ರಪಿಂಡಗಳು, ಹೊಟ್ಟೆಗಳು ಮತ್ತು ನಿಮ್ಮ ರಕ್ತಪರಿಚಲನಾ ವ್ಯವಸ್ಥೆಯನ್ನು ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಸೌಮ್ಯವಾದ ನಿರ್ಜಲೀಕರಣವು ನಿಮ್ಮನ್ನು ತಲೆನೋವಿನಿಂದ ಆಯಾಸ ಗೊಳಿಸಬಹುದು ಮತ್ತು ಗಮನಹರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನೀರಿನ ಬಾಟಲಿಯನ್ನು ಹತ್ತಿರದಲ್ಲಿ ಇರಿಸಿ ಮತ್ತು ಸರಿಯಾದ ಜಲಸಂಚಯನ ಮತ್ತು ಉತ್ತಮ ಅಂಗಗಳ ಕಾರ್ಯವನ್ನು ನಿರ್ವಹಿಸಲು ಪದೇ ಪದೇ ನೀರು ಕುಡಿಯುತ್ತಿರಿ.

**ವ್ಯಕ್ತಿಯ ಮನಸ್ಥಿತಿಯನ್ನೇ ಬದಲಾಯಿಸುತ್ತದೆ**

**ಈ ಅಭ್ಯಾಸಗಳು ತಾನಾಗಿಯೇ ಚಿಕ್ಕದಾಗಿರಬಹುದು, ಆದರೆ ಅವುಗಳ ಪರಿಣಾಮಗಳು ಒಬ್ಬ ವ್ಯಕ್ತಿಯು ದಿನನಿತ್ಯ ಹೇಗೆ ಭಾವಿಸುತ್ತಾನೆ ಎಂಬುದನ್ನು ಬದಲಾಯಿಸಬಹುದು. ಸೂಕ್ಷ್ಮ ಸ್ವಾಸ್ಥ್ಯ ಅಭ್ಯಾಸಗಳು ಸುಸ್ಥಿರ, ಪ್ರಾಯೋಗಿಕ ಮತ್ತು ಪುರಾವೆ ಆಧಾರಿತವೆಂದು ಸಾಬೀತಾಗಿದೆ ಮತ್ತು ಸ್ಥಿರವಾಗಿ ಮಾಡುವ ಸಣ್ಣ ಆಯ್ಕೆಗಳು ವ್ಯಕ್ತಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಹೇಗೆ ಭಾವಿಸುತ್ತಾನೆ ಎಂಬುದನ್ನು ನಿಜವಾಗಿಯೂ ಬದಲಾಯಿಸಬಹುದು ಎಂದು ತೋರಿಸುತ್ತದೆ.**

**ಪೌಷ್ಟಿಕ-ಭರಿತ ತಿಂಡಿಗಳನ್ನು ಆರಿಸಿ:** ಬೀಜಗಳು, ಮೊಸರು ಮತ್ತು ಹಣ್ಣುಗಳಂತಹ ತಿಂಡಿಗಳನ್ನು ತಿನ್ನುವುದು ಪೋಷಕಾಂಶಗಳು ಮತ್ತು ಜೀವಸತ್ವಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಏಕೆಂದರೆ ಅವು ಸಂಸ್ಕರಿಸಲ್ಪಡುವುದಿಲ್ಲ. ಇದು ದೀರ್ಘಕಾಲದ ಪರಿಸ್ಥಿತಿಗಳ ಸಾಧ್ಯತೆಗಳನ್ನು ಕಡಿಮೆ ಮಾಡುವ ಮೂಲಕ ಮತ್ತು ಚಯಾಪಚಯವನ್ನು ಹೆಚ್ಚಿಸುವ ಮೂಲಕ ಕರುಳಿನ ಆರೋಗ್ಯ ಮತ್ತು ಒಟ್ಟಾರೆ ಆರೋಗ್ಯಕ್ಕೆ ಸಹಾಯ ಮಾಡುತ್ತದೆ.

**ಬ್ರೀಥಿಂಗ್ ಅನ್ನು ಅಭ್ಯಾಸ ಮಾಡಿ:** ಯಾರಾದರೂ ನಿಧಾನವಾಗಿ ತಮ್ಮ ಉಸಿರಾಟದ ಮೇಲೆ ಗಮನಹರಿಸಿದಾಗ, ಅವರು ಕಡಿಮೆ ಆಮ್ಲಜನಕವನ್ನು ಒಳಗೆ ಎಳೆಯುತ್ತಾರೆ. ಇದು ಹೃದಯ ಬಡಿತವನ್ನು ನಿಧಾನಗೊಳಿಸುವ ಮತ್ತು ಕಾರ್ಟಿಸೋಲ್ ಅನ್ನು ಕಡಿಮೆ ಮಾಡುವ ಮೂಲಕ ದೇಹದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಹೊಟ್ಟೆಯಿಂದ ಎಲ್ಲಾ ರೀತಿಯಲ್ಲಿ ಉಸಿರಾಟದ ಮೇಲೆ 2 ರಿಂದ 3 ನಿಮಿಷಗಳನ್ನು ಕೇಂದ್ರೀಕರಿಸುವುದು ಒತ್ತಡವನ್ನು ನಿವಾರಿಸಲು ಸಹಾಯಕವಾಗಿದೆ.



**ಮೈಂಡ್‌ಫುಲ್‌ನೆಸ್ ಅನ್ನು ಸಂಯೋಜಿಸುತ್ತದೆ:** ಯಾವುದನ್ನಾದರೂ ಗುರುತಿಸಿ ಮತ್ತು ಮೆಚ್ಚಿದ ನಂತರ, ಯೋಚಿಸಲು ಕೆಲವು ನಿಮಿಷಗಳನ್ನು ತೆಗೆದುಕೊಳ್ಳಿ. ಇದು ಮಾನಸಿಕ ಮತ್ತು ರೋಗನಿರೋಧಕ ಆರೋಗ್ಯಕ್ಕೆ ಸಹಾಯ ಮಾಡುತ್ತದೆ. ಉದಾಹರಣೆಗೆ, ನೀವು ಪ್ರತಿದಿನ ಅಥವಾ ಕನಿಷ್ಠ ನಿಯಮಿತವಾಗಿ ಕೃತಜ್ಞರಾಗಿರುವ ಒಂದು ವಿಷಯವನ್ನು ಬರೆದಿಡಲು ಪ್ರಯತ್ನಿಸಿ.



**ನಿದ್ರೆಗೆ ಆದ್ಯತೆ ನೀಡಿ:** ನಿದ್ರೆಯು ಮಾನಸಿಕ ಸ್ಪಷ್ಟತೆ, ಹಾರ್ಮೋನ್ ಸಮತೋಲನ ಮತ್ತು ಬಲವಾದ ರೋಗನಿರೋಧಕ ವ್ಯವಸ್ಥೆಗೆ ಕೊಡುಗೆ ನೀಡುತ್ತದೆ. ಇದು ನಿಮ್ಮ ಮಾನಸಿಕ ಮತ್ತು ದೈಹಿಕ ಯೋಗಕ್ಷೇಮಕ್ಕೂ ನಿಜವಾಗಿಯೂ ಮುಖ್ಯವಾಗಿದೆ. ನೀವು ಸಾಮಾನ್ಯವಾಗಿ ಮಲಗುವುದಕ್ಕಿಂತ ಸುಮಾರು 15 ರಿಂದ 30 ನಿಮಿಷಗಳ ಮೊದಲು ಮಲಗಲು ನಿಮ್ಮ ಮೊಬೈಲ್‌ನಿಂದ ದೂರವಿರುವುದು ಉತ್ತಮ ಉಪಾಯವಾಗಿದೆ.

**ಸ್ಕ್ರೀನ್ ಓವರ್‌ಲೋಡ್ ಅನ್ನು ಮಿತಿಗೊಳಿಸಿ:** 20–20–20 ನಿಯಮ. ಪ್ರತಿ 20 ನಿಮಿಷಗಳಿಗೊಮ್ಮೆ, ಕನಿಷ್ಠ 20 ಅಡಿ ದೂರದಲ್ಲಿರುವ ಏನನ್ನಾದರೂ ನೋಡಲು 20 ಸೆಕೆಂಡುಗಳ ವಿರಾಮವನ್ನು ತೆಗೆದುಕೊಳ್ಳಿ. ಇದು ಕಣ್ಣಿನ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಉತ್ತಮವಾಗಿ ನಿದ್ರಿಸಲು ಸಹಕರಿಸುವುದಲ್ಲದೆ ಆತಂಕವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದು ಗಮನ ಮತ್ತು ಏಕಾಗ್ರತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

## ಗೋಮಾಂಸ ಸಾಗಾಟ ಪ್ರಕರಣ: ಇಬ್ಬರು ಆರೋಪಿಗಳ ಬಂಧನ

• **ಉದಯವಾಹಿನಿ ಮಂಗಳೂರು**

ಮಳಲಿ ನಾರ್ಲಪದವು ಎಂಬಲ್ಲಿ ದನದ ಮಾಂಸ ಅಕ್ರಮ ಸಾಗಾಟ ಪ್ರಕರಣ ಸಂಬಂಧ ತಿರುಚಿದ ಬಿಲ್ ನೀಡಿ ನ್ಯಾಯಾಲಯವನ್ನು ವಂಚಿಸಿದ ಕುರಿತು ಆರೋಪಿಗಳಿಬ್ಬರನ್ನು ಬಜಪೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದನದ ಮಾಂಸವನ್ನು ಅಕ್ರಮವಾಗಿ ಸಾಗಿಸಿದ ಆರೋಪಿ ಮುಲ್ಲರಪಟ್ಟದ ಅಬ್ದುಲ್ ಸತ್ತಾರ್ ಅಲಿಯಾಸ್ ಸತ್ತಾರ್ (54), ತಿರುಚಿದ ಬಿಲ್ ನೀಡಿದ್ದ ದೇರಳಕಟ್ಟೆ ಮಾಂಸದ ಅಂಗಡಿ ಮಾಲೀಕ, ತೊಕ್ಕೊಟ್ಟು ಚೊಂಬುಗುಡ್ಡೆಯ ಅಬ್ದುಲ್ ಸತ್ತಾರ್ (41) ಬಂಧಿತರು. ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಅಬ್ದುಲ್ ಸತ್ತಾರ್ ತಮ್ಮ ಅಪ್ರಾಪ್ತ ವಯಸ್ಸಿನ ಮಗಳ ಜೊತೆ ಬೈಕಿನಲ್ಲಿ ಡಿ. 27ರಂದು ಸಾಗುತ್ತಿದ್ದಾಗ ಆರೋಪಿಗಳಾದ ಸುಮಿತ್ ಭಂಡಾರಿ ಹಾಗೂ ರಜತ್ ನಾಯ್ಕ ಟಾಟಾ ಸುಮೊ ವಾಹನದಲ್ಲಿ ಹಿಂಬಾಲಿಸಿ, ಅಡ್ಡಗಟ್ಟಿ ಅವರ ಮೇಲೆ ಹಲ್ಲೆ ನಡೆಸಿದ್ದ ಆರೋಪದ ಮೇಲೆ ಬಜಪೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಅಬ್ದುಲ್ ಸತ್ತಾರ್ ಬೈಕಿನಲ್ಲಿ ಸುಮಾರು 19 ಕೆ.ಜಿ. ಗೋಮಾಂಸ ಪತ್ತೆಯಾಗಿತ್ತು. ಗೋಮಾಂಸ ಸಾಗಾಟಕ್ಕೆ ಅಧಿಕೃತ ದಾಖಲೆ ಹೊಂದಿರದ ಕಾರಣ ಸ್ವಯಂಪ್ರೇರಿತವಾಗಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿ ಅಬ್ದುಲ್ ಸತ್ತಾರ್‌ನನ್ನೂ ಬಂಧಿಸಿದ್ದರು.

ಗೋಮಾಂಸ ಖರೀದಿಸಿದ್ದಕ್ಕೆ ದೇರಳಕಟ್ಟೆಯ ಮಾಂಸ ಮಾರಾಟ ಮಳಿಗೆಯ ಬಿಲ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಅದರ ಆಧಾರದಲ್ಲಿ ಅಬ್ದುಲ್ ಸತ್ತಾರ್‌ಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಅಬ್ದುಲ್ ಸತ್ತಾರ್ ಸಲ್ಲಿಸಿದ ಬಿಲ್ ಬಗ್ಗೆ ಅನುಮಾನ ಬಂದಿದ್ದರಿಂದ ಪೊಲೀಸರು ದೇರಳಕಟ್ಟೆಯ ಮಾಂಸ ಮಾರಾಟ ಮಳಿಗೆಯ ಬಿಲ್ ಬುಕ್ ಪರಿಶೀಲಿಸಿದ್ದರು. ಆಗ ನ್ಯಾಯಾಲಯಕ್ಕೆ ತಿರುಚಿದ ಬಿಲ್ ಸಲ್ಲಿಸಿರುವುದು ಪತ್ತೆಯಾಗಿತ್ತು ಎಂದು ಪೊಲೀಸ್ ಕಮಿಷನರ್ ಮಾಹಿತಿ ನೀಡಿದ್ದಾರೆ.

### ಪ್ರವಾಸಿಗರು ನಡೆದುಕೊಳ್ಳುವ ರೀತಿಯಿಂದ ಬೇರೆ ಪ್ರವಾಸಿಗರು ತೊಂದರೆ ಅನುಭವಿಸುವಂತಾಗಿದೆ

# ಕಸದ ತೊಟ್ಟಿಯಾದ ವಿಶ್ವ ಪಾರಂಪರಿಕ ತಾಣ

• **ಉದಯವಾಹಿನಿ ಹಳೇಬೀಡು**

ವಿಶ್ವ ಪಾರಂಪರಿಕ ತಾಣವಾದ ಹಳೇಬೀಡು ಪ್ರವಾಸಿಗರು ಹಾಗೂ ವರ್ತಕರ ಉಪಟಳದಿಂದ ಕಸದ ತೊಟ್ಟಿಯಂತಾಗಿದೆ. ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಸೇರಿರುವ ಜೈನ ಬಸದಿ ರಸ್ತೆಯ ಎರಡೂ ಬದಿಯಲ್ಲಿ ತ್ಯಾಜ್ಯ ಹರಡಿದೆ.

ಬಸ್ತಿಹಳ್ಳಿ ವೃತ್ತದಿಂದ ಸುಮಾರು 100 ಮೀಟರ್ ದೂರದವರೆಗೂ ಪ್ರವಾಸಿಗರು ಓಡಾಡುವ ಸ್ಥಳದಲ್ಲಿಯೇ ತ್ಯಾಜ್ಯ ಬೀಳುತ್ತಿದ್ದು, ಇದೇನು ವಿಶ್ವ ಪಾರಂಪರಿಕ ತಾಣವೇ ಎಂಬ ಪ್ರಶ್ನೆ ಪ್ರವಾಸಿಗರಲ್ಲಿ ಮೂಡುವಂತಾಗಿದೆ. ಬಸ್ತಿಹಳ್ಳಿಯ ಜೈನ ಬಸದಿ ಪ್ರವೇಶ ದ್ವಾರದ ಬಳಿ ಅಡುಗೆ ಮಾಡಿದ ಪ್ರವಾಸಿಗರು, ಬೇಯಿಸಿ ಉಳಿದ ಆಹಾರ ಪದಾರ್ಥವನ್ನು ಸುರಿದಿದ್ದಾರೆ. ರಾಶಿಗಟ್ಟಲೆ ಸುರಿದ ಅನ್ನ ಕೊಳೆತು ದುರ್ವಾಸನೆ ಬೀರುತ್ತಿದೆ. ಕೆಲವು ಪ್ರವಾಸಿಗರು ನಡೆದುಕೊಳ್ಳುವ ರೀತಿಯಿಂದ ಬೇರೆ ಪ್ರವಾಸಿಗರು ತೊಂದರೆ ಅನುಭವಿಸುವಂತಾಗಿದೆ ಎಂದು ಸ್ಥಳೀಯರು ದೂರುತ್ತಿದ್ದಾರೆ.

ಜೈನ ಬಸದಿ ಪ್ರವೇಶ ದ್ವಾರದ ಬಳಿ ನಿತ್ಯ ಶಾಲಾ ಮಕ್ಕಳ ಪ್ರವಾಸದವರು ಅಡುಗೆ ಮಾಡುತ್ತಿದ್ದಾರೆ. ಕೆಲವರು ಸ್ವಚ್ಛ ಮಾಡಿ ತೆರಳುತ್ತಾರೆ. ಸಾಕಷ್ಟು ಮಂದಿ ಉಳಿದ ಆಹಾರ ಪದಾರ್ಥ ಹಾಗೂ ಊಟ, ಉಪಾಹಾರ ಸೇವಿಸಿದ ಪೇಪರ್ ಪ್ಲೇಟ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಇದರಿಂದ ಬಸ್ತಿಹಳ್ಳಿ ಗ್ರಾಮದ ಸ್ವಚ್ಛತೆಗೆ ಧಕ್ಕೆಯಾಗಿದೆ. ಜೈನ ಬಸದಿ ಬಳಿ ಶೌಚಾಲಯ ಇಲ್ಲದೇ ಇರುವುದರಿಂದ ಕೆಲವು ಪ್ರವಾಸಿಗರು ಮಲ-ಮೂತ್ರ ವಿಸರ್ಜನೆ ಮಾಡುತ್ತಾರೆ ಎಂಬ ದೂರು ಬಸ್ತಿಹಳ್ಳಿ ಗ್ರಾಮಸ್ಥರಿಂದ ಕೇಳಿ ಬರುತ್ತಿದೆ.

ಹೊಯ್ಸಳೇಶ್ವರ ದೇವಾಲಯ ಪ್ರವೇಶ ದ್ವಾರದ ಬಳಿ ನಗರೇಶ್ವರ ಸ್ಮಾರಕ ಸಂಕೀರ್ಣ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಗೆ ತೆರಳುವ ರಸ್ತೆ ಬದಿಯ ಚರಂಡಿಯಲ್ಲಿ ತ್ಯಾಜ್ಯ ತುಂಬಿಕೊಂಡಿದೆ. ಮಳೆ ಬಂದಾಗ ತ್ಯಾಜ್ಯ ಕೊಳೆತು ದುರ್ನಾತ ಬೀರುತ್ತದೆ. ಕಬ್ಬಿನ ಹಾಲು ಹಿಂಡಿದ ಸೆತ್ತೆ. ಕಾಫಿ ಚಹಾ ಕುಡಿದ ಲೋಟಗಳು ಈ ಸ್ಥಳದಲ್ಲಿ ರಾಶಿಯಾಗಿ ಬೀಳುತ್ತಿವೆ. ಕಸ ಸಾಗಿಸುವ ವಾಹನ ಸಂಚರಿಸಿದರೂ ಇಲ್ಲಿ ಕಸ ಹಾಕುವ ಪ್ರವೃತ್ತಿ ನಡೆಯುತ್ತಿದೆ. ಕಳೆದ ವಾರ ಗ್ರಾಮ ಪಂಚಾಯಿತಿಯವರು ಹೊಯ್ಸಳೇಶ್ವರ ದೇವಾಲಯ ಬಳಿ ರಸ್ತೆಗೆ ಚಾಚಿದ ಅಂಗಡಿಗಳನ್ನು ಹಿಂದಕ್ಕೆ ಸರಿಸಿ, ಸ್ವಚ್ಛವಾಗಿಟ್ಟುಕೊಳ್ಳಲು ತಿಳಿವಳಿಕೆ ನೀಡಿದ್ದರು. ಆದರೂ ವರ್ತಕರು ಕಸ ಸುರಿಯುತ್ತಿದ್ದಾರೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು. ಪುರಾತತ್ವ ಹಾಗೂ ಪ್ರವಾಸೋದ್ಯಮ ಇಲಾಖೆಯವರು ಹೊಯ್ಸಳೇಶ್ವರ ಹಾಗೂ ಜೈನ ದೇವಾಲಯದ ಮುಂಭಾಗ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಕಸ ಸುರಿಯುವುದು ಕಂಡುಬಂದರೆ ಗ್ರಾಮ ಪಂಚಾಯಿತಿಗೆ ತಿಳಿಸಬೇಕು ಎನ್ನುತ್ತಾರೆ ಮುಖಂಡ ರವಿ.



ಉದಯವಾಹಿನಿ ಚಿತ್ರ

**ಪತ್ತೆ ಹಚ್ಚಿ ದಂಡ**

**ಶಾಲಾ ಮಕ್ಕಳು ಹಾಗೂ ಪ್ರವಾಸಿಗರ ದೊಡ್ಡ ತಂಡ ಹಳೇಬೀಡಿನಲ್ಲಿ ಉಳಿಯಲು ಡಾರ್ಮೆಟರಿ ಹಾಗೂ ಅಡುಗೆ ಮಾಡಿಕೊಳ್ಳುವಂತಹ ಜಾಗದ ವ್ಯವಸ್ಥೆ ಆಗಬೇಕಾಗಿದೆ. ಇದರಿಂದ ಕಸ ಹಾಕುವುದು ತಪ್ಪಲಿದೆ. -ಮಹೇಶ್ ಸ್ಥಳೀಯ ನಿವಾಸಿ**

**ಪ್ರವಾಸಿ ತಾಣದ ಸ್ವಚ್ಛತೆಗೆ ಪ್ರವಾಸೋದ್ಯಮ ಹಾಗೂ ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು ಕೈಜೋಡಿಸಬೇಕು. ದೇವಾಲಯದ ಸುತ್ತ ಜನರು ಕಸ ಸುರಿಯದಂತೆ ನೋಡಿಕೊಳ್ಳಬೇಕು. -ಎಚ್.ಬಿ.ಚಂದ್ರಶೇಖರ್ ಗ್ರಾಮ ಪಂಚಾಯಿತಿ ಸದಸ್ಯ**

### ಡಿ.ಸಿ ಅಸಮಾಧಾನ

**ಜೈನ ಬಸದಿಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ರಸ್ತೆಯ ಸುತ್ತ ಬಿದ್ದಿದ್ದ ಕಸದ ರಾಶಿ ನೋಡಿ ಬೇಸರ ವ್ಯಕ್ತಪಡಿಸಿದರು. ಪ್ರವಾಸಿಗರು ಕಸ ಸುರಿಯದಂತೆ ಪುರಾತತ್ವ ಸಿಬ್ಬಂದಿ ನೋಡಿಕೊಳ್ಳಬೇಕು ಎಂದು ಸೂಚಿಸಿದರು. ಸ್ವಚ್ಛತೆ ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರಲ್ಲಿಯೂ ಇರಬೇಕು. ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡಿ ಗ್ರಾಮ ಪಂಚಾಯಿತಿಯನ್ನು ಹೊಣೆ ಮಾಡಬಾರದು. ಜೆಸಿಬಿಯಿಂದ ದೊಡ್ಡದಾದ ತ್ಯಾಜ್ಯ ರಾಶಿ ತೆರವು ಮಾಡಲು 8ರಿಂದ 10 ಗಂಟೆ ಬೇಕು. ಇದಕ್ಕಾಗಿ ಸಾವಿರಾರು ರೂಪಾಯಿ ವೆಚ್ಚವಾಗುತ್ತದೆ. ತ್ಯಾಜ್ಯ ಸಾಗಿಸಲು ಪಂಚಾಯಿತಿಯ ಟ್ರ್ಯಾಕ್ಟರ್ ಸಂಚರಿಸುತ್ತದೆ. ಆದರೂ ಕೆಲವು ಕಡೆ ತ್ಯಾಜ್ಯ ರಾಶಿ ಬೀಳುತ್ತಿದೆ. ಕಸ ಸುರಿಯುವವರನ್ನು ಪತ್ತೆ ಹಚ್ಚಿ ದಂಡ ವಿಧಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಪಿಡಿಒ ಎಸ್.ಸಿ.ವಿರೂಪಾಕ್ಷ ತಿಳಿಸಿದರು.**

## 5ರಂದು ನಯನ ಭಾರ್ಗವ ಪಾಕ್ಷಿಕ ಪತ್ರಿಕೆಯ 9ನೇ ವಾರ್ಷಿಕೋತ್ಸವ

• **ಉದಯವಾಹಿನಿ ಮುದ್ದೇಬಿಹಾಳ:**

ನಯನ ಭಾರ್ಗವ ಪಾಕ್ಷಿಕ ಪತ್ರಿಕೆಯ 9ನೇ ವಾರ್ಷಿಕೋತ್ಸವ ಹಾಗೂ ನೂತನ ವರ್ಷದ ದಿನದರ್ಶಿಕೆ ಲೋಕಾರ್ಪಣೆ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಜ.5ರಂದು ಪಟ್ಟಣದ ಬೆಂಗಳೂರು ಬೇಕರಿ ಸಭಾ ಭವನದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಲಿದೆ ಎಂದು ನಯನ ಭಾರ್ಗವ ಪಾಕ್ಷಿಕ ಪತ್ರಿಕೆ ಸಂಪಾದಕ ರವಿ ತೇಲಂಗಿ ಹಾಗೂ ಪತ್ರಿಕೆಯ ಉಪ ಸಂಪಾದಕ, ನಯನ ಭಾರ್ಗವ ನ್ಯೂಸ್ ಚಾನೆಲ್ ಸಂಪಾದಕರಾದ ಅನಿಲಕುಮಾರ್ ತೇಲಂಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕುಂಟೋಜಿ ಭಾವೈಕ್ಯ ಮಠದ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಲೋಟಗೇರಿ ಕಣಕಾಲ ಮಠದ ಗುರುಮೂರ್ತಿ ದೇವರು ಸಾನಿಧ್ಯ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ರಾಯಚೂರು ಡಿವೈಎಸ್ಪಿ ಶಾಂತವೀರ ಈ. ಹಾಗೂ ಗುಂಡ್ಲುಪೇಟೆ ನಕ್ಸಲ್ ನಿಗ್ರಹ ಪಡೆಯ ಆಂತರಿಕ ಭದ್ರತೆ ವಿಭಾಗದ ಪಿಎಸ್‌ಐ ಭೀಮಸಿ ಎಸ್.ಎಚ್. ಮತ್ತು ಮೈಸೂರಿನ ಹಿರಿಯ ಪತ್ರಕರ್ತ ರುದ್ರಗೌಡ ಮುರಾಳ (ಕವಡಿಮಟ್ಟಿ) ಭಾಗವಹಿಸುವರು.

ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಪಕ್ಷದ ಮುಖಂಡ ಸಿ.ಬಿ. ಅಸ್ಕಿ, ಸಮಾಜ ಸೇವಕ ಮಲ್ಲಿಕಾರ್ಜುನ ಮದರಿ, ಉದ್ಯಮಿ ಭರತಗೌಡ ಪಾಟೀಲ ನಡಹಳ್ಳಿ, ನ್ಯಾಯವಾದಿ ಜೆ.ಎ. ಚಿನಿವಾರ, ರೈತಪರ ಹೋರಾಟಗಾರ ಬಿ.ಬಿ. ಪಾಟೀಲ ಹಿರೇಮುರಾಳ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕಾಮರಾಜ ಬಿರಾದಾರ, ಪುರಸಭೆ ಅಧ್ಯಕ್ಷ ಮಹೆಬೂಬ ಗೊಳಸಂಗಿ, ಗಣ್ಯರಾದ ಸತೀಶ ಓಸ್ವಾಲ್, ಅಯೂಬ್ ಮನಿಯಾರ, ನೇತಾಜಿ ನಲವಡೆ, ರವಿ ನಾಯಕ, ಸಂಗಿತಾ ನಾಡಗೌಡ, ರವಿ ಕಮತ, ರಾಮಣ್ಣ ಖಾನಾಪುರ, ಗಣೇಶ ಅನ್ನಗೌನಿ, ಧರ್ಮಯುದ್ಧ ಪತ್ರಿಕೆ ಸಂಪಾದಕ ಪುಂಡಲೀಕ ಮುರಾಳ ಭಾಗವಹಿಸಲಿದ್ದು, ಹಿರಿಯ ಪತ್ರಕರ್ತ ಡಿ.ಬಿ. ವಡವಡಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

**ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ**

**ವಿವಿಧ ಸಾಧಕರಿಗೆ ನಯನ ಭಾರ್ಗವ ಪ್ರಶಸ್ತಿ ಪ್ರದಾನ:** ಸಿದ್ದಪ್ಪ ಮೇಟಿ ಅವರಿಗೆ ನಯನ ಭಾರ್ಗವ ಕಲಿಯುಗದ ಶ್ರವಣಕುಮಾರ (ವಿಶೇಷ ಸಾಧಕ ವಿಭಾಗ), ಬಸವರಾಜ ಲಮಾಣಿ ಅವರಿಗೆ ನಯನ ಭಾರ್ಗವ ಆದರ್ಶ ಶಿಕ್ಷಕ ರತ್ನ ಪ್ರಶಸ್ತಿ (ಶೈಕ್ಷಣಿಕ ಸೇವೆ), ಮೋಹನ ಬಾಬು ಬಿ.ಎಸ್. ಅವರಿಗೆ ನಯನ ಭಾರ್ಗವ ಆದರ್ಶ ಮಾದರಿ ಶಿಕ್ಷಕ ಪ್ರಶಸ್ತಿ (ಶೈಕ್ಷಣಿಕ ಸೇವೆ), ಡಿ.ಬಿ. ವಡವಡಗಿ ಅವರಿಗೆ ನಯನ ಭಾರ್ಗವ ಮಾಧ್ಯಮ ರತ್ನ ಪ್ರಶಸ್ತಿ (ಮಾಧ್ಯಮ ವಿಭಾಗ), ವಿರೇಶ ವಾಲಿ ಅವರಿಗೆ ನಯನ ಭಾರ್ಗವ ಗಾನ ಗಾರುಡಿಗ ಪ್ರಶಸ್ತಿ (ಸಂಗೀತ ಸೇವಾ ಕ್ಷೇತ್ರ), ಮಹಾಂತೇಶ ಸಿದರೆಡ್ಡಿ ಅವರಿಗೆ ನಯನ ಭಾರ್ಗವ ಶೈಕ್ಷಣಿಕ ಪ್ರಗತಿ ಸೇವಾ ರತ್ನ ಪ್ರಶಸ್ತಿ (ಶೈಕ್ಷಣಿಕ ಲೇಖಕ), ವಿಠ್ಠಲ ಕಿಲಾರಹಟ್ಟಿ ಅವರಿಗೆ ನಯನ ಭಾರ್ಗವ ಉತ್ತಮ ಶುಶ್ರೂಷಾಧಿಕಾರಿ ಪ್ರಶಸ್ತಿ (ವೈದ್ಯಕೀಯ ಸೇವಾ ವಿಭಾಗ), ಚಂದ್ರಶೇಖರ ಜಾರೆಡ್ಡಿ ಅವರಿಗೆ ನಯನ ಭಾರ್ಗವ ಮಾದರಿ ಕ್ಷೇತ್ರ ಆರೋಗ್ಯಾಧಿಕಾರಿ ಪ್ರಶಸ್ತಿ (ಆರೋಗ್ಯ ಜಾಗೃತಿ ವಿಭಾಗ), ಅಂಬಾಜಿ ಘೋರ್ಪಡೆ ಅವರಿಗೆ ನಯನ ಭಾರ್ಗವ ಮಾಧ್ಯಮ ರತ್ನ ಪ್ರಶಸ್ತಿ (ಮಾಧ್ಯಮ ಕ್ಷೇತ್ರ), ಈಶ್ವರಯ್ಯ ಹಿರೇಮಠ ಅವರಿಗೆ ನಯನ ಭಾರ್ಗವ ಮಾದರಿ ಅರಣ್ಯ ಗಸ್ತು ಪಾಲಕ ಪ್ರಶಸ್ತಿ (ಪರಿಸರ ರಕ್ಷಣೆ), ಮಾಜಿ ಸೈನಿಕ ಶಂಕರ ಕಾಮಟೆ ಅವರಿಗೆ ನಯನ ಭಾರ್ಗವ ವೀರ ಸೈನಿಕ ಪ್ರಶಸ್ತಿ (ದೇಶಸೇವೆ), ರಾಜಶ್ರೀ ಆಲಗುಂಡಿ ಅವರಿಗೆ ನಯನ ಭಾರ್ಗವ ಅಮೂಲ್ಯ ಜೀವ ರಕ್ಷಕಿ ಪ್ರಶಸ್ತಿ (ವೈದ್ಯಕೀಯ ಸೇವಾ ವಿಭಾಗ), ರೇಣುಕಾ ಹಡಪದ ಅವರಿಗೆ ನಯನ ಭಾರ್ಗವ ಮಾದರಿ ಅಂಗನವಾಡಿ ಕಾರ್ಯಕರ್ತೆ (ಮಹಿಳಾ ಮತ್ತು ಮಕ್ಕಳ ಇಲಾಖೆ), ಮಹಾಂತೇಶ ನೂಲಿನವರ ಅವರಿಗೆ ನಯನ ಭಾರ್ಗವ ಗ್ರಾಮೀಣ ಮಾಧ್ಯಮ ಸೇವಾ ರತ್ನ ಪ್ರಶಸ್ತಿ (ಮಾಧ್ಯಮ ಕ್ಷೇತ್ರ) ಪ್ರದಾನ ಮಾಡಲಾಗುತ್ತದೆ.

**ವಿಶೇಷ ಪ್ರಶಸ್ತಿ ಪ್ರದಾನ:** ರಾಯಚೂರು ಡಿವೈಎಸ್ಪಿ ಶಾಂತವೀರ ಈ. ಅವರಿಗೆ ನಯನ ಭಾರ್ಗವ ಶೌರ್ಯ ಪ್ರಶಸ್ತಿ ಹಾಗೂ ಗುಂಡ್ಲುಪೇಟೆ ನಕ್ಸಲ್ ನಿಗ್ರಹ ಪಡೆಯ ಆಂತರಿಕ ಭದ್ರತೆ ವಿಭಾಗದ ಪಿಎಸ್‌ಐ ಭೀಮಸಿ ಎಸ್.ಎಚ್. ಅವರಿಗೆ ನಯನ ಭಾರ್ಗವ ಅಪ್ರತಿಮ ಸಾಧಕ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

## ಸಾರ್ವಜನಿಕ ಸೇವೆಯಲ್ಲಿ ಪಾರದರ್ಶಕತೆ ಹಾಗೂ ವೇಗ ಕಾಪಾಡಬೇಕು : ಡಾ. ಬೆಲ್ದಾಳೆ

• **ಉದಯವಾಹಿನಿ ಬೀದರ್**

ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ಶ್ರಮ ವಹಿಸಿ, ಸಾರ್ವಜನಿಕ ಸೇವೆಗಳು ಸುಲಭವಾಗಿ, ಸಮಯಕ್ಕೆ ಸರಿಯಾಗಿ ಲಭ್ಯವಾಗುವಂತೆ ಕಾರ್ಯನಿರ್ವಹಿಸಬೇಕು ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಅಧ್ಯಕ್ಷತೆಯಲ್ಲಿ ಬೀದರ್ ನಗರದ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಾರ್ವಜನಿಕರ ಸಮಸ್ಯೆಗಳ ಕುರಿತು ನಡೆದ ಸಭೆಯಲ್ಲಿ ಚರ್ಚೆ ನಡೆಸಿ ಅವರು ಮಾತನಾಡಿದರು.

ಸಭೆಯಲ್ಲಿ ಕಂದಾಯ ಇಲಾಖೆಯ ಭೂಮಿ ಸಂಬಂಧಿತ ಸೇವೆಗಳಾದ ಭೂ ದಾಖಲೆಗಳ ನಿರ್ವಹಣೆ, ಭೂ ವಿವಾದಗಳ ಪರಿಹಾರ, ವಿಪತ್ತು ನಿರ್ವಹಣೆ, ಪಿಂಚಣಿ ಯೋಜನೆಗಳು ಸಾಮಾಜಿಕ ಭದ್ರತಾ ಯೋಜನೆಗಳು, ಸಂಧ್ಯಾ ಸುರಕ್ಷಾ, ಅಂತ್ಯ ಸಂಸ್ಕಾರ ಸಹಾಯಧನ, ರೈತ ಕುಟುಂಬಗಳಿಗೆ ನೆರವು, ನೆರೆ-ಬರ ಸೇರಿದಂತೆ ವಿವಿಧ ವಿಪತ್ತು ಪರಿಹಾರ, ಪಡಿತರ ಚೀಟಿ ವಿತರಣೆ ಹಾಗೂ ಜಾತಿ ಪ್ರಮಾಣ ಪತ್ರ ನೀಡುವಂತಹ ಹಲವಾರು ವಿಷಯಗಳ ಕುರಿತು ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಶೀಘ್ರ ಬಗೆಹರಿಸಬೇಕು ಎಂದು ಶಾಸಕರು ಸೂಚಿಸಿದರು.



ಉದಯವಾಹಿನಿ ಚಿತ್ರ

## ಮತದಾರ ಪಟ್ಟಿಯಲ್ಲಿ ಅಕ್ರಮ ಸೇರ್ಪಡೆ ವಿರೋಧಿಸಿ ಪ್ರತಿಭಟನೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಬಾಗಲಕೋಟೆ**

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಉದ್ದೇಶದಿಂದ ಆಡಳಿತ ಕಾಂಗ್ರೆಸ್ ಪಕ್ಷದ ಮುಖಂಡರು ಹುನಗುಂದ ಕ್ಷೇತ್ರದಲ್ಲಿ ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಹೆಸರು ಸೇರ್ಪಡೆ ಮಾಡುತ್ತಿದ್ದಾರೆ ಎಂದು ಆರೋಪಿಸಿ ಜಿಲ್ಲಾಡಳಿತ ಭವನದ ಎದುರು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ನೇತೃತ್ವದಲ್ಲಿ ಹುನಗುಂದ ಹಾಗೂ ಬಾಗಲಕೋಟೆ ಕ್ಷೇತ್ರದ ಬಿಜೆಪಿ ಮುಖಂಡರು ಪ್ರತಿಭಟನೆ ಮಾಡಿದರು.

ಮಾಜಿ ಶಾಸಕ ದೊಡ್ಡನಗೌಡ ಪಾಟೀಲ, ಹುನಗುಂದ ಕ್ಷೇತ್ರದ ಮುರಡಿ ಗ್ರಾಮದಲ್ಲಿ ಹೊರ ಜಿಲ್ಲೆಗಳ ಮತದಾರರನ್ನು ಅಕ್ರಮವಾಗಿ ಸೇರಿಸಲಾಗುತ್ತಿದೆ. ಜೊತೆಗೆ ಅಪ್ರಾಪ್ತರ ಹೆಸರು ಸಹ ಸೇರಿಸಿದ್ದಾರೆ. ಒಂದೇ ವಾರ್ಡ್‌ನಲ್ಲಿ ಒಬ್ಬ ಮತದಾರನ ಹೆಸರು ಸ್ವಲ್ಪ ಹೆಚ್ಚು, ಕಡಿಮೆ ಮಾಡಿ ಮೂರು ಕಡೆ ಸೇರಿಸಲಾಗಿದೆ. ಇದನ್ನು ಕಾಂಗ್ರೆಸ್ ಮುಖಂಡರು ಕೆಳ ಹಂತದ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಮಾಡಿಸುತ್ತಿದ್ದಾರೆ. ಇದರಲ್ಲಿ ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಶಾಮೀಲಾಗಿದ್ದಾರೆ ಎಂದು ದೂರಿದರು. ನಗರ ಪ್ರದೇಶದಲ್ಲಿ ಸಹ ನಗರಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಒಂದು ವಾರ್ಡಿನ 50ಕ್ಕೂ ಹೆಚ್ಚು ಮತದಾರರನ್ನು ಬೇರೆ ವಾರ್ಡ್‌ಗೆ ಸ್ಥಳಾಂತರ ಮಾಡಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿ ಗೆಲುವಿಗೆ ಪೂರಕವಾಗಿ ಅಕ್ರಮ ಎಸಗುತ್ತಿದ್ದಾರೆ. ಇದಕ್ಕೆ ಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನರ ಕುಮ್ಮಕ್ಕು ಇದೆ ಎಂದು ಆರೋಪಿಸಿದರು.

ಒಂದು ಕಡೆ ಕಾಂಗ್ರೆಸ್ ನಾಯಕರು ಮತ ಕಳವು ಎಂದು ದೇಶದಲ್ಲಿ ಓಡಾಡುತ್ತಿದ್ದಾರೆ. ಇಲ್ಲಿ ಕಾಂಗ್ರೆಸ್‌ನವರೇ ಮತ ಕಳವು ಮಾಡುತ್ತಿದ್ದಾರೆ. ನೆಹರೂ ಅವರಿಂದ ಸೋನಿಯಾಗಾಂಧಿವರೆಗೂ ಅಕ್ರಮ ಮಾಡಿಕೊಂಡೇ ಗೆದ್ದು ಬಂದಿದ್ದಾರೆ. ಈಗ ಬಿಜೆಪಿ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಹುನಗುಂದ ಕ್ಷೇತ್ರ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಸ್ಥಳೀಯ ಸಂಸ್ಥೆಯಲ್ಲಿ ಸೋಲುವ ಭೀತಿಯಿಂದ ಮತದಾರರ ಪಟ್ಟಿಯಲ್ಲಿ ಅಕ್ರಮ ಮಾಡುತ್ತಿದೆ ಎಂದು ದೂರಿದ ಅವರು, ಈ ಬಗ್ಗೆ ರಾಜ್ಯ ಚುನಾವಣಾ ಅಧಿಕಾರಿಗೂ ಸಹ ದೂರು ಕೊಡುತ್ತೇವೆ. ಇಲ್ಲಿ ಬರಿ ಬಿಎಲ್‌ಒ ವಿರುದ್ಧ ಕ್ರಮ ತೆಗೆದುಕೊಳ್ಳದೇ ಹಿರಿಯ ಅಧಿಕಾರಿಗಳ ವಿರುದ್ಧವೂ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ರಾಹುಲ್ ಗಾಂಧಿ ನಾಲಿಗೆ, ಮೆದುಳಿಗೆ ಲಿಂಕ್ ಇಲ್ಲವಾಗಿದೆ. ಹೀಗಾಗಿ ಮತ ಕಳವು ಎಂದು ತಿರುಗಾಡುತ್ತಿದ್ದಾರೆ. ಮಾಡಲು ಬೇರೆ ಕೆಲಸ ಇಲ್ಲ. ಸಂಸತ್ ಅಧಿವೇಶನ ನಡೆದಾಗ ವಿದೇಶಕ್ಕೆ ಹೋಗಿ, ಮುಗಿದ ಮೇಲೆ ವಾಪಸ್ ಬರುತ್ತಾರೆ. ಅವರಿಗೆ ಏನು ಮಾತನಾಡಬೇಕು ಎಂದು ಗೊತ್ತಿಲ್ಲ. ಯಾರೋ ಬರೆದು ಕೊಟ್ಟಿದ್ದನ್ನು ಓದುತ್ತಾರೆ. ಅದರ ಬಗ್ಗೆ ಮಾಹಿತಿಯೇ ಇರಲ್ಲ ಟೀಕಿಸಿದರು.

## ಜ್ಞಾನಕ್ಕೂ ಅವಕಾಶವಿಲ್ಲ: ಇಂದಿರಾ ಕ್ಯಾಂಟಿನೂ ಇಲ್ಲ

• **ಉದಯವಾಹಿನಿ ಚಿಕ್ಕೋಡಿ**

ಪಟ್ಟಣದಲ್ಲಿ ಕೋಟ್ಯಂತರ ಮೊತ್ತದಲ್ಲಿ ಹತ್ತಾರು ಸರ್ಕಾರಿ ಕಟ್ಟಡಗಳು ಪೂರ್ಣಗೊಂಡು ಹಲವು ತಿಂಗಳು ಕಳೆದಿವೆ. ಆದರೆ ಅವುಗಳ ಉದ್ಘಾಟನೆಗೆ ಕಾಲ ಕೂಡಿ ಬಾರದಿರುವುದು ಸಾರ್ವಜನಿಕರಿಗೆ ಹಾಗೂ ನೌಕರರಿಗೆ ತೀವ್ರ ನಿರಾಶೆ ಮೂಡಿಸಿದೆ. ಅದರಲ್ಲೂ ಓದುಗರಿಗೆ ಜ್ಞಾನಧಾರೆ ಎರೆಯುವ ಸಾರ್ವಜನಿಕ ಗ್ರಂಥಾಲಯ, ಹಸಿದ ಹೊಟ್ಟೆಗಳಿಗೆ ಅನ್ನ ಹಾಕಬೇಕಿದ್ದ ಇಂದಿರಾ ಕ್ಯಾಂಟಿನ್ ಉದ್ಘಾಟನೆಗೊಳ್ಳದಿರುವುದು ಸರ್ಕಾರದ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.





ಉದಯವಾಹಿನಿ ಚಿತ್ರ

ಪಟ್ಟಣದ ಹಳೆಯ ಪುರಸಭೆ ಕಚೇರಿಗೆ ಹೊಂದಿಕೊಂಡು ಶಿಥಿಲಾವಸ್ಥೆಯಲ್ಲಿದ್ದ ಗ್ರಂಥಾಲಯದ ಹಳೆಯ ಕಟ್ಟಡವನ್ನು ಕೆಡವಿ, ಅದೇ ಸ್ಥಳದಲ್ಲಿ ರೂ. 40 ಲಕ್ಷ ಮೊತ್ತದಲ್ಲಿ ಸಾರ್ವಜನಿಕ ಗ್ರಂಥಾಲಯ ತಲೆ ಎತ್ತಿನಿಂತು 6-7 ತಿಂಗಳು ಕಳೆದಿವೆ. ಗ್ರಂಥಾಲಯ ಕಟ್ಟಡ ನಿರ್ಮಾಣದ ಹಿನ್ನೆಲೆಯಲ್ಲಿ ಕಳೆದ 2-3 ವರ್ಷಗಳಿಂದ ಶಾಸಕರ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಎರಡು ಕೊಠಡಿಗಳನ್ನು ಬಳಸಿಕೊಂಡು ಗ್ರಂಥಾಲಯವನ್ನು ತಾತ್ಕಾಲಿಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಇನ್ನೇನು ಗ್ರಂಥಾಲಯ ಕಟ್ಟಡ ಕಾಮಗಾರಿ ಪೂರ್ಣಗೊಂಡು, ಸುಣ್ಣ ಬಣ್ಣವೂ ಆಗಿದ್ದರಿಂದ 40 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ನೂತನ ಕಟ್ಟಡಕ್ಕೆ ಗ್ರಂಥಪಾಲಕರು ಜುಲೈ - ಆಗಸ್ಟ್ ತಿಂಗಳಲ್ಲಿಯೇ ಸ್ಥಳಾಂತರಿಸಿದ್ದಾರೆ. ಹೀಗಾಗಿ ಕಳೆದ 5-6 ತಿಂಗಳಿನಿಂದ ಗ್ರಂಥಗಳನ್ನು ಎರವಲು ಪಡೆದುಕೊಳ್ಳಲಾಗದೇ, ಓದಲು ಆಗದ ಉಭಯ ಸಂಕಟವನ್ನು ಓದುಗರು ಎದುರಿಸುತ್ತಿದ್ದಾರೆ.

ಈಗಾಗಲೇ ಸರ್ಕಾರಿ ಶಾಲೆಯಲ್ಲಿ ತರಗತಿ ಕೋಣೆಗಳ ಕೊರತೆಯಿದ್ದು, ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿ ಎಂಬ ಒತ್ತಡ ಶಾಲಾ ಎಸ್‌ಡಿಎಂಸಿಯದಾಗಿದೆ. ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಕೆಲವೊಂದಿಷ್ಟು ಪುಸ್ತಕಗಳನ್ನು ಮೂಟೆ ಕಟ್ಟಿ ಶಾಲಾ ಕೊಠಡಿಗಳಲ್ಲಿ ಇರಿಸಲಾಗಿದೆ. ಓದುಗರ ಕೈ ಸೇರಬೇಕಿದ್ದ ಸಹಸ್ರಾರು ಪುಸ್ತಕಗಳು ಹಲವು ದಿನಗಳಿಂದ ಮೂಟೆಗಳಲ್ಲಿ ಬಂಧಿಯಾಗಿವೆ.

### ಸಾರ್ವಜನಿಕರಿಗೆ ನಿರಾಶೆ

**ಇನ್ನು, ಹಸಿದ ಹೊಟ್ಟೆಗಳಿಗೆ ಅನ್ನಹಾಕಬೇಕೆಂಬ ಮಹತ್ತರವಾದ ಉದ್ದೇಶದಿಂದ ಪಟ್ಟಣದಲ್ಲಿ ಬಿಇಒ ಕಚೇರಿ ಆವರಣದಲ್ಲೊಂದು ಹಾಗೂ ಹೆಸ್ಕಾಂ ಕಚೇರಿ ಆವರಣದಲ್ಲೊಂದು ಹೀಗೆ ಎರಡು ಇಂದಿರಾ ಕ್ಯಾಂಟಿನ್ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಕ್ಯಾಂಟಿನ್ ನಿರ್ಮಾಣ ಕಾರ್ಯ ಪೂರ್ಣಗೊಂಡು 3-4 ತಿಂಗಳಾಯಿತು. ಇದುವರೆಗೂ ಕ್ಯಾಂಟಿನ್ ಕಾರ್ಯಾರಂಭ ಮಾಡದಿರುವುದರಿಂದ ಹಸಿದ ಹೊಟ್ಟೆಗಳಿಗೆ ತುತ್ತು ನೀಡುವ ಕಾರ್ಯ ನಡೆಯದಿರುವುದು ಸಾರ್ವಜನಿಕರ ನಿರಾಶೆಗೆ ಕಾರಣವಾಗಿದೆ.**

# ಯೋಜನೆ ಹಣ ಸಾಲಕ್ಕೆ ಜಮೆ: ಜಾಗೃತಿ ಸಮಿತಿ ಆಕ್ರೋಶ

### ಜಿಲ್ಲೆಯಲ್ಲಿ 2025ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ದೌರ್ಜನ್ಯ ತಡೆ ಕಾಯ್ದೆಯಡಿ 17 ಪ್ರಕರಣಗಳು ದಾಖಲು

• **ಉದಯವಾಹಿನಿ, ಹಾವೇರಿ**

ಬೆಳೆ ಪರಿಹಾರ ಹಾಗೂ ಸರ್ಕಾರದ ವಿವಿಧ ಯೋಜನೆಗಳಡಿ ಖಾತೆಗೆ ಬರುವ ಹಣವನ್ನು ಬ್ಯಾಂಕ್‌ನವರು ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಯೋಜನೆಗಳ ಪ್ರಯೋಜನ ಪಡೆಯಲು ಅಡ್ಡಿಯಾಗುತ್ತಿದೆ ಎಂದು ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು ಆಕ್ರೋಶ ಹೊರಹಾಕಿದರು.

ನಗರದ ಹೊರವಲಯದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ (ಎಸ್.ಸಿ.), ಪರಿಶಿಷ್ಟ ಪಂಗಡದ (ಎಸ್.ಟಿ.) ಜನರ ಮೇಲಿನ ದೌರ್ಜನ್ಯ ನಿಯಂತ್ರಣ ತಡೆ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು, ಪರಿಹಾರ ಹಾಗೂ ಯೋಜನೆಯ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ ಬ್ಯಾಂಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ವೈದ್ಯಕೀಯ ವಿಜ್ಞಾನಗಳ ಕಾಲೇಜು (ಹಿಮ್ಸ್) ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ಇಲಾಖಾವಾರು ಸಮುದಾಯಕ್ಕೆ ಹಂಚಿಕೆಯಾಗುವ ಅನುದಾನದ ಮಾಹಿತಿ ನೀಡಬೇಕು. ಎಸ್.ಸಿ.ಎಸ್.ಪಿ. ಹಾಗೂ ಟಿ.ಎಸ್.ಪಿ. ಯೋಜನೆಗೆ ಮೀಸಲಾದ ಅನುದಾನ ಆಯಾ ಸಾಲಿನಲ್ಲೇ ವೆಚ್ಚವಾಗಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆ ಸೌಲಭ್ಯ ತಲುಪಿಸಬೇಕು ಎಂದು ಸದಸ್ಯರು ಒತ್ತಾಯಿಸಿದರು.

ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಪೌರ ಕಾರ್ಮಿಕರಿಗೆ ಕಾಲ ಕಾಲಕ್ಕೆ ವೇತನ ಪಾವತಿಸಬೇಕು. ಗುತ್ತಲದಲ್ಲಿ ನೂತನವಾಗಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಿಸಬೇಕು. ಬಾಳಂಬೀಡ ಗ್ರಾಮದಲ್ಲಿ ಎಸ್.ಸಿ., ಎಸ್.ಟಿ. ಕಾಲೊನಿಯಲ್ಲಿ ಪಕ್ಕಾ ಗಟಾರ್ ನಿರ್ಮಿಸಬೇಕು. ಹೈ ಮಾಸ್ಟ್ ದೀಪ ಅಳವಡಿಸಬೇಕು' ಎಂದು ಆಗ್ರಹಿಸಿದರು. ಬರಡಿ ಹಾಗೂ ಮರಡೂರ ಗ್ರಾಮದಲ್ಲಿ ಸ್ಮಶಾನಕ್ಕೆ ಜಮೀನು ನೀಡಬೇಕು. ಸ್ಮಶಾನಕ್ಕೆ ಹೋಗಿಬರಲು ರಸ್ತೆ ಮಾಡಬೇಕು. ಮೆಲ್ಲೇರಿ ಗ್ರಾಮದ ಕಾಲೊನಿಯಲ್ಲಿ ಸಣ್ಣ ನೀರಾವರಿ ಇಲಾಖೆಯವರು ನಿರ್ಮಾಣ ಮಾಡಿದ ಕಾಲುವೆಯಲ್ಲಿ ನೀರು ನಿಂತು ತೊಂದರೆಯಾಗುತ್ತಿದ್ದು, ಅದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು. ಸಮಸ್ಯೆ ಆಲಿಸಿದ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಕುರಿತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು. ದೌರ್ಜನ್ಯ ತಡೆಗೆ ಅಗ್ರ ಕ್ರಮ ವಹಿಸಿ ಸಮಾಜದಲ್ಲಿ ಬದಲಾವಣೆ ತರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಧಿಕಾರಿಗಳು ಸಮಾಜದ ಪರವಾಗಿ ಕಾಳಜಿಯಿಂದ ಕೆಲಸ ಮಾಡಬೇಕು. ಸಮಾಜದ ಅಭಿವೃದ್ಧಿ ಕೆಲಸಗಳಲ್ಲಿ ಅಡಚಣೆಯಾದ ಸಂದರ್ಭದಲ್ಲಿ ಸಮಾಜದ ಮುಖಂಡರು ಸಹ ಸಹಕಾರ ನೀಡಬೇಕು. ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯವಾಗಿದೆ' ಎಂದರು.

ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಸುತ್ತಿರುವ ಪೌರ ಕಾರ್ಮಿಕರ ವೇತನ ಪಾವತಿಗೆ ಮೊದಲ ಆದ್ಯತೆ ನೀಡಬೇಕು. ಕರ ವಸೂಲಿಗೆ ಹೆಚ್ಚಿನ ಗಮನಹರಿಸಬೇಕು. ಪೌರಕಾರ್ಮಿಕರಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕು. ಸ್ಮಶಾನದ ಸಮಸ್ಯೆ ಇರುವ ಗ್ರಾಮಗಳಲ್ಲಿ ಹಾಗೂ ಸ್ಮಶಾನಕ್ಕೆ ಹೋಗಲು ದಾರಿ ಸಮಸ್ಯೆ ಇರುವ ಬಗ್ಗೆ ಮಾಹಿತಿ ಪಡೆದುಕೊಂಡು ಜಮೀನು ಗುರುತಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಉದಯವಾಹಿನಿ ಚಿತ್ರ

**ಜಾಗೃತಿ ಸಮಿತಿ ಸಭೆ**

### 3 ತಿಂಗಳಲ್ಲಿ 17 ಪ್ರಕರಣ

**ಹಾವೇರಿ ಜಿಲ್ಲೆಯಲ್ಲಿ 2025ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ದೌರ್ಜನ್ಯ ತಡೆ ಕಾಯ್ದೆಯಡಿ 17 ಪ್ರಕರಣಗಳು ದಾಖಲಾಗಿವೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಮಾಹಿತಿ ನೀಡಿದರು. ಸಭೆಯಲ್ಲಿ ಮಾತನಾಡಿದ ಅವರು ಎಲ್ಲಾ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಮಂಜೂರು ಮಾಡಲಾಗಿದೆ ಎಂದರು.**

## ಮಿನಿ ನ್ಯೂಸ್

### ಡಿಜಿಟಲ್ ಅರೆಸ್ಟ್: 1.61 ಕೋಟಿ ಕಳೆದುಕೊಂಡ ನಿವೃತ್ತ ಶಿಕ್ಷಕ

• **ಉದಯವಾಹಿನಿ ಮುಂಡಗೋಡ**

ತಾಲ್ಲೂಕಿನ ಟಿಬೆಟಿಯನ್ ಕಾಲೊನಿಯ ನಿವೃತ್ತ ಶಿಕ್ಷಕ ಪಾಲ್ಡೆನ್ ಲೋಸಂಗ ಚೋಡಕ್ ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ರೂ.1.61 ಕೋಟಿ ಕಳೆದುಕೊಂಡಿದ್ದು, ಇವರನ್ನು ಡಿಜಿಟಲ್ ಅರೆಸ್ಟ್ ಮಾಡಿ ವಂಚಕರು ಹಂತ ಹಂತವಾಗಿ ಹಣ ದೋಚಿದ್ದಾರೆ.

**ಘಟನೆಯ ವಿವರ:** ನ.29ರಂದು ನಿವೃತ್ತ ಶಿಕ್ಷಕ ಪಾಲ್ಡೆನ್ ಅವರಿಗೆ ವಾಟ್ಸ್ ಆ್ಯಪ್ ಕರೆ ಮಾಡಿದ ವ್ಯಕ್ತಿಯೊಬ್ಬ, ತಾನು ಮಹಾರಾಷ್ಟ್ರದ ಕೋಲಬಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂದು ಪರಿಚಯಿಸಿಕೊಂಡು, ಪೊಲೀಸ್ ಸಮವಸ್ತ್ರದಲ್ಲಿಯೇ ವಿಡಿಯೋ ಕರೆ ಮಾಡಿದ್ದಾನೆ. ಮುಂಬೈನಲ್ಲಿ ಉಗ್ರವಾದಿ ನಾಯಕನನ್ನು ಬಂಧಿಸಲಾಗಿದ್ದು, ಆತನ ಬಳಿ ಸಿಕ್ಕ ನೂರಾರು ಎ.ಟಿ.ಎಂ ಕಾರ್ಡ್‌ಗಳಲ್ಲಿ ನಿಮ್ಮ ಹೆಸರಿನ ಬ್ಯಾಂಕ್ ಕಾರ್ಡ್ ಕೂಡ ಇದೆ. ನಿಮ್ಮ ಬ್ಯಾಂಕ್ ಖಾತೆಯ ಮೂಲಕ ಕೋಟ್ಯಂತರ ರೂಪಾಯಿ ಮನಿ ಲಾಂಡ್ರಿಂಗ್ ನಡೆದಿದ್ದು. ನಿಮ್ಮ ಮೇಲೆ ಗಂಭೀರ ಪ್ರಕರಣ ದಾಖಲಾಗಿದೆ. ಅರೆಸ್ಟ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ.

ವಿಷಯವನ್ನು ಯಾರೊಂದಿಗೂ ಹಂಚಿಕೊಳ್ಳದಂತೆ ತಿಳಿಸಿದ್ದಾನೆ. ಇದನ್ನು ನಂಬಿದ ಪಾಲ್ಡೆನ್, ತಮ್ಮ ವಿವಿಧ ಬ್ಯಾಂಕ್ ಖಾತೆಗಳಲಿದ್ದ ಠೇವಣಿ ಹಣವನ್ನು ಡ್ರಾ ಮಾಡಿ. ಡಿ.3ರಿಂದ ಡಿ.11ರವರೆಗೆ ವಂಚಕರು ಸೂಚಿಸಿದ ವಿವಿಧ ಬ್ಯಾಂಕ್ ಖಾತೆಗಳಿಗೆ ಒಟ್ಟು ರೂ.1.61 ಕೋಟಿ ವರ್ಗಾಯಿಸಿದ್ದಾರೆ. ಕೆಲ ದಿನಗಳ ನಂತರ ತಾನು ವಂಚನೆಗೆ ಒಳಗಾಗಿರುವುದು ತಿಳಿದು ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

### ವಿದ್ಯುತ್ ಗೋಪುರ ಸ್ಥಳಾಂತರಕ್ಕೆ ಆಗ್ರಹ

• **ಉದಯವಾಹಿನಿ ಹರಪನಹಳ್ಳಿ**

ತಾಲ್ಲೂಕಿನ ಕಣಿವಿಹಳ್ಳಿ ಗ್ರಾಮದಲ್ಲಿನ 220 ಕೆ.ವಿ. ಒಂಟಿ ವಿದ್ಯುತ್ ಗೋಪುರವನ್ನು ಸ್ಥಳಾಂತರಿಸಬೇಕು ಹಾಗೂ ಹೊಸ ಗೋಪುರ ನಿರ್ಮಾಣಕ್ಕೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಗ್ರಾಮಸ್ಥರು ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು ಅವರಿಗೆ ಒತ್ತಾಯಿಸಿದರು.

ಮುಖಂಡ ಕಣಿವಿಹಳ್ಳಿ ಮಂಜುನಾಥ ಮಾತನಾಡಿ, ಕಣಿವಿಹಳ್ಳಿಯಲ್ಲಿ ಪರಿಶಿಷ್ಟ ಸಮುದಾಯದ 60ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿವೆ. 1978ರಲ್ಲಿ ಕೊಪ್ಪಳದ ಲಿಂಗಾಪುರದಿಂದ ಹರಿಹರದ ಗುತ್ತೂರು ವಿದ್ಯುತ್ ಸ್ವೀಕರಣ ಕೇಂದ್ರಕ್ಕೆ 220 ಕೆ.ವಿ. ಹೈವೋಲ್ಟೇಜ್ ವಿದ್ಯುತ್ ತಂತಿ ಅಳವಡಿಸಲಾಗಿದೆ. ಆದರೆ ನಮ್ಮ ಗ್ರಾಮದಲ್ಲಿ 1 ಎಕರೆ 57 ಸೆಂಟ್ಸ್ ಭೂಮಿಯನ್ನು ಖಾಸಗಿಯವರಿಂದ ಸರ್ಕಾರವು ಸ್ವಾಧೀನಪಡಿಸಿಕೊಂಡು, ನಮ್ಮ ಕಾಲೊನಿಯ 60 ದಲಿತ ಕುಟುಂಬಗಳಿಗೆ ಮನೆ ಕಟ್ಟಿಕೊಳ್ಳಲು ಹಕ್ಕುಪತ್ರ ಕೊಟ್ಟಿದೆ ಎಂದರು.

ಇದನ್ನು ಲೆಕ್ಕಿಸದ ಕೆಪಿಟಿಸಿಎಲ್ ಅಧಿಕಾರಿಗಳು ಭೂ ಪರಿವರ್ತನೆ ಮಾಡಿಕೊಂಡು, ಅಲ್ಲಿ ವಾಸ ಮಾಡುತ್ತಿರುವ ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಹೈವೋಲ್ಟೇಜ್ ವಿದ್ಯುತ್ ಪ್ರಸಾರದ ಪರಿಣಾಮ ಮನೆಯ ಟಿ.ವಿ., ಬಲ್‌ಗಳು ಸುಟ್ಟು ಹೋಗುತ್ತಿವೆ ಎಂದು ಆರೋಪಿಸಿದರು. ಪ್ರಕರಣ ನ್ಯಾಯಾಲಯದಲ್ಲಿದ್ದೆ, ಆದರೂ ಅಧಿಕಾರಿಗಳು ಆದೇಶಕ್ಕೂ ಮುನ್ನವೇ ಕಾಮಗಾರಿ ಮಾಡಲು ಹೊರಟಿರುವುದನ್ನು ನಿಲ್ಲಿಸಬೇಕು. ಈ ಬಗ್ಗೆ ಜಾರಿ ನಿರ್ದೇಶನಾಲಯ, ಮಾನವ ಹಕ್ಕುಗಳ ಆಯೋಗ, ರಾಜ್ಯ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟು ಆಯೋಗಕ್ಕೂ ದೂರು ಸಲ್ಲಿಸಲಾಗಿದೆ. ವಿದ್ಯುತ್ ಗೋಪುರಗಳನ್ನು ಬೇರೆಡೆ ಸ್ಥಳಾಂತರಿಸುವ ತನಕ ಕಾನೂನು ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

### ಭೂಮಿ ಸಮಸ್ಯೆ ಬಗೆಹರಿಸಲು ಎಸ್‌ಐಟಿ ರಚನೆ

• **ಉದಯವಾಹಿನಿ ತರೀಕೆರೆ**

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತರೀಕೆರೆ ಉಪ ವಿಭಾಗೀಯ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪ.ವರ್ಗಗಳ ದೌರ್ಜನ್ಯ ನಿಯಂತ್ರಣ ಸಮಿತಿ ಮತ್ತು ಸಫಾಯಿ ಕರ್ಮಚಾರಿ ಜಾಗೃತಿ ಸಮಿತಿ ಸಭೆ ನಡೆಯಿತು. ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಕೆಲವು ಭಾಗಗಳಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವೆ ಕೆಲವು ಭೂಮಿಯ ಸಮಸ್ಯೆಗಳನ್ನು ಪರಿಹರಿಸಲು ಈಗಾಗಲೇ ಎಸ್‌ಐಟಿ ರಚನೆಯಾಗಿದ್ದು, ಸಮಸ್ಯೆ ಇತ್ಯರ್ಥಕ್ಕೆ ಸರ್ಕಾರ ಮುಂದಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಉಪವಿಭಾಗಾಧಿಕಾರಿ ಎನ್.ವಿ. ನಟೇಶ್ ಹೇಳಿದರು.

ಈ ಸಮಸ್ಯೆಗಳ ಬಗ್ಗೆ ಈಗಾಗಲೇ ಡಿಎಫ್‌ಒ ಅಧಿಕಾರಿಗಳ ಮಟ್ಟದಲ್ಲಿ ಸಭೆ ನಡೆಸಲಾಗಿದೆ. ಅನಿವಾರ್ಯವಿದ್ದರೆ ಮತ್ತೊಮ್ಮೆ ಸಭೆ ನಡೆಸಿ ಚರ್ಚಿಸಲಾಗುವುದು ಎಂದರು. ಸಫಾಯಿ ಕರ್ಮಚಾರಿ ಸಮಿತಿ ಸದಸ್ಯ ಎನ್. ವೆಂಕಟೇಶ್ ಮಾತನಾಡಿ, ತರೀಕೆರೆ ಪಟ್ಟಣದ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಆಯ್ಕೆ ಮಾಡಿರುವ ಪ್ರದೇಶಗಳ ನಿವಾಸಿಗರಿಂದ ವಂತಿಗೆ ಬಾಬಿನ ಹಣ ಪಡೆದಿದ್ದರೂ ಕೂಡ, ಮನೆ ನಿರ್ಮಿಸಲು ಸ್ಲಂಬೋರ್ಡ್ ಅಧಿಕಾರಿಗಳು ಮನೆಗಳನ್ನು ಹಸ್ತಾಂತರಿಸಲು ಮುಂದಾಗುತ್ತಿಲ್ಲ. ಇದರಿಂದ ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಗೂಡ್‌ಶೆಡ್ ರಸ್ತೆ ಮತ್ತು ಗಾಳಿಹಳ್ಳಿ ಕ್ರಾಸ್‌ನಲ್ಲಿ ಪೌರಕಾರ್ಮಿಕರ ವಿಶ್ರಾಂತಿಗೃಹ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಸಮಿತಿ ಸದಸ್ಯ ಸಚಿನ್ ಮಾತನಾಡಿ, ಕಡೂರಿನಲ್ಲಿ ಪೌರ ಕಾರ್ಮಿಕರೇ ಹೆಚ್ಚು ವಾಸಿಸುತ್ತಿರುವ ಸ್ಥಳದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

### ರಸ್ತೆ ಸುರಕ್ಷತೆ ನಿಯಮ ಪಾಲನೆ ಅತ್ಯಗತ್ಯ

• **ಉದಯವಾಹಿನಿ ಗದಗ**

ರಸ್ತೆ ಅಪಘಾತ ಪ್ರಮಾಣವನ್ನು ಕಡಿಮೆ ಮಾಡುವುದು ಅಥವಾ ಅಪಘಾತವಾಗದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅತ್ಯಗತ್ಯ ಎಂದು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ ಶೆಟ್ಟಿ ಹೇಳಿದರು. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಭಾಂಗಣದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು. 2026ರ ಜನವರಿ 1ರಿಂದ 31ರವರೆಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಹಮ್ಮಿಕೊಳ್ಳಲಾಗಿದೆ. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಸ್ಥಳೀಯ ವಕೀಲರ ಸಂಘ, ವಿಮಾ ಕಂಪನಿಗಳ ಪ್ರತಿನಿಧಿಗಳ ಸಹಯೋಗದೊಂದಿಗೆ ರಸ್ತೆ ಸುರಕ್ಷತೆ ಕುರಿತು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು' ಎಂದು ಸೂಚಿಸಿದರು.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ.

**ವೃಷಭ** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

**ಮಿಥುನ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು.

**ಕರ್ಕಾಟಕ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ.

**ಸಿಂಹ** ನಿಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ ವಿಶೇಷವಾಗಿ ಮದ್ಯಪಾನ ಮಾಡಬೇಡಿ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು.

**ಕನ್ಯಾ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

**ತುಲಾ** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.

**ವೃಶ್ಚಿಕ** ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು – ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು.

**ಧನಸ್ಸು** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ.

**ಮಕರ** ನ್ಯಾಯಯುತವಾದ ಮತ್ತು ಉದಾರ ಪ್ರೀತಿಯಿಂದ ಪುರಸ್ಕೃತಗೊಳ್ಳುವ ಸಾಧ್ಯತೆಯಿದೆ. ನೀವು ನೇರವಾದ ಉತ್ತರ ಕೊಡದಿದ್ದರೆ ನಿಮ್ಮ ಸಹವರ್ತಿಗಳು ಸಿಟ್ಟಾಗುವ ಸಂಭವವಿದೆ.

**ಕುಂಭ** ಇಂದು ನಿಮ್ಮ ದುಂದುಗಾರಿಕೆಯ ಮೇಲೆ ನಿಮ್ಮ ಸಂಗಾತಿ ನಿಮಗೆ ಮಾತುಗಳು ಹೇಳಬಹುದು. ನಿಮ್ಮ ಸಕಾಲಿಕ ಸಹಾಯ ಯಾರಾದರೊಬ್ಬರ ದೌರ್ಭಾಗ್ಯವನ್ನು ನಿವಾರಿಸುತ್ತದೆ.

**ಮೀನ** ನಿಮ್ಮ ದೊಡ್ಡ ಆಸ್ತಿಯೆಂದರೆ ಹಾಸ್ಯಪ್ರಜ್ಞೆಯಾಗಿದೆ ಇದನ್ನು ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ವಿವಾಹಿತ ಜನರು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

### ಗುಲ್ಬರ್ಗ ವಿಶ್ವ ವಿದ್ಯಾಲಯ ಕಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇರದೇ ನಲುಗುತ್ತಿದೆ

# ಕ.ಕರ್ನಾಟಕ ಭಾಗಕ್ಕೆ ಬಾಕಿ ಉಳಿದ ಕೆಲಸಗಳು ಪೂರ್ಣವಾಗಲಿ

• **ಉದಯವಾಹಿನಿ, ಕಲಬುರಗಿ**

2025ನೇ ವರ್ಷ ಕಳೆದು 2026ಕ್ಕೆ ಕಾಲಿಟ್ಟಿದ್ದು, ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರ ಕಲಬುರಗಿ ಸೇರಿ ಇಡೀ ಕಲ್ಯಾಣ ಕರ್ನಾಕಟ ಭಾಗದಲ್ಲಿ ಕಳೆದ ಹತ್ತಾರುವ ವರ್ಷಗಳಿಂದ ಬಾಕಿ ಇರುವ ಕೆಲಸಗಳು ನೂತನ ವರ್ಷವಾದರೂ ಮುಗಿಯಲಿ ಎಂಬುದು ಜನರ ಆಶಯವಾಗಿದೆ.

**ಕಲ್ಯಾಣ ಕರ್ನಾಟಕವನ್ನು ಸರಕಾರ ಮರೆತಂತಿದೆ**

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಿಗೆ ಪ್ರತ್ಯೇಕ ಮೀಸಲಾತಿ ನೀಡುವ ಸಂವಿಧಾನದ 371(ಜೆ) ತಿದ್ದುಪಡಿಯಾಗಿ 13 ವರ್ಷ ಕಳೆದರೂ ಕೂಡ ಅಭಿವೃದ್ಧಿಯ ಅಸಮಾನತೆಯ ಭೂತ ಮಾತ್ರ ಇನ್ನು ಬಿಟ್ಟಿಲ್ಲ. ಮುಖ್ಯವಾಗಿ ಸಂವಿಧಾನದ ತಿದ್ದುಪಡಿಯಂತೆ ರಾಜ್ಯಾದ್ಯಂತ ಉದ್ಯೋಗಗಳಲ್ಲಿ ಪೂರ್ಣ ಪ್ರಮಾಣದ ಮೀಸಲಾತಿ ಸಿಗುತ್ತಿಲ್ಲ. ಈ ವರ್ಷವಾದರೂ ಯಾವುದೇ ಗೊಂದಲ ಇಲ್ಲದೆ ರಾಜ್ಯಾದ್ಯಂತ 371(ಜೆ) ಅನುಷ್ಠಾನ ಸಾಧ್ಯವಾಗಲಿ. ಇದು ಈ ಭಾಗದ ಉದ್ಯೋಗ ಆಕಾಂಕ್ಷಿಗಳಿಗೆ ದೊಡ್ಡ ಚೈತನ್ಯ ನೀಡಲಿದೆ.

- **ಮುಖ್ಯವಾಗಿ ಸಂವಿಧಾನದ ತಿದ್ದುಪಡಿಯಂತೆ ರಾಜ್ಯಾದ್ಯಂತ ಉದ್ಯೋಗಗಳಲ್ಲಿ ಪೂರ್ಣ ಪ್ರಮಾಣದ ಮೀಸಲಾತಿ ಸಿಗುತ್ತಿಲ್ಲ.**
- **ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರಕಾರದ ಜತೆ ಕೇಂದ್ರ ಸರಕಾರ ಕೈ ಜೋಡಿಸುವುದು ಅತ್ಯಗತ್ಯವಾಗಿದೆ.**
- **2013ರಲ್ಲಿ ಘೋಷಣೆಯಾದ ರೈಲ್ವೆ ವಿಭಾಗೀಯ ಕಚೇರಿ ಕುರಿತು ಕೇಂದ್ರ ಸರಕಾರ ಅಸಡ್ಡೆ ತೋರುತ್ತಿದೆ. 12 ವರ್ಷಗಳಿಂದ ಡಿವಿಜನ್ ಕನಸು ಕನಸಾಗಿಯೇ ಉಳಿದಿದೆ.**

**ಕಾಗದದಲ್ಲೇ ಉಳಿದ ಸಚಿವಾಲಯ:** 2024ರ ಸೆ.17ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ನಗರದ ಜಿಲ್ಲಾಡಳಿತ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆ ಕೈಗೊಂಡಿತ್ತು.

ಆ ವೇಳೆ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಮಾಡುವ ನಿರ್ಣಯ ಕೈಗೊಂಡಿತು. ಅದಾಗಿ ಸರಿ ಸುಮಾರು 16 ತಿಂಗಳು ಕಳೆದರೂ ಮುಂದಿನ ಯಾವುದೇ ಪ್ರಕ್ರಿಯೆ ಸಾಧ್ಯವಾಗುತ್ತಿಲ್ಲ. ಪ್ರತ್ಯೇಕ ಸಚಿವಾಲಯವಾದರೆ, ಕಲ್ಯಾಣದ ಸಮಸ್ಯೆ ಸಚಿವ ಸಂಪುಟದಲ್ಲಿ ಇಡಲು ಅನುಕೂಲ ಆಗುತ್ತದೆ. ಆದರೆ, ಅದಿನ್ನು ಕಾಗದಲ್ಲಿ ಮಾತ್ರ ಉಳಿದಂತಾಗಿದ್ದು, ಈ ವರ್ಷವಾದರೂ ಕಾರ್ಯ ರೂಪಕ್ಕೆ ಬರಲಿ.

**ಖಾಲಿ ಹುದ್ದೆಗಳ ಭರ್ತಿ:** ಅಭಿವೃದ್ಧಿಗೆ ವೇಗ ನೀಡುವುದು ಸರಕಾರದ ನೌಕರರು. ಆದರೆ, ಜಿಲ್ಲೆ ಸೇರಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರು ಸೇರಿ ಬಹು ತೇಕ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಇತಿಹಾಸ ಹೊಂದಿರುವ ಗುಲ್ಬರ್ಗ ವಿಶ್ವವಿದ್ಯಾಲಯ ಕಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇರದೇ ನಲುಗುತ್ತಿದೆ. ಕೂಡಲೇ 371(ಜೆ) ಅಡಿ ಹುದ್ದೆಗಳ ಭರ್ತಿಯಾಗಿ ಇಲ್ಲಿನ ಯುವಕರಿಗೆ ಉದ್ಯೋಗ ಸಿಗುವಂತಾಗಲಿ.

**ಖಾಲಿ ಹುದ್ದೆಗಳ ಭರ್ತಿ**
**ಅಭಿವೃದ್ಧಿಗೆ ವೇಗ ನೀಡುವುದು ಸರಕಾರದ ನೌಕರರು. ಆದರೆ, ಜಿಲ್ಲೆಸೇರಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರು ಸೇರಿ ಬಹು ತೇಕ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಇತಿಹಾಸ ಹೊಂದಿರುವ ಗುಲ್ಬರ್ಗ ವಿಶ್ವವಿದ್ಯಾಲಯ ಕಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇರದೇ ನಲುಗುತ್ತಿದೆ. ಕೂಡಲೇ 371(ಜೆ) ಅಡಿ ಹುದ್ದೆಗಳ ಭರ್ತಿಯಾಗಿ ಇಲ್ಲಿನ ಯುವಕರಿಗೆ ಉದ್ಯೋಗ ಸಿಗುವಂತಾಗಲಿ.**

**ಕೇಂದ್ರ ಸರಕಾರ ಕಣ್ತೆರೆಯಲಿ:** ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ರಾಜ್ಯ ಸರಕಾರದ ಜತೆ ಕೇಂದ್ರ ಸರಕಾರ ಕೈ ಜೋಡಿಸುವುದು ಅತ್ಯಗತ್ಯವಾಗಿದೆ. ಆದರೆ, ಈ ವಿಷಯದಲ್ಲಿ ಕಲ್ಯಾಣ ಕರ್ನಾಟಕವನ್ನು ಕೇಂದ್ರ ಸರಕಾರ ಮರೆತಂತೆ ಕಾಣುತ್ತಿದೆ. 2013ರಲ್ಲಿ ಘೋಷಣೆಯಾದ ರೈಲ್ವೆ ವಿಭಾಗೀಯ ಕಚೇರಿ ಕುರಿತು ಕೇಂದ್ರ ಸರಕಾರ ಅಸಡ್ಡೆ ತೋರುತ್ತಿದೆ. 12 ವರ್ಷಗಳಿಂದ ಡಿವಿಜನ್ ಕನಸು ಕನಸಾಗಿಯೇ ಉಳಿದಿದೆ. ಈ ವರ್ಷವಾದರೂ ಕೇಂದ್ರ ಸರಕಾರ ಮನಸ್ಸು ಮಾಡುವ ಮೂಲಕ ಇಲ್ಲಿನ ಜನರ ಆಸೆ ಈಡೇರಿಸಬೇಕಿದೆ. ಇದರೊಂದಿಗೆ ಬೆಂಗಳೂರಿಗೆ ಹೆಚ್ಚಿನ ರೈಲುಗಳ ಸೇವೆ ನೀಡಬೇಕಿದೆ.



ಉದಯವಾಹಿನಿ ಚಿತ್ರ

## ಡಿಸಿ ಡಾ.ಆನಂದ ದೇವರಹಿಪ್ಪರಗಿ ಕಚೇರಿಗಳಿಗೆ ಭೇಟಿ, ಪರಿಶೀಲನೆ

• **ಉದಯವಾಹಿನಿ, ವಿಜಯಪುರ**

ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ವಿವಿಧ ಕಚೇರಿಗಳಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಭೇಟಿ ನೀಡಿ ತಾಲ್ಲೂಕಾ ಆಡಳಿತದ ಕಾರ್ಯವೈಖರಿ, ಕಾರ್ಯನಿರ್ವಹಣೆ ಕುರಿತು ಪರಿಶೀಲನೆ ನಡೆಸಿದರು. ದೇವರ ಹಿಪ್ಪರಗಿ ತಹಶೀಲ್ದಾರ ಕಚೇರಿಗೆ ಭೇಟಿ ನೀಡಿದ ಅವರು, ಆಧಾರ ನೋಂದಣಿ, ಕಂದಾಯ ಗ್ರಾಮ ಮಾಹಿತಿ, ಭೂಮಿ ಪ್ರಗತಿ, ಈ-ಪೌತಿ ಖಾತೆ ಪ್ರಗತಿ, ಪ್ರಮಾಣ ಪತ್ರ ವಿತರಣೆ ಹಾಗೂ ಕಡತಗಳ ವಿಲೇವಾರಿ ಪ್ರಕ್ರಿಯೆ ಕುರಿತು ಪರಿಶೀಲನೆ ನಡೆಸಿದರು.

ತಾಲ್ಲೂಕಿನ ಹಳ್ಳಿಗಳಿಗೆ ಸ್ಮಶಾನ ಜಾಗ ಅವಶ್ಯವಿದ್ದಲ್ಲಿ ಸರ್ಕಾರಿ ಜಮೀನು ಗುರುತಿಸಿ ಅಗತ್ಯ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅವರು ಈ ಸಂದರ್ಭದಲ್ಲಿ ತಿಳಿಸಿದರು. ಮಿನಿ ಪ್ರಜಾಸೌಧ ಕಟ್ಟಡದ ಜಾಗ ಪರಿಶೀಲನೆ ನಡೆಸಿದ ಅವರು, ಅಧಿಕಾರಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

## ಮರ್ಯಾದೆಗೇಡು ಹತ್ಯೆ ತಡೆಗೆ ಪ್ರತ್ಯೇಕ ಕಾಯ್ದೆ ಚಿಂತನೆ

• **ಉದಯವಾಹಿನಿ, ಹುಬ್ಬಳ್ಳಿ**

ಮರ್ಯಾದೆ ಗೇಡು ಹತ್ಯೆ ತಡೆಗೆ ಮಾನ್ಯಾ ಹೆಸರಿನಲ್ಲಿ ಪ್ರತ್ಯೇಕ ಕಾಯ್ದೆ ತರುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ರಾಜ್ಯ ಸಮಾಜ ಕಲ್ಯಾಣ ಖಾತೆ ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದರು. ಇನಾಂ ವೀರಾಪುರ ಗ್ರಾಮದಲ್ಲಿ ನಡೆದ ಮಾನ್ಯಾ ಮರ್ಯಾದೆ ಹತ್ಯೆ ಪ್ರಕರಣದ ಹಿನ್ನೆಲೆ ಗ್ರಾಮಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಪರಿಹಾರದ ಚೆಕ್ ವಿತರಿಸಿ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಈಗಾಗಲೇ ಅನ್ಯಾಯಕ್ಕೆ ಒಳಗಾದ ಕುಟುಂಬಕ್ಕೆ ಪರಿಹಾರದ ಚೆಕ್ ಅನ್ನು ನೀಡಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿದವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಿದೆ ಎಂದರು.

## ಸರ್ಕಾರದಲ್ಲಿ ಅನುದಾನದ ಕೊರತೆ

• **ಉದಯವಾಹಿನಿ, ಪುತ್ತೂರು**

ಕಡಬ ತಾಲ್ಲೂಕು ಕೊಲ ಗ್ರಾಮದ ಕೆ.ಸಿ ಫಾರ್ಮ್ ಸರ್ಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಪಂ ಮತ್ತು ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ನಿರ್ಮಾಣವಾಗಲಿರುವ ರಂಗಮಂದಿರ ಮತ್ತು ಭೋಜನ ಶಾಲೆ ನಿರ್ಮಾಣಕ್ಕೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಶಿಲಾನ್ಯಾಸ ನಡೆಸಿದರು.

ಪ್ರಸ್ತುತ ಸರ್ಕಾರದಲ್ಲಿ ಅನುದಾನದ ಕೊರತೆ ಇದೆ, ತಾಲೂಕು ಪಂಚಾಯಿತಿ ಮೂಲಕ ಈಗಾಗಲೇ ಈ ಶಾಲೆಗೆ ರೂ.5.50 ಲಕ್ಷ ಅನುದಾನ ನೀಡಿದ್ದು, ಮುಂದಿನ ಡಿಸೆಂಬರ್ ಒಳಗೆ ಇನ್ನೂ ರೂ. 5 ಲಕ್ಷ ಅನುದಾನ ನೀಡುವುದಾಗಿ ತಿಳಿಸಿದರು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪುತ್ಯೆ ಅವರು ಮಾತನಾಡಿ, ಈ ವರ್ಷ ಶಾಲೆ ಶತಮಾನೋತ್ಸವ ಸಂಭ್ರಮದಲ್ಲಿದೆ, ಇದರ ನೆನಪಿಗಾಗಿ ರಂಗಮಂದಿರ ನಿರ್ಮಾಣಕ್ಕೆ ಯೋಜನೆ ಹಾಕಿಕೊಂಡಿದ್ದೇವೆ, ಇದಕ್ಕೆ ತಾವು ಕನಿಷ್ಠ 50ರಿಂದ 60 ಲಕ್ಷ ರೂಪಾಯಿ ಅನುದಾನ ಬೇಕಾಗಿದ್ದು, ಈಗಾಗಲೇ ರಂಗಮಂದಿರಕ್ಕೆ ತಾಪಂನಿಂದ ರೂ.3.50, ಭೋಜನ ಶಾಲಾ ಕಟ್ಟಡಕ್ಕೆ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಿಂದ ರೂ. 6 ಲಕ್ಷ ಅನುದಾನ ಮಂಜೂರು ಆಗಿದೆ. ಉಳಿದಂತೆ 50 ಲಕ್ಷ ರೂಪಾಯಿ ಅನುದಾನವನ್ನು ಶಾಸಕರು ನೀಡಬೇಕು ಎಂದು ಬೇಡಿಕೆ ಮುಂದಿಟ್ಟರು.

## ಅಮೃತ-2 ಅಡಿ ನಾಲ್ಕು ಕೆರೆಗಳ ಅಭಿವೃದ್ಧಿ: ಜಿಲ್ಲಾಧಿಕಾರಿ

• **ಉದಯವಾಹಿನಿ, ಶಿವಮೊಗ್ಗ**

ಇಲ್ಲಿನ ಮಹಾನಗರ ಪಾಲಿಕೆ ವ್ಯಾಪ್ತಿಯ ಪುರಲೆ, ನವುಲೆ, ಗೋಪಶೆಟ್ಟಿಕೊಪ್ಪ ಮತ್ತು ತ್ಯಾವರಚಟ್ನಳ್ಳಿ ಕೆರೆಗಳನ್ನು ಕೇಂದ್ರ ಪುರಸ್ಕೃತ ಅಮೃತ-2 ಯೋಜನೆಯಡಿ ಶೀಘ್ರ ಕಾಮಗಾರಿ ಆರಂಭಿಸುವಂತೆ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ನಗರ ಯೋಜನಾ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಸೂಚಿಸಿದರು.

ನಗರದಲ್ಲಿ ಶಿವಮೊಗ್ಗ ಮಹಾನಗರ ಪಾಲಿಕೆ ಮತ್ತು ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿನ ಜಲಮೂಲಗಳ ಅಭಿವೃದ್ಧಿ ಕಾಮಗಾರಿಗಳ ಡಿಪಿಆರ್ (ವಿಸ್ತ್ರತ ಯೋಜನಾ ವರದಿ) ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

2046ರ ವೇಳೆಗೆ ಜನಸಂಖ್ಯೆಗೆ ಅನುಗುಣವಾಗಿ ಸದರಿ ಪ್ರದೇಶದಲ್ಲಿ ಕೈಗೊಳ್ಳಬಹುದಾದ ಸಂಭಾವ್ಯ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ ಕೆರೆಯ ಸುತ್ತ ಇರುವ ಒಳಚರಂಡಿ ಜಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅಭಿವೃದ್ಧಿಪಡಿಸಲು ಪಾಲಿಕೆ ಎಂಜಿನಿಯರ್‌ಗೆ ಸೂಚಿಸಿದರು. ಕೆರೆಗಳ ಏರಿ ಅಭಿವೃದ್ಧಿ ಕೈಗೊಳ್ಳುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಗ್ರಾವೆಲ್/ಮುರ್ರಮ್ ಉಪಯೋಗಿಸುವಂತೆ ಸೂಚಿಸಿದ ಅವರು, ಸದರಿ ನಾಲ್ಕು ಕಾಮಗಾರಿಗಳ ಡಿಪಿಆರ್ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲು ಆದೇಶಿಸಿದರು.


ಉದಯವಾಹಿನಿ ಚಿತ್ರ

**ಒಳಚರಂಡಿ ಸಂಸ್ಕರಣಾ ವ್ಯವಸ್ಥೆ ಅಸ್ತಿತ್ವದಲ್ಲಿಲ್ಲದ ಕಾರಣ ಬಹುತೇಕ ಕೆರೆಗಳಿಗೆ ಕಲುಷಿತ ನೀರು, ತ್ಯಾಜ್ಯ ಬಂದು ಸೇರುತ್ತಿದೆ. ಕೆರೆಯಲ್ಲಿ ಹೂಳಿನ ಪ್ರಮಾಣ ಹೆಚ್ಚುತ್ತಿದೆ. ಇದರಿಂದ ಕೆರೆಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಹೀಗಾಗಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ -ಡಿಸಿ**

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರಂಗಸ್ವಾಮಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರತಿನಿಧಿ ಪುರುಷೋತ್ತಮ, ಭೂ ದಾಖಲೆಗಳ ಇಲಾಖೆ ಉಪ ನಿರ್ದೇಶಕಿ ಆಶಾ ಕುಮಾರಿ, ಮಹಾನಗರ ಪಾಲಿಕೆ ಎಂಜಿನಿಯರ್ ತೇಜೂಪ್ರಸಾದ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಶಿಲ್ಪಾ ಉಪಸ್ಥಿತರಿದ್ದರು.

## ಯಾವುದೇ ಕಪ್ಪುಚುಕ್ಕೆ ಇಲ್ಲದೆ 32ವರ್ಷ ಸರ್ಕಾರಿ ಸೇವೆ ಸಲ್ಲಿಸಿದ್ದು ತೃಪ್ತಿ ತಂದಿದೆ: ಸಂಗಯ್ಯಸ್ವಾಮಿ

• **ಉದಯವಾಹಿನಿ, ಚಿಂಚೋಳಿ**

32ವರ್ಷಗಳ ಕಾಲ ಸರ್ಕಾರಿ ಸೇವೆಯಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೆ ಪ್ರಮಾಣಿಕವಾಗಿ ಸೇವೆ ಸಲ್ಲಿಸಿದ್ದು ಅತ್ಯಂತ ತೃಪ್ತಿ ತಂದಿದೆ ಈಗ ವೃತ್ತಿಯಿಂದ ನಿವೃತ್ತಿಯಾಗಿದ್ದೇನೆ ಪ್ರವೃತ್ತಿ ಕಡೆ ಹೋಗುತ್ತೇನೆ ಎಂದು ಸೇವಾ ವಯೋನಿವೃತ್ತಿ ಹೊಂದಿದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕಛೇರಿಯ ಪದವೀದರ ಸಹಾಯಕ ಸಂಗಯ್ಯಸ್ವಾಮಿ ಮಠಪತಿ ಹೇಳಿದರು.

ಪಟ್ಟಣದ ಚಂದಾಪೂರದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕಾರ್ಯಾಲದ ಸಭಾಂಗಣದಲ್ಲಿ ಪಂಚಾಯತ್ ರಾಜ್ ಕಛೇರಿ ಪದವೀಧರ ಸಹಾಯಕ ಸೇವಾ ವಯೋನಿವೃತ್ತಿ ಪ್ರಯುಕ್ತ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನಿಸಿಕೊಂಡು ಮಾತನಾಡಿದ ಅವರು, 2002ರಲ್ಲಿ ಶಾಸಕ ಕೈಲಾಸನಾಥ ಪಾಟೀಲರ ಆಪ್ತ ಸಹಾಯಕನಾಗಿ 5ವರ್ಷ ಸೇವೆ,2005ರಲ್ಲಿ ತಾಪಂ.ಕಛೇರಿಯಲ್ಲಿ ಸೇವೆ, 2006-07ರಲ್ಲಿ ಸಚಿವ ಶರಣಪ್ರಕಾಶ ಪಾಟೀಲರ ಆಪ್ತ ಸಹಾಯಕನಾಗಿ 03ವರ್ಷ ಸೇವೆ,ಮತ್ತು ಶಾಸಕ ಡಾ.ಉಮೇಶ ಜಾಧವರ ಕಛೇರಿಯ ಸಹಾಯಕನಾಗಿ ನಾಲ್ಕೈದು ವರ್ಷ ತದನಂತರ ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರಮಾಣಿಕವಾಗಿ ಸೇವೆ ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರನಾಗಿ ಕಪ್ಪುಚುಕ್ಕೆ ಇಲ್ಲದೆ ಕೆಲಸ ನಿರ್ವಹಿಸಿದ್ದೇನೆ ಎಂದರು.

ಪಂಚಾಯತ್ ರಾಜ್ ಇಲಾಖೆ ಎಇಇ ಪ್ರವೀಣಕುಮಾರ ಮಾತನಾಡಿ ಸಂಗಯ್ಯಸ್ವಾಮಿ ಸೇವಾ ವಯೋನಿವೃತ್ತಿ ಹೊಂದಿರುವುದು ಬೇಸರ ತಂದಿದೆ. ಯಾಕೆಂದರೆ ಸಂಗಯ್ಯಸ್ವಾಮಿ ಯಾವುದೇ ಕೆಲಸಗಳು ಹೇಳಿದರೂ ಚಾಚುತಪ್ಪದೆ ಅಚ್ಚುಕಟ್ಟಾಗಿ ಅಲ್ ರೌಂಡರ್ ತರಹ ಕೆಲಸ ಮಾಡುತ್ತಿದ್ದರು ಎಂದು ಗುಣಗಾನ ಮಾಡಿದರು. ವಕೀಲ ಶ್ರೀಮಂತ ಕಟ್ಟಿಮನಿ,ಗುತ್ತಿಗೆದಾರ ಶಶಿಧರ ಸೂಗೂರ,ವೀರಶೆಟ್ಟಿ ಪಾಟೀಲ,ಭೀಮರಾವ ಪೂಜಾರಿ ಅಣವಾರ,ಕಿರಿಯ ಇಂಜಿನಿಯರ್ ಅಬ್ದುಲ್ ಜಾವೀದ್ ಪಟೇಲ,ಶಾಮರಾವ ಓಂಕಾರ,ಜಗನ್ನಾಥ ಶೇರಿಕಾರ ಮಾತನಾಡಿದರು.

ಈ ಸಂದರ್ಭದಲ್ಲಿ ಇಂಜಿನಿಯರ್,ಧನರಾಜ ಪಾಟೀಲ, ಆಶಾರಾಣಿ, ತಾಪಂ.ಮಾಜಿ ಅಧ್ಯಕ್ಷೆ ವೀರಮ್ಮ ಸಂಗಯ್ಯಸ್ವಾಮಿ, ಬಸವರಾಜ ಮೇತ್ರಿ,ಬಾಬಾ,ಮಹಾದೇವ,ವೀರಪಾಕ್ಷಯ್ಯ, ಶೀಲಾವತಿ ಮಠಪತಿ,ಶರಣಯ್ಯಸ್ವಾಮಿ,ಬಸವರಾಜ ರಾಜೇಂದ್ರ,ಅನೇಕರಿದ್ದರು.



ಉದಯವಾಹಿನಿ ಚಿತ್ರ

**ಅಣವಾರ ಗ್ರಾಮದ ಸಮಗ್ರ ಅಭಿವೃದ್ಧಿಗೆ ಸಂಗಯ್ಯಸ್ವಾಮಿಯ ದೊಡ್ಡ ಪಾತ್ರವಿದೆ, ತಾಲ್ಲೂಕಿನಲ್ಲಿ ಅತಿ ಹೆಚ್ಚು ಅನುದಾನ ಬಿಡುಗಡೆಯಾಗಲು ಅಭಿವೃದ್ಧಿಯಾಗಲು ಸಂಗಯ್ಯಸ್ವಾಮಿ ಮೂಲಕಾರಣ, ಸೇವಾ ವಯೋನಿವೃತ್ತಿ ಆಗಿದೆ ಈಗ ರಾಜಕೀಯದಲ್ಲಿ ಪಾಲ್ಗೊಂಡು ಸಮಾಜ ಸೇವೆ ಮಾಡುತ್ತಾ ಮನೆಯ ಕುಟುಂಬಕ್ಕೆ ಹೆಚ್ಚಿನ ಸಮಯ ನೀಡಲಿ.**
**-ಕೆಎಂ.ಬಾರಿ, ಹಿರಿಯ ಮುಖಂಡ**

## ಲಂಚ ಪಡೆದ ಅಧಿಕಾರಿಗೆ 4 ವರ್ಷ ಜೈಲುಶಿಕ್ಷೆ

• **ಉದಯವಾಹಿನಿ, ಕಲಬುರಗಿ**

ಕರ್ನಾಟಕ ಗೃಹ ಮಂಡಳಿಯಿಂದ ಮಂಜೂರಾಗಿದ್ದ ಮನೆಗಳ ಮ್ಯೂಟೇಷನ್ ಮಾಡಿಕೊಡಲು 5 ಸಾವಿರ ರೂ ಲಂಚ ಪಡೆಯುತ್ತಿದ್ದವೇಳೆ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದ ಕಂದಾಯ ಅಧಿಕಾರಿಗೆ 4 ವರ್ಷ ಜೈಲು ಹಾಗೂ 20 ಸಾವಿರ ರೂ ದಂಡ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯ ಆದೇಶಿಸಿದೆ.

ನಿಂಗಮ್ಮ ಹಣಮಂತ್ರಾಯ ಬಿರಾದಾರ ಶಿಕ್ಷೆಗೆ ಒಳಗಾದ ಅಪರಾಧಿ ನಿಂಗಮ್ಮ 2016ರಲ್ಲಿ ಚಿತ್ತಾಪುರ ಪುರಸಭೆಯಲ್ಲಿ ಕಂದಾಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಶಿವಕುಮಾರ ಭಾಗಪ್ಪ ಸಾಧು ಎಂಬುವವರು ತಮ್ಮ ಮಾವ ಹಾಗೂ ಅತ್ತೆಯ ಹೆಸರಿನಲ್ಲಿದ್ದ ಮನೆಗಳ ಮ್ಯೂಟೇಷನ್‌ಗಾಗಿ ಅರ್ಜಿಸಲ್ಲಿಸಿದ್ದರು. ಆಗ ನಿಂಗಮ್ಮ 5 ಸಾವಿರ ರೂ ಲಂಚಕ್ಕೆ ಬೇಡಿಕೆ ಇರಿಸಿದ್ದರು.

ಈ ಕುರಿತು ಶಿವಕುಮಾರ ನೀಡಿದ ದೂರಿನನ್ವಯ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ನಿಂಗಮ್ಮ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಮೊದಲಿಗೆ ಇನ್‌ಸ್ಪೆಕ್ಟರ್ ಎಂ.ಎಂ.ಡಪಿನ ವಿಚಾರಣೆ ನಡೆಸಿದ್ದರು. ಬಳಿಕ ಕೆ.ಎಸ್. ಕಲ್ಲದೇವರು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಜಿ.ಎಲ್. ಲಕ್ಷ್ಮೀನಾರಾಯಣ ಅವರು ಅಪರಾಧಿ ನಿಂಗಮ್ಮ ಬಿರಾದಾರ ಅವರಿಗೆ 4 ವರ್ಷ ಜೈಲು ಹಾಗೂ 20 ಸಾವಿರ ರೂ ದಂಡ ವಿಧಿಸಿ ಆದೇಶಿಸಿದ್ದಾರೆ. ಲೋಕಾಯುಕ್ತರ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಅಶೋಕ ಎಸ್. ಚಾಂದಕವತೆ ವಾದ ಮಂಡಿಸಿದ್ದರು.


## ಮನೆ ಕಳೆದುಕೊಂಡ ಬಡವರಿಗೆ ನಿವೇಶನ ಮಂಜೂರಾತಿಗೆ ಒತ್ತಾಯ

• **ಉದಯವಾಹಿನಿ, ಆಳಂದ**

ಪಟ್ಟಣದ ರಸ್ತೆ ಅಗಲೀಕರಣ ಕಾಮಗಾರಿಯಿಂದ ಆಸ್ತಿ ಕಳೆದುಕೊಂಡು ನಿರಾಶ್ರಿತರಾಗಿರುವ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಸರ್ಕಾರದಿಂದ ಪರ್ಯಾಯ ನಿವೇಶನಗಳನ್ನು ಮಂಜೂರು ಮಾಡಬೇಕು ಎಂದು ಒತ್ತಾಯಿಸಿ ಭಾರತೀಯ ಜನತಾ ಪಕ್ಷದ ವತಿಯಿಂದ ಆಳಂದ ಪುರಸಭೆ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಬಿಜೆಪಿ ಮುಖಂಡರು, ರಸ್ತೆ ಅಗಲೀಕರಣದ ನೆಪದಲ್ಲಿ ತಲೆಮಾರುಗಳಿಂದ ವಾಸಿಸುತ್ತಿರುವ ಜನರ ಸ್ವಂತ ಆಸ್ತಿಗಳನ್ನು ಯಾವುದೇ ಪೂರ್ವ ನೋಟಿಸ್ ನೀಡದೇ ತೆರವುಗೊಳಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಲವರು ವರ್ಷಗಳಿಂದ ಪುರಸಭೆಗೆ ತೆರಿಗೆ ಪಾವತಿಸಿಕೊಂಡು ಬಂದಿದ್ದು, ಇಂತಹವರನ್ನು ಏಕಾಏಕಿ ಮನೆಗಳಿಂದ ಹೊರಹಾಕುವುದು ಅಮಾನುಷ ಕ್ರಮವಾಗಿದೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಅಶೋಕ್ ಬಗಲಿ, ಬಿಜೆಪಿ ತಾಲ್ಲೂಕಾಧ್ಯಕ್ಷ ಮಲ್ಲಿಕಾರ್ಜುನ ವಿ. ಕಂದಗುಳೆ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಎಸ್. ಗುತ್ತೇದಾರ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಹಾದಿಮನಿ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮನೆ, ಸೀತಾರಾಮ್ ಜಮಾದಾರ್, ಮಹೇಶ್ ಗೌಳಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮುಖಂಡರು ಮಾತನಾಡಿ, ಆರಂಭದಲ್ಲಿ 20 ಮೀಟರ್ ರಸ್ತೆ ಅಗಲೀಕರಣ ಎಂದು ತಿಳಿಸಲಾಗಿದ್ದು, ಈಗ ಏಕಾಏಕಿ 25 ಮೀಟರ್ ಅಗಲೀಕರಣ ಮಾಡಲಾಗುತ್ತಿದೆ. ಇದು ಅವೈಜ್ಞಾನಿಕವಾಗಿದ್ದು ತಕ್ಷಣವೇ ಈ ಕ್ರಮವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಯಾವುದೇ ಸ್ಪಷ್ಟ ಮಾಹಿತಿ ನೀಡದೇ, ದಾಖಲೆ ಪರಿಶೀಲನೆ ಮಾಡದೇ ತೆರವು ಕಾರ್ಯಾಚರಣೆ ನಡೆಸಿರುವುದು ಜನರಿಗೆ ತೀವ್ರ ತೊಂದರೆ ತಂದಿದೆ ಎಂದು ಹೇಳಿದರು.

ರಾಜಧಾನಿ ಬೆಂಗಳೂರಿನ ಯಲಂಕದಲ್ಲಿರುವ ಕೋಗಿಲು ಬಡಾವಣೆಯಲ್ಲಿ ಸರ್ಕಾರ ತೋರಿದ ಮಾನವೀಯ ಕಾಳಜಿಯಂತೆ, ಆಳಂದ ಪಟ್ಟಣದ ಸಂತ್ರಸ್ತರ ಮೇಲೂ ಸರ್ಕಾರ ಕಾಳಜಿ ವಹಿಸಬೇಕು.


ಮನೆ ಕಳೆದುಕೊಂಡವರಿಗೆ ನ್ಯಾಯಯುತ ಪರಿಹಾರ ನೀಡಬೇಕು ಅಥವಾ ಬೇರೆ ಸ್ಥಳದಲ್ಲಿ ಪರ್ಯಾಯ ನಿವೇಶನ ಕಲ್ಪಿಸಿ ಗೌರವಯುತ ಬದುಕು ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

## ಹಂಪಿ ಪರಿಸರದಲ್ಲಿ ಆರ್‌ಎಸ್‌ಎಸ್ ಸಭೆ

• **ಉದಯವಾಹಿನಿ, ಹೊಸಪೇಟೆ**

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಧ್ಯೇಯ, ಉದ್ದೇಶಗಳ ಕುರಿತು 23 ದೇಶಗಳಲ್ಲಿ ಪ್ರಚಾರದಲ್ಲಿ ತೊಡಗಿರುವ ಪ್ರಚಾರಕರು ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ಹಂಪಿಯ ವಿಜಯ ವಿಠ್ಠಲ ದೇವಸ್ಥಾನಕ್ಕೆ ಭೇಟಿ ನೀಡಿದರು.

ಹಂಪಿ ಸಮೀಪದ ಆನೆಗುಂದಿಯಲ್ಲಿ ಏರ್ಪಡಿಸಿರುವ ಮೂರು ದಿನಗಳ ಚಿಂತನ ಮಂಥನ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿರುವ ಇವರು, ಸಭೆಯ ಮಧ್ಯೆ ಬಿಡುವುಮಾಡಿ ಕೊಂಡು ಹಂಪಿಗೆ ಭೇಟಿ ನೀಡಿದರು.


ಉದಯವಾಹಿನಿ ಚಿತ್ರ

# ಪಂಚ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನಾ ಸಭೆ

### ಶಕ್ತಿ ಯೋಜನೆಯಿಂದ 1ಕೋಟಿ ಮಹಿಳೆಯರು ಪ್ರಯಾಣ ಬೆಳೆಸಿದ್ದು,36ಕೋಟಿ ರೂ.ಸಾರಿಗೆ ಇಲಾಖೆ ಆದಾಯ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನಾದ್ಯಂತ 22ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ವ್ಯಾಪ್ತಿಯಲ್ಲಿ ಪಂಚ ಗ್ಯಾರಂಟಿ ಯೋಜನೆಯ ಜಾಗೃತಿ ಕಾರ್ಯಕ್ರಮ ಸಭೆ ಮಾಡಲಾಗಿದ್ದು ಕೆಲ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಪಿಡಿಒಗಳು ನಿರ್ಲಕ್ಷ್ಯ ತೋರುತ್ತಿದ್ದು ಅಂಥವರ ವಿರುದ್ಧ ಉಸ್ತುವಾರಿ ಸಚಿವ ಪ್ರೀಯಾಂಕ್ ಖರ್ಗೆಯವರ ಗಮನಕ್ಕೆ ತಂದು ಕ್ರಮಕೈಗೊಳ್ಳಲು ತಿಳಿಸಲಾಗುವುದು ಎಂದು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ ಖಡಕ್ ಕ್ಕಾಗಿ ಹೇಳಿದರು.

ಪಟ್ಟಣದ ಚಂದಾಪೂರದ ತಾಲ್ಲೂಕಾ ಪಂಚಾಯತ್ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ಅನೇಕ ಪಂಚಾಯಿತಿ ವ್ಯಾಪ್ತಿಯಲ್ಲಿ ಪಿಡಿಒಗಳು ಹಾಜರಾಗದೆ ನಿರ್ಲಕ್ಷ್ಯಿಸಿದರೆ ಚಿಮ್ಮಾಯಿದ್ಲಾಯಿ ಪಿಡಿಒ ವಿಜಯಲಕ್ಷ್ಮಿ ರಾಜಕೀಯ ಬೇರೆಸಿ ಬೇರೆಯವರ ಮಾತು ಕೇಳಿಕೊಂಡು ಕೇಂದ್ರ ಸ್ಥಾನದಲ್ಲಿ ಸಭೆ ಆಯೋಜನೆ ಮಾಡದೆ ದಸ್ತಾಪೂರ ಗ್ರಾಮದಲ್ಲಿ ಸಭೆ ಆಯೋಜಿಸಿ ನಿರ್ಲಕ್ಷ್ಯ ವಹಿಸಿದ್ದಾರೆ,ಮುಂದೆ ಈ ತಪ್ಪು ಮಾಡದೆ ಮತ್ತೊಮ್ಮೆ ಕೇಂದ್ರ ಸ್ಥಾನದಲ್ಲಿ ಸಭೆ ನಡೆಸಬೇಕು ಇಲ್ಲಾದಿದ್ದರೆ ಕ್ರಮಕೈಗೊಳ್ಳಲಾಗುವುದು.

ಅಣವಾರ ಗ್ರಾಪಂ ವ್ಯಾಪ್ತಿಯಲ್ಲಿ ವಿಕಲಚೇತನರಿಗೆ 100ಮನೆಗಳು ಸರ್ಕಾರ ನೇಮಿಸಿದರೆ ಪಿಡಿಒ ವಿನೋಧ ನಿರ್ಲಕ್ಷ್ಯತನದಿಂದ ಅವಧಿ ಮುಕ್ತಾಯವಾಗಿ ಮನೆಗಳು ರದ್ದಾಗಿವೆ,ಯಾಕೆ ಸಮಯಕ್ಕೆ ಸರಿಯಾಗಿ ಮನೆಗಳು ವಿತರಿಸಿಲ್ಲವೆಂದು ಅಧ್ಯಕ್ಷರು ಗರಂ ಆದಾಗ ಪಿಡಿಒ ತಪ್ಪು ಉತ್ತರಿಸಿದಾಗ ಗ್ರಾಮದ ಮುಖಂಡರಿಗೆ ಕರೆ ಮೂಲಕ ಮಾತನಾಡಿದ ಅಧ್ಯಕ್ಷರು ಸ್ಥಳದಲ್ಲೇ ಪಿಡಿಒಗೆ ಹೀಗೆ ಕೆಲಸ ಮಾಡಿದರೆ ಇಲಾಖೆಯ ಸಚಿವರಿಗೆ ಹೇಳಿ ಕ್ರಮಕ್ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಸಭೆಯ ಗೈರುಹಾಜರು ಬಗ್ಗೆ ಸಿಡಿಪಿಓ ಸವಿತಾ ಹೇಳುತ್ತಾ ಒಮ್ಮೆ ಜಿಲ್ಲಾ ಸಭೆ ಮತ್ತೊಮ್ಮೆ ಆರೋಗ್ಯ ಸಮಸ್ಯೆ ಮತ್ತೊಮ್ಮೆ ಮಗನ ಆರೋಗ್ಯ ಉತ್ತರ ಕೊಡುತ್ತಿದಂತೆ ಮತ್ತೆ ಸದಸ್ಯ ಲಕ್ಷ್ಮಣ ಆವುಂಟಿ ಗರಂ ಆಗಿ ಇವೆಲ್ಲವೂ ಸಮಸ್ಯೆಗಳು ಮಗನ ಸಮಸ್ಯೆ ಇದ್ದರೆ ಮನೆಯಲ್ಲಿಯೇ ಇರಿ ಸರ್ಕಾರದ ಸಂಬಳ ಪಡೆಯುತ್ತಿದರೆ ಸರ್ಕಾರದ ಸಂಪೂರ್ಣ ಕೆಲಸ ಮಾಡುವ ಜವಾಬ್ದಾರಿ ನಿಮ್ಮದ್ದು ಅನ್ನುತ್ತಿರುವಾಗ ಸಿಡಿಪಿಓ ಸವಿತಾ ಸುಮ್ಮನಿರದೆ ಮಾತು ಬೆಳೆಸಿ ವಾದಪ್ರತಿವಾದ ಮಾಡುತ್ತಾ ಭಾವುಕರಾದ ಅಧ್ಯಕ್ಷ ಬಸವರಾಜ ಮಾಲಿ ಮತ್ತೊಮ್ಮೆ ಸಭೆಗೆ ಬರುವಾಗ ಸಮರ್ಪಕ ವರದಿ ತಯ್ಯಾರಿಸಿ ಬರುವಂತೆ ಹೇಳಿದರು.

**ಮಾತಿನ ಚಕಮಕಿ**

**ಸಭೆಯಲ್ಲಿ ಸಿಡಿಪಿಓ ಸವಿತಾ ತಾಲ್ಲೂಕಾ ಪ್ರಗತಿ ವರದಿ ಓದದೆ ಜಿಲ್ಲಾದ್ಯಂತ ವರದಿ ಓದುವಾಗ ಸದಸ್ಯ ಲಕ್ಷ್ಮಣ ಆವುಂಟಿ ಮಾತನಾಡಿ ತಾಲ್ಲೂಕಾ ವರದಿ ಓದಿ ಅದನ್ನು ಬಿಟ್ಟು ಜಿಲ್ಲೆಯ ವರದಿ ಯಾತಕ್ಕಾಗಿ ಓದುವುದು ಮತ್ತು ಮೊದಲು ತಾವು ಪಂಚ ಗ್ಯಾರಂಟಿ ಯೋಜನೆ ಸಭೆಯಾಗಲಿ ಜಾಗೃತಿ ಕಾರ್ಯಕ್ರಮಗಳಿಗೆ ಯಾಕೆ ಬರಲಿಲ್ಲವೆಂಬುವುದು ಸಮರ್ಪಕ ಉತ್ತರ ಕೊಟ್ಟು ವರದಿ ಓದಿ ಎಂದು ಆಕ್ಷೇಪಣೆ ಸಲ್ಲಿಸಿದರು.**



ಉದಯವಾಹಿನಿ ಚಿತ್ರ

ಸಾರಿಗೆ ವ್ಯವಸ್ಥಾಪಕ ಸುರೇಶ ತೇಗಲತಿಪ್ಪಿ ವರದಿ ಓದಿ,ಬಸ್ ಘಟಕದಲ್ಲಿ 73ಬಸ್‌ಗಳಿವೆ, ಚಿಮ್ಮಾನಚೋಡ್ ಸಲಗರ ಬಸಂತಪೂರ ವಾಯ ಕಲಬುರ್ಗಿ ಮತ್ತೆ ಕಲಬುರ್ಗಿಯಿಂದ ಇದೆ ಮಾರ್ಗ ಚಿಂಚೋಳಿ ಬಸ್ ಪ್ರಾರಂಭಿಸುವಂತೆ ಸದಸ್ಯ ಮಲ್ಲಿಕಾರ್ಜುನ ಪಾಟೀಲ ಹೇಳಿದಾಗ ವ್ಯವಸ್ಥಾಪಕ ಸುರೇಶ ಶೀಘ್ರದಲ್ಲೇ ಬಸ್ ವ್ಯವಸ್ಥೆ ಮಾಡುತ್ತೇನೆಂದರು, ಶಕ್ತಿ ಯೋಜನೆಯಿಂದ ತಾಲ್ಲೂಕಿನಲ್ಲಿ 1ಕೋಟಿ ಮಹಿಳೆಯರು ಪ್ರಯಾಣ ಬೆಳೆಸಿದ್ದು ಇದರಿಂದ ಇಲಾಖೆಗೆ 36ಕೋಟಿ ರೂ. ಆದಾಯ ಬಂದಿದೆ ಎಂದರು.

ಜೆಸ್ಕಾಂ ಎಇಇ ಕಾಮಣ್ಣ ಇಂಜೇಳ್ಳಿ ಗೃಹಜ್ಯೋತಿ ಯೋಜನೆಯಡಿ ತಾಲ್ಲೂಕಿನಲ್ಲಿ ಶೇಕಡಾ 98ಪ್ರತಿಶತಃ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಆಹಾರ ನಿರೀಕ್ಷಕ ಅಧಿಕಾರಿ ಉಷಾ ಪ್ರಗತಿ ವರದಿ ಓದಿ ಅಂತ್ಯೋದಯ ಕಾರ್ಡ್ 6551 ಮತ್ತು ಬಿಪಿಎಲ್ 45307 ಕಾರ್ಡ್ ಸೇರಿ 51858ಕಾರ್ಡ್ ಗಳಿವೆ, ಎಪಿಎಲ್ 5673ಕಾರ್ಡಗಳು ಸೇರಿದಂತೆ ಒಟ್ಟಾರೆ 57531ಕಾರ್ಡಗಳಿವೆ 1,90,199 ಸದಸ್ಯರಿದ್ದಾರೆ,ಮಿರಿಯಾಣ ರಾಷನ್ ಡೀಲರ್‌ಗೆ ನೋಟಿಸ್ ಕೊಟ್ಟಿದರೂ ಉತ್ತರ ನೀಡಿಲ್ಲ ಲೈಸೆನ್ಸ್ ರದ್ದುಪಡಿಸಲು ಡಿಡಿಯವರಿಗೆ ಪತ್ರ ಬರೆಯುತ್ತೇನೆ ಎಂದರು.

ಯುವನಿಧಿ ಯೋಜನೆಯಲ್ಲಿ 1267ಜನ ನೋಂದಣಿ ಆಗಿದ್ದಾರೆ ಇಲ್ಲಿಯವರೆಗೆ 3,17,46,000ರೂ.ಯುವಕರಿಗೆ ಅನುದಾನ ತಲುಪಿದೆ ಎಂದರು.

**ಗ್ಯಾರಂಟಿ ಯೋಜನೆಯ ಜಾಗೃತಿ ಕಾರ್ಯಕ್ರಮ**

ತಾಪಂ ಇಓ ಸಂತೋಷ ಚವ್ಹಾಣ ಮಾತನಾಡಿ ಸಭೆಗೆ ಬರುವಾಗ ಅಧಿಕಾರಿಗಳು ಪಿಡಿಓಗಳು ಸೂಕ್ತ ದಾಖಲೆಗಳೊಂದಿಗೆ ಬರಲು ಗೋತ್ತಾಗುವುದಿಲ್ಲ ನಿಮ್ಮ ಕೆಲಸ ನಿವು ಜವಾಬ್ದಾರಿಯಿಂದ ಮಾಡಿದರೆ ಯಾವುದೇ ಸಮಸ್ಯೆ ಆಗಲ್ಲ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ವೀರಮ್ಮ ಸಂಗಯ್ಯಸ್ವಾಮಿ, ವಿಜಯಕುಮಾರ ಗಂಗನಪಳ್ಳಿ, ಮಲ್ಲಿಕಾರ್ಜುನ ಪಾಟೀಲ,ಜನಾರ್ಧನ ಪಾಟೀಲ,ಅರವಿಂದ ರೆಡ್ಡಿ,ಗೋವಿಂದಪ್ಪ,ಶಾಂತಕುಮಾರ, ಸೇರಿದಂತೆ ಪಿಡಿಓಗಳು ಗೋವಿಂದ ರೆಡ್ಡಿ,ಮಲ್ಲಿಕಾರ್ಜುನ ಗಿರಿ,ಗುರುನಾಥ ರಾಠೋಡ,ಜ್ಯೋತಿ,ರಾಮಕೃಷ್ಣ,ವಿಜಯಲಕ್ಷ್ಮಿ,ಪ್ರತೀಕ್ಷಾ ರಾಠೋಡ, ಶ್ರೀಧರಗೌಡ,ಲಲಿತಾ,ಶಾಂತಕುಮಾರ ಅನೇಕರಿದ್ದರು.

### ಅಮೆರಿಕ ಕೇವಲ ಅಕ್ರಮ ಮಾರ್ಗದ ಪ್ರವೇಶವನ್ನು ಮಾತ್ರವಲ್ಲದೇ, ಕಾನೂನು ಮಾರ್ಗದ ಪ್ರವೇಶವನ್ನೂ ನಿರ್ಬಂಧಿಸುತ್ತಿದೆ

# ಯುಎಸ್ ವೀಸಾ ವಾರ್ನಿಂಗ್‌ಗೆ ಭಾರತೀಯರ ಆಕ್ರೋಶ

**ಅಮೆರಿಕ :** ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2026ರಲ್ಲೂ ತಮ್ಮ ಜಾಗತಿಕ ವೀಸಾ ಸಮರವನ್ನು ಮುಂದುವರೆಸುವುದು ಖಚಿತವಾಗಿದೆ. 2025ರ ವರ್ಷಪೂರ್ತಿ ಕಠಿಣ ವೀಸಾ ನಿಯಮಗಳನ್ನು ಜಾರಿಗೆ ತರುವ ಮೂಲಕ ವಿದೇಶಿಯರನ್ನು ಕಾಡಿದ ಟ್ರಂಪ್ ಆಡಳಿತ, ಹೊಸ ವರ್ಷದಲ್ಲೂ ಈ ಆಟವನ್ನು ಮುಂದುರೆಸಲಿದೆ. ಎಚ್-1ಬಿ ವೀಸಾ ನಿಯಮ ಬದಲಾವಣೆ ಗೊಂದಲ ಮುಂದಿನ ವರ್ಷಕ್ಕೂ ಕ್ಯಾರಿ ಫಾರ್ವರ್ಡ್ ಮಾಡಿರುವ ಅಮೆರಿಕ, ವಿಶ್ವದಾದ್ಯಂತ ಇರುವ ತನ್ನ ರಾಯಭಾರ ಕಚೇರಿಗಳ ಮೂಲಕ ಹೊಸ ವೀಸಾ ವಾರ್ನಿಂಗ್‌ಗಳನ್ನು ಬಿಡುಗಡೆ ಮಾಡಿದೆ. ನಿಯಮ ಮೀರಿದರೆ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂಬ ರಾಯಭಾರ ಕಚೇರಿಗಳ ಎಚ್ಚರಿಕೆ, ವೀಸಾ ಸಂದರ್ಶನಕ್ಕೆ ಕಾಯುತ್ತಿರುವವರ ಆತಂಕ ಮತ್ತಷ್ಟು ಹೆಚ್ಚಿಸಿದೆ. ಹೌದು, ಎಚ್-1ಬಿ ಮತ್ತು ಎಚ್-4 ವೀಸಾ ನಿಯಮಗಳನ್ನು ಗೊಂದಲದಲ್ಲಿ ಮುಳುಗಿಸಿರುವ ಟ್ರಂಪ್ ಆಡಳಿತ, ಇದರಿಂದ ವಿದೇಶಿ ಕಾರ್ಮಿಕರು ಅದರಲ್ಲೂ ಭಾರತೀಯರು ಪರದಾಡುತ್ತಿರುವುದನ್ನು ನೋಡಿ ಖುಷಿ ಪಡುತ್ತಿದೆ. ಟ್ರಂಪ್ ಆಡಳಿತದ ಈ ವಿಕೃತ ನಗು, ಭಾರತೀಯರನ್ನು ಕೆರಳಿಸುತ್ತಿದೆ. ಆದರೆ ಸಂದರ್ಶನ ವಿಳಂಬ ಅವರ ಭವಿಷ್ಯವನ್ನೇ ಅಂಧಕಾರದಲ್ಲಿ ಮುಳುಗಿಸಿದೆ. ಹೊಸ ವರ್ಷದಲ್ಲಾದರೂ ಈ ಗೊಂದಲಗಳು ಇರದಿರಲಿ ಎಂಬ ಭಾರತೀಯರ ಪ್ರಾರ್ಥನೆ ಸುಳ್ಳಾಗಿದೆ. ಏಕೆಂದರೆ ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿಯು, ವರ್ಷಾಂತ್ಯಕ್ಕೆ ಹೊಸ ವೀಸಾ ವಾರ್ನಿಂಗ್‌ಗಳನ್ನು ಬಿಡುಗಡೆ ಮಾಡಿದೆ. ಈ ಕುರಿತ ರಾಯಭಾರ ಕಚೇರಿಯ ಎಕ್ಸ್ ಪೋಸ್ಟ್, ಭಾರತೀಯರ ಅಮೆರಿಕ ಕನಸನ್ನು ಮತ್ತಷ್ಟು ಕಠಿಣವಾಗಿಸಿದೆ.







ಹೊಸದಾಗಿ ವೀಸಾ ವಾರ್ನಿಂಗ್ ಬಿಡಗಡೆ ಮಾಡಿರುವ ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿ, ನೀವು ಅಮೆರಿಕದ ಕಾನೂನನ್ನು ಉಲ್ಲಂಘಿಸಿದರೆ, ನಿಮಗೆ ಗಮನಾರ್ಹವಾದ ಕ್ರಿಮಿನಲ್ ದಂಡ ವಿಧಿಸಲಾಗುತ್ತದೆ. ಟ್ರಂಪ್ ಆಡಳಿತವು ಅಮೆರಿಕಕ್ಕೆ ಅಕ್ರಮ ವಲಸೆಯನ್ನು ಕೊನೆಗೊಳಿಸಲು ಮತ್ತು ನಮ್ಮ ರಾಷ್ಟ್ರದ ಗಡಿಗಳು ಮತ್ತು ನಮ್ಮ ನಾಗರಿಕರನ್ನು ರಕ್ಷಿಸಲು ಬದ್ಧವಾಗಿದೆ ಎಂದು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದೆ. ಮೊದಲೇ ವೀಸಾ ಸಂದರ್ಶನ ವಿಳಂಬದಿಂದ ಕಂಗಾಲಾಗಿರುವ ಭಾರತೀಯ ಕಾರ್ಮಿಕರು, ಹೊಸ ವೀಸಾ ವಾರ್ನಿಂಗ್‌ಗಳಿಂದ ಮತ್ತಷ್ಟು ರೋಸಿ ಹೋಗಿದ್ದಾರೆ.

ಅಮೆರಿಕ ರಾಯಭಾರ ಕಚೇರಿಯ ವೀಸಾ ಎಚ್ಚರಿಕೆಯಲ್ಲಿ ಹೊಸ ಅಂಶಗಳೇನು ಇಲ್ಲದೇ ಹೋದರೂ, ಹೈದರಾಬಾದ್, ಚೆನ್ನೈನಲ್ಲಿರುವ ಯುಎಸ್ ಎಂಬೆಸ್ಸಿ ಎಚ್-1ಬಿ ಮತ್ತು ಎಚ್-4 ವೀಸಾ ಸಂದರ್ಶನಗಳನ್ನು ಮುಂದೂಡಿರುವುದರ ಮಧ್ಯೆ, ಮತ್ತೊಮ್ಮೆ ವೀಸಾ ಎಚ್ಚರಿಕೆ ನೀಡಿರುವುದು ಗಮನ ಸೆಳೆದಿದೆ. ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಎಕ್ಸ್ ಅಕೌಂಟ್, ಅಮೆರಿಕದ ಸುದ್ದಿಗಳು, ನಿರ್ಣಾಯಕ ಬೆಳವಣಿಗೆಗಳು, ವಿದೇಶಾಂಗ ಇಲಾಖೆಯ ಪ್ರಕಟಣೆಗಳನ್ನು ನಿಯಮಿತವಾಗಿ ಹಂಚಿಕೊಳ್ಳುತ್ತದೆ. ರಾಯಭಾರ ಕಚೇರಿಯ ಕೊನೆಯ ಎಚ್ಚರಿಕೆ ಸಂದೇಶ ಕಳೆದ ಡಿಸೆಂಬರ್ 26 ರಂದು ಬಂದಿದ್ದು, ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಅಕ್ರಮ ವಲಸೆಯನ್ನು ಸುಗಮಗೊಳಿಸುವ ಮೂಲಕ, ದುರ್ಬಲ ಜನರನ್ನು ಬೇಟೆಯಾಡುವ ವ್ಯಕ್ತಿಗಳನ್ನು ಮತ್ತು ಕಂಪನಿಗಳನ್ನು ಅಮೆರಿಕ ಗುರಿಯಾಗಿಸಿಕೊಂಡಿದೆ ಎಂದು ನೇರವಾಗಿ ಹೇಳಿದೆ ಭಾರತದಲ್ಲಿ ಸಿಲುಕಿಕೊಂಡಿದ್ದಾರೆ.ಹೆಚ್ಚಿನ ತಪಾಸಣೆ ಮತ್ತು ಪರಿಶೀಲನೆಗೆ ಗುರಿಪಡಿಸಲಾಗಿದೆ.

- **ವಲಸಿಗರಿಗೆ ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿಯಿಂದ ಹೊಸ ಎಚ್ಚರಿಕೆ.**
- **ಯುಎಸ್ ಎಂಬೆಸ್ಸಿ ಎಚ್ಚರಿಕೆಗೆ ಭಾರತೀಯರಿಂದ ತೀವ್ರ ಆಕ್ರೋಶದ ಪ್ರತಿಕ್ರಿಯೆ.**
- **ಗಡಿಪಾರು ಶಿಕ್ಷೆಗೆ ಗುರಿಯಾಗುವ ಭಯದಲ್ಲಿ ಅಮೆರಿಕ ಬಿಡದ ಎಚ್-1ಬಿ ವೀಸಾದಾರರು.**

### ಭಾರತೀಯರ ಅಸಮಾಧಾನ

**ಇನ್ನು ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಹೊಸ ವೀಸಾ ಎಚ್ಚರಿಕೆ, ಭಾರತೀಯರನ್ನು ತೀವ್ರವಾಗಿ ಕೆರಳಿಸಿದೆ. ಅನೇಕ ಎಕ್ಸ್ ಬಳಕೆದಾರರು ಯುಎಸ್ ಎಂಬೆಸ್ಸಿಯ ಪೋಸ್ಟ್ ವಿರೋಧಿಸಿ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ. ಅಮೆರಿಕ ಕೇವಲ ಅಕ್ರಮ ಮಾರ್ಗದ ಪ್ರವೇಶವನ್ನು ಮಾತ್ರವಲ್ಲದೇ, ಕಾನೂನು ಮಾರ್ಗದ ಪ್ರವೇಶವನ್ನೂ ನಿರ್ಬಂಧಿಸುತ್ತಿದೆ ಎಂದು ಹಲವರು ಕಿಡಿಕಾರಿದ್ದಾರೆ. ಕೊನೆಯ ಕ್ಷಣದಲ್ಲಿ ಸಂದರ್ಶನ ಅಪಾಯಿಂಟ್‌ಮೆಂಟ್‌ಗಳನ್ನು ರದ್ದುಗೊಳಿಸಿ, 4 ತಿಂಗಳುಗಳ ಕಾಲ ಅದನ್ನು ಮುಂದೂಡುವುದು ಕ್ರೌರ್ಯದ ಪರಮಾವಧಿ ಎಂದು ಓರ್ವ ಎಕ್ಸ್ ಬಳಕೆದಾರ ಹರಿಹಾಯ್ದಿದ್ದಾನೆ. ಯುಎಸ್ ಉದ್ದೇಶಪೂರ್ವಕವಾಗಿ ಎಚ್-1ಬಿ ವೀಸಾ ಹಂಚಿಕೆಯಲ್ಲಿ ಗೊಂದಲಗಳನ್ನು ಸೃಷ್ಟಿಸಿದೆ ಎಂಬುದು ಬಹುತೇಕ ಭಾರತೀಯರು ಮಾಡುತ್ತಿರುವ ಗಂಭೀರ ಆರೋಪವಾಗಿದೆ.**

## ಬೆಂಗಳೂರಿನಿಂದ ಡ್ರಗ್ಸ್ ತರಿಸಿ ಕೇರಳದಲ್ಲಿ ವಿದ್ಯಾರ್ಥಿಗಳಿಗೆ ಮಾರುತ್ತಿದ್ದ ಗ್ಯಾಂಗ್ ಸೆರೆ

**ತಿರುವಂತನಪುರಂ:** ಕೇರಳದಲ್ಲಿ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ಸರಬರಾಜು ಮಾಡಿದ್ದಕ್ಕಾಗಿ ವೈದ್ಯ ಸೇರಿದಂತೆ 7 ಜನರನ್ನು ಬಂಧಿಸಲಾಗಿದೆ. ಈ ಹಿಂದೆ, ಗುಂಪನ್ನು ತಡೆಯಲು ಪೊಲೀಸರು ಮಾಡಿದ ಪ್ರಯತ್ನ ವಿಫಲವಾಗಿತ್ತು. ತಿರುವನಂತಪುರಂನಲ್ಲಿ ನಡೆದ ಪ್ರಮುಖ ಮಾದಕ ದ್ರವ್ಯ ಪತ್ತೆಯಲ್ಲಿ ಬಂಧಿಸಲಾದ ಏಳು ಜನರಲ್ಲಿ ವೈದ್ಯ ಮತ್ತು ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ (ಬಿಡಿಎಸ್) ವಿದ್ಯಾರ್ಥಿ ಸೇರಿದ್ದಾರೆ.

ಅಟ್ಟಿಂಗಲ್ ಮತ್ತು ನೆಡುಮಂಗಾಡ್ ಗ್ರಾಮೀಣ (ಜಿಲ್ಲಾ ಮಾದಕ ದ್ರವ್ಯ ವಿರೋಧಿ ವಿಶೇಷ ಕಾರ್ಯ ಪಡೆ) ತಂಡಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಬಾಡಿಗೆ ಮನೆಯಿಂದ , ಹೈಬ್ರಿಡ್ ಗಾಂಜಾ ಮತ್ತು ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಬಂಧಿತ ಏಳು ಜನರನ್ನು ಡಾ. ವಿಘ್ನೇಶ್ ದಾತನ್, ಬಿಡಿಎಸ್ ವಿದ್ಯಾರ್ಥಿ ಹಲೀನಾ, ಅಸಿಮ್, ಅವಿನಾಶ್, ಅಜಿತ್, ಅನ್ಸಿಯಾ ಮತ್ತು ಹರೀಶ್ ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಅವಿನಾಶ್ ಐಟಿ ಉದ್ಯೋಗಿಯಾಗಿದ್ದು,



ಅಸಿಮ್, ಅಜಿತ್ ಮತ್ತು ಅನ್ಸಿಯಾ ಈ ಹಿಂದೆ ಹಲವಾರು ಮಾದಕ ದ್ರವ್ಯ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ ಎಂದು ದೃಢಪಡಿಸಿದ್ದಾರೆ. ದಾಳಿಯ ಸಮಯದಲ್ಲಿ, ಪೊಲೀಸರು ಸುಮಾರು ನಾಲ್ಕು ಗ್ರಾಂ , 1 ಗ್ರಾಂ ಹೈಬ್ರಿಡ್ ಗಾಂಜಾ ಮತ್ತು 100 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಹೈಬ್ರಿಡ್ ಗಾಂಜಾವನ್ನು ಪ್ರತಿ ಗ್ರಾಂಗೆ 3,000 ರೂ. ದರದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಪೊಲೀಸರು ಎರಡು ಕಾರುಗಳು, ಎರಡು ಬೈಕ್‌ಗಳು ಮತ್ತು ಹತ್ತು ಮೊಬೈಲ್ ಫೋನ್‌ಗಳನ್ನು ಸಹ ವಶಪಡಿಸಿಕೊಂಡಿದ್ದಾರೆ. ಗೌಪ್ಯ ಮಾಹಿತಿ ಪಡೆದ ನಂತರ ಆರೋಪಿಗಳನ್ನು ಕಣಿಯಾಪುರಂ ತೊಪ್ಪಿಲ್ ಪ್ರದೇಶದ ಬಾಡಿಗೆ ಮನೆಯಿಂದ ವಶಕ್ಕೆ ಪಡೆಯಲಾಗಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.ಈ ಗುಂಪು ಬೆಂಗಳೂರಿನಿಂದ ಎಂಡಿಎಂಎ ಮತ್ತು ಇತರ ವಸ್ತುಗಳನ್ನು ಸಾಗಿಸಿ ವಿತರಿಸುತ್ತಿದೆ ಎನ್ನಲಾಗಿದೆ.

ಈ ವಸ್ತುಗಳನ್ನು ವಿದ್ಯಾರ್ಥಿಗಳು ಮತ್ತು ವೈದ್ಯರಿಗೆ ಪೂರೈಸಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.ಈ ಹಿಂದೆ ಗುಂಪನ್ನು ತಡೆಯುವ ಪ್ರಯತ್ನ ವಿಫಲವಾಗಿದೆ. ಈ ಹಿಂದೆ, ಆರೋಪಿಗಳು ಪೊಲೀಸ್ ಜೀಪನ್ನು ಅವರ ಕಾರಿಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದರು ಎಂಬ ಆರೋಪದ ಮೇಲೆ ಗುಂಪನ್ನು ತಡೆಯಲು ಪೊಲೀಸರು ಮಾಡಿದ ಪ್ರಯತ್ನ ವಿಫಲವಾಗಿತ್ತು. ಆರೋಪಿಗಳು ಕಣಿಯಾಪುರಂ ತೊಪ್ಪಿಲ್‌ನಲ್ಲಿ ಅಡಗಿಕೊಂಡಿದ್ದಾರೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಒಂದು ತಂಡ ಮನೆಯನ್ನು ಸುತ್ತುವರೆದು ಗುಂಪನ್ನು ಬಂಧಿಸಿತು.

## ಫೆ.1 ರಿಂದ ತಂಬಾಕು ಉತ್ಪನ್ನಗಳು ದುಬಾರಿ

**ನವದೆಹಲಿ:** ಬರುವ ಫೆಬ್ರವರಿ 1 ರಿಂದ ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕ ಮತ್ತು ಪಾನ್ ಮಸಾಲಾಗಳ ಮೇಲೆ ಹೊಸ ಸೆಸ್ ವಿಧಿಸಲಾಗುತ್ತಿದೆ. ಇದರಿಂದ ಅವುಗಳ ಬೆಲೆಯಲ್ಲಿ ಭಾರಿ ಏರಿಕೆಯಾಗಲಿದೆ. ತಂಬಾಕು ಮತ್ತು ಪಾನ್ ಮಸಾಲಾ ಮೇಲಿನ ಹೊಸ ಸುಂಕಗಳು ಜಿಎಸ್‌ಟಿ ದರಕ್ಕಿಂತ ಹೆಚ್ಚಿರುತ್ತದೆ. ಫೆ.1 ರಿಂದ ಪಾನ್ ಮಸಾಲಾ, ಸಿಗರೇಟ್, ತಂಬಾಕು ಮತ್ತು ಅಂತಹುದೇ ಉತ್ಪನ್ನಗಳಿಗೆ ಶೇ. 40 ರಷ್ಟು ಜಿಎಸ್‌ಟಿ ದರ ಇರಲಿದೆ.

ಬೀಡಿಗಳಿಗೆ ಶೇ. 18 ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಬೀಳಲಿದೆ ಎಂದು ಸರ್ಕಾರಿ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಪಾನ್ ಮಸಾಲಾ ಮೇಲೆ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ವಿಧಿಸಲಾಗುವುದು, ಆದರೆ ತಂಬಾಕು ಮತ್ತು ಸಂಬಂಧಿತ ಉತ್ಪನ್ನಗಳು ಹೆಚ್ಚುವರಿ ಅಬಕಾರಿ ಸುಂಕವನ್ನು ವಿಧಿಸಲಾಗುವುದು.



ಹಣಕಾಸು ಸಚಿವಾಲಯವು ನಿನ್ನೆ ಜಗಿಯುವ ತಂಬಾಕು, ಜರ್ದಾ ಸುಗಂಧಿತ ತಂಬಾಕು ಮತ್ತು ಗುಟ್ಕಾ ಪ್ಯಾಕಿಂಗ್ ಯಂತ್ರಗಳ (ಸಾಮರ್ಥ್ಯ ನಿರ್ಣಯ ಮತ್ತು ಸುಂಕ ಸಂಗ್ರಹ) ನಿಯಮಗಳು-2026 ಅಧಿಸೂಚನೆ ಹೊರಡಿಸಿದೆ. ಡಿಸೆಂಬರ್‌ನಲ್ಲಿ ಸಂಸತ್, ಪಾನ್ ಮಸಾಲಾ ತಯಾರಿಕೆಯ ಮೇಲೆ ಹೊಸ ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಹಾಗೂ ತಂಬಾಕಿನ ಮೇಲಿನ ಅಬಕಾರಿ ಸುಂಕವನ್ನು ವಿಧಿಸಲು ಅನುಮತಿಸುವ ಎರಡು ಮಸೂದೆಗಳನ್ನು ಅಂಗೀಕರಿಸಿತ್ತು.

## ಆಕ್ಷರದ ಮೇಲೆ ಕರ್ಪೂರ ಬೆಳಗಿಸಿ ಹೊಸ ವರ್ಷಾಚರಣೆ

**ಶಬರಿಮಲೆ:** ಮಕರವಿಳಕ್ಕು ಹಬ್ಬದ ನಡುವೆಯೂ ಶಬರಿಮಲೆ ಸನ್ನಿಧಾನದಲ್ಲಿ ಹೊಸ ವರ್ಷಕ್ಕೆ ಶಾಂತ ಸ್ವಾಗತ ದೊರೆಯಿತು, ಭದ್ರತಾ ಸಿಬ್ಬಂದಿ ಮತ್ತು ಭಕ್ತರು ಅಯ್ಯಪ್ಪ ದೇಗುಲದಲ್ಲಿ ಒಟ್ಟುಗೂಡಿ ನೂತನ ವರ್ಷ ಬರಮಾಡಿಕೊಂಡರು. ಸನ್ನಿಧಾನಂನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೇರಳ ಪೊಲೀಸ್ ಸಿಬ್ಬಂದಿ, ಅಗ್ನಿಶಾಮಕ ದಳ, ಕ್ಷಿಪ್ರ ಕಾರ್ಯ ಪಡೆ ಮತ್ತು ಇತರ ಸಿಬ್ಬಂದಿಯೊಂದಿಗೆ ಹ್ಯಾಪಿ ನ್ಯೂ ಇಯರ್ ಎಂಬ ಪದಗಳಲ್ಲಿ ಜೋಡಿಸಲಾದ ಕರ್ಪೂರವನ್ನು ಬೆಳಗಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಿದರು.

ಮೊದಲು ಅಕ್ಷರಗಳನ್ನು ಸೀಮೆಸುಣ್ಣದಿಂದ ಬಿಡಿಸಿ, ಅವುಗಳ ಮೇಲೆ ಕರ್ಪೂರವನ್ನು ಹಾಕಲಾಯಿತು ಮತ್ತು ನಿಖರವಾಗಿ ಮಧ್ಯರಾತ್ರಿ (ಡಿಸೆಂಬರ್ 31-ಜನವರಿ 1) ಶಬರಿಮಲೆ ಮುಖ್ಯ ಪೊಲೀಸ್ ಸಂಯೋಜಕ ಎಡಿಜಿಪಿ ಎಸ್ ಶ್ರೀಜಿತ್ ಕರ್ಪೂರವನ್ನು ಬೆಳಗಿಸಿದರು ಎಂದು ಪ್ರಕಟಣೆ ತಿಳಿಸಿದೆ. ಸರಳ ಆಚರಣೆಯು ಸನ್ನಿಧಾನಂನಲ್ಲಿ ಹಾಜರಿದ್ದ ಅಯ್ಯಪ್ಪ ಭಕ್ತರ ಗಮನ ಸೆಳೆಯಿತು.ಹಲವರು ಹೊಸ ವರ್ಷದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಮತ್ತು





ಸ್ವಾಮಿ ಶರಣಂ ಎಂದು ಜಪಿಸುವ ಮೂಲಕ ಸೇರಿಕೊಂಡರು, ಇದು ಈ ಕ್ಷಣವನ್ನು ವಿಶೇಷ ಮತ್ತು ಸ್ಮರಣೀಯವಾಗಿಸಿತು. ಏತನ್ಮಧ್ಯೆ, ಮಕರವಿಳಕ್ಕು ಹಬ್ಬದ ಭಾಗವಾಗಿ ಯಾತ್ರಿಕರ ಭಾರೀ ಹರಿವು ಮುಂದುವರೆದಿದೆ.ಡಿಸೆಂಬರ್ 30 ರಂದು ಮಂಡಲ ಪೂಜೆಯ ನಂತರ ಸಂಜೆ 5 ಗಂಟೆಗೆ ದೇವಾಲಯ ತೆರೆದ ನಂತರ, ಡಿ.31 ರಂದು ಸಂಜೆ 5.11 ರವರೆಗೆ ಒಟ್ಟು 1,20,256 ಭಕ್ತರು ಸನ್ನಿಧಾನವನ್ನು ತಲುಪಿದ್ದಾರೆ. ಹಬ್ಬದ ದಿನಗಳು ಮುಂದುವರಿಯುವುದರಿಂದ ಯಾತ್ರಾರ್ಥಿಗಳಿಗೆ ಸುಗಮ ದರ್ಶನ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕುರಾನ್ ಪ್ರತಿ ಮೇಲೆ ಕೈ ಇಟ್ಟು ನ್ಯೂಯಾರ್ಕ್ ಮೇಯರ್ ಆಗಿ ಪ್ರಮಾಣವಚನ

**ನ್ಯೂಯಾರ್ಕ್:** ಇಲ್ಲಿನ ಮ್ಯಾನ್‌ಹ್ಯಾಟನ್‌ನ ನಿಷ್ಕ್ರಿಯ ಸುರಂಗಮಾರ್ಗ ನಿಲ್ದಾಣದಲ್ಲಿ ನಡೆದ ಐತಿಹಾಸಿಕ ಸಮಾರಂಭದಲ್ಲಿ, ಜೋಹ್ರಾನ್ ಮಮ್ದಾನಿ ನ್ಯೂಯಾರ್ಕ್ ನಗರದ ಹೊಸ ಮೇಯರ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಭಾರತೀಯ ಮೂಲದ ಡೆಮೋಕ್ರಾಟ್ ನಾಯಕ, ಅಮೆರಿಕದ ಅತಿದೊಡ್ಡ ನಗರದ ಮೊದಲ ಮುಸ್ಲಿಂ ಮೇಯರ್ ಆಗಿ ಅಧಿಕಾರ ಸ್ವೀಕರಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಕುರಾನ್ ಪ್ರತಿ ಮೇಲೆ ಕೈಇಟ್ಟು ಪ್ರಮಾಣವಚನ ಸ್ವೀಕರಿಸಿದ 34 ವರ್ಷದ ಜೋಹ್ರಾನ್ ಮಮ್ದಾನಿ ಅವರಿಗೆ, ನ್ಯೂಯಾರ್ಕ್ ಅಟಾರ್ನಿ ಜನರಲ್ ಲೆಟಿಟಿಯಾ ಜೇಮ್ಸ್ ಪ್ರಮಾಣವಚನ ಬೋಧಿಸಿದರು. ಮಮ್ದಾನಿ ನ್ಯೂಯಾರ್ಕ್‌ನ ಐತಿಹಾಸಿಕ ಸುರಂಗಮಾರ್ಗ ನಿಲ್ದಾಣಗಳ ಮೆಟ್ಟಿಗಳು ಮೇಲೆ ಪ್ರತಿಜ್ಞಾವಿಧಿ ಸ್ವೀಕರಿಸಿದ್ದು ವಿಶೇಷವಾಗಿತ್ತು. ಕಳೆದ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಮಮ್ದಾನಿ ನ್ಯೂಯಾರ್ಕ್ ಮೇಯರ್ ಆಗಿ ಆಯ್ಕೆಯಾಗಿದ್ದರು.



- **ನ್ಯೂಯಾರ್ಕ್‌ನಲ್ಲಿ ಮೊದಲ ಮುಸ್ಲಿಂ ಮೇಯರ್ ಆಳ್ವಿಕೆ ಆರಂಭ.**
- **ನ್ಯೂಯಾರ್ಕ್ ಮೇಯರ್ ಆಗಿ ಭಾರತೀಯ ಮೂಲದ ಜೋಹ್ರಾನ್ ಮಮ್ದಾನಿ ಪ್ರಮಾಣವಚನ ಸ್ವೀಕಾರ.**
- **ಜೀವಮಾನದ ಗೌರವ ಮತ್ತು ಸವಲತ್ತು ಎಂದ ನ್ಯೂಯಾರ್ಕ್ ಮೇಯರ್ ಜೋಹ್ರಾನ್ ಮಮ್ದಾನಿ.**

ಜೋಹ್ರಾನ್ ಮಮ್ದಾನಿ ಅವರು ತಮ್ಮ ಅಪಾರ ಸಂಖ್ಯೆಯ ಅಭಿಮಾನಿಗಳ ಜೊತೆ, ಸಿಟಿ ಹಾಲ್‌ನಲ್ಲಿ ಮಧ್ಯಾಹ್ನ 1 ಗಂಟೆಗೆ ನಡೆಯಲಿರುವ ಬೃಹತ್ ಸಾರ್ವಜನಿಕ ಸಮಾರಂಭದಲ್ಲಿ ಎರಡನೇ ಬಾರಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಯುಎಸ್ ಸೆನೆಟರ್ ಬರ್ನಿ ಸ್ಯಾಂಡರ್ಸ್ ಅವರು ಈ ಬಾರಿ ಮಮ್ದಾನಿ ಅವರಿಗೆ ಗೌಪ್ಯತಾವಿಧಿ ಬೋಧಿಸಲಿದ್ದಾರೆ.

**ಯಾರು ಮಮ್ದಾನಿ?:** 1991ರಲ್ಲಿ ಉಗಾಂಡಾದ ಕಂಪಾಲಾದಲ್ಲಿ ಜನಿಸಿದ ಜೋಹ್ರಾನ್ ಮಮ್ದಾನಿ, ಭಾರತೀಯ ಮೂಲದ ಖ್ಯಾತ ಚಲನಚಿತ್ರ ನಿರ್ಮಾಪಕಿ ಮೀರಾ ನಾಯರ್ ಮತ್ತು ವಿದ್ವಾಂಸ ಮಹಮೂದ್ ಮಮ್ದಾನಿ ದಂಪತಿಗಳ ಪುತ್ರ. ಜೋಹ್ರಾನ್ 7 ವರ್ಷದವರಾಗಿದ್ದಾಗ ಅವರ ಕುಟುಂಬ ನ್ಯೂಯಾರ್ಕ್ ನಗರಕ್ಕೆ ಸ್ಥಳಾಂತರಗೊಂಡಿತು. 2018ರಲ್ಲಿ ಜೋಹ್ರಾನ್ ಮಮ್ದಾನಿ ಅಮೇರಿಕನ್ ನಾಗರಿಕತ್ವ ಪಡೆದುಕೊಂಡರು.

## ನಾನ್ಯಾರನ್ನೂ ಕೊಂದಿಲ್ಲ, ಭಾರತದಲ್ಲೂ ಇಲ್ಲ; ದುಬೈನಿಂದ ಹಾದಿ ಕೊಲೆ ಆರೋಪಿ ವಿಡಿಯೋ

**ದುಬೈ:** ಬಾಂಗ್ಲಾದೇಶದ ವಿದ್ಯಾರ್ಥಿ ನಾಯಕ ಷರೀಫ್ ಉಸ್ಮಾನ್ ಹಾದಿ ಹತ್ಯೆ ಪ್ರಕರಣಕ್ಕೆ ಮಹತ್ವದ ತಿರುವು ಲಭಿಸಿದೆ. ಹಾದಿ ಕೊಲೆ ಆರೋಪ ಹೊತ್ತ ಫೈಸಲ್ ಕರೀಮ್ ಮಸೂದ್ ಎಂಬಾತ, ದುಬೈನಿಂದ ಕಳುಹಿಸಿದ ವಿಡಿಯೋ ಸಂದೇಶದಲ್ಲಿ ಹಾದಿ ಹತ್ಯೆಯಲ್ಲಿ ತನ್ನ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ. ಅಲ್ಲದೇ ತಾನು ಭಾರತದಲ್ಲಿ ಆಶ್ರಯ ಪಡೆದಿರುವುದಾಗಿ ಕೇಳಿಬಂದಿರುವ ಆರೋಪಗಳನ್ನೂ ಮಸೂದ್ ನಿರಾಕರಿಸಿದ್ದಾನೆ.

ಹೌದು, ಹಾದಿ ಹಂತಕ ಭಾರತದಲ್ಲಿದ್ದಾನೆ ಎಂದು ಸುಳ್ಳು ಆರೋಪ ಮಾಡಿದ್ದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ, ಇದೀಗ ಜಾಗತಿಕ ಮಟ್ಟದಲ್ಲಿ ತೀವ್ರ ಮುಜುಗರದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಹಾದಿ ಹತ್ಯೆಯ ಪ್ರಮುಖ ಆರೋಪಿ ಫೈಸಲ್ ಕರೀಮ್ ಮಸೂದ್, ತನ್ನ ವಿರುದ್ಧದ ಕೊಲೆ ಆರೋಪಗಳನ್ನು ನಿರಾಕರಿಸಿರುವುದಲ್ಲದೇ, ತಾನು ಭಾರತದಲ್ಲಿರದೇ ದುಬೈನಲ್ಲಿ ನೆಲೆಸಿರುವುದಾಗಿ ಸ್ಪಷ್ಟಪಡಿಸಿದ್ದಾನೆ.

ತನ್ನ ವಿಡಿಯೋ ಸಂದೇಶದಲ್ಲಿ ಹಾದಿ ಅವರ ಮೇಲೆ ನಡೆದ ಗುಂಡಿನ ದಾಳಿಗೂ ಮೊದಲು ಅವರ ಕಚೇರಿಗೆ ಹೋಗಿದ್ದನ್ನು ಒಪ್ಪಿಕೊಂಡಿರುವ ಫೈಸಲ್ ಮಸೂದ್, ಇಂಕ್ವಿಲಾಬ್ ಮಂಚ್‌ನ ವಕ್ತಾರನ ಜೊತೆ ತನ್ನ ಸಂಬಂಧ ಕೇವಲ ವ್ಯವಹಾರಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಸ್ಪಷ್ಟಪಡಿಸಿದ್ದಾನೆ. ನನಗೂ ಹಾದಿಗೂ ಯಾವುದೇ ರೀತಿಯ ರಾಜಕೀಯ ಸಂಬಂಧ ಇರಲಿಲ್ಲ. ನಮ್ಮ ನಡುವೆ ವ್ಯಾವಹಾರಿಕ ಸಂಬಂಧವಿತ್ತು ಎಂದು ಮಸೂದ್ ವಿಡಿಯೋದಲ್ಲಿ ಹೇಳಿದ್ದಾನೆ.

**ವೈರಲ್ ವಿಡಿಯೋ:** ನಾನು ಫೈಸಲ್ ಕರೀಮ್ ಮಸೂದ್. ಹಾದಿ ಹತ್ಯೆಯಲ್ಲಿ ನಾನು ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲ



ಎಂದು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಈ ಪ್ರಕರಣವು ಸಂಪೂರ್ಣವಾಗಿ ಸುಳ್ಳು ಮತ್ತು ಕಟ್ಟುಕಥೆಯ ಪಿತೂರಿಯನ್ನು ಆಧರಿಸಿದೆ. ಈ ಸುಳ್ಳು ಆರೋಪದಿಂದಾಗಿ ನಾನು ಅನಿವಾರ್ಯವಾಗಿ ಬಾಂಗ್ಲಾದೇಶ ಬಿಟ್ಟು ದುಬೈನಲ್ಲಿ ನೆಲೆಸಬೇಕಾಯಿತು. ನಾನು ಭಾರತದಲ್ಲಿ ಆಶ್ರಯ ಪಡೆದಿದ್ದೇನೆ ಎಂಬ ಆರೋಪಗಳು ಸತ್ಯಕ್ಕೆ ದೂರವಾದವು ಎಂದು ಫೈಸಲ್ ಕರೀಮ್ ಮಸೂದ್ ತನ್ನ ವಿಡಿಯೋ ಸಂದೇಶದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

ಹಾದಿ ಕೊಲೆಯಲ್ಲಿ ನನ್ನನ್ನು ವಿನಾಕಾರಣ ಎಳೆದು ತರಲಾಗಿದೆ. ನನ್ನ ಕುಟುಂಬದವರಿಗೂ ಕಿರುಕುಳ ನೀಡಲಾಗುತ್ತಿದೆ. ನಾನು ಭಾರತದಲ್ಲಿದ್ದೇನೆ ಎಂಬ ಪೊಲೀಸರ ಆರೋಪಗಳು ಶುದ್ಧ ಸುಳ್ಳು. ನಾನು ದುಬೈನಿಂದ ವಿಡಿಯೋ ಮಾಡುತ್ತಿದ್ದೇನೆ. ನನ್ನ ಕುಟುಂಬದ ಮೇಲೆ ಈ ರೀತಿಯ ಅಮಾನವೀಯ ವರ್ತನೆ ಅನ್ಯಾಯ ಮತ್ತು ಸ್ವೀಕಾರಾರ್ಹವಲ್ಲ, ಮತ್ತು ನಾನು ಇದನ್ನು ಬಲವಾಗಿ ಪ್ರತಿಭಟಿಸುತ್ತೇನೆ ಎಂದು ಹಾದಿ ಹತ್ಯೆಯ ಪ್ರಮುಖ ಆರೋಪಿ ಹರಿಹಾಯ್ದಿದ್ದಾನೆ.

## ಮಿನಿ ನ್ಯೂಸ್

### ವಾಣಿಜ್ಯ ಎಲ್‌ಪಿಜಿ ದರ ಸಿಲಿಂಡರ್‌ಗೆ 111ರೂ. ಏರಿಕೆ

**ನವದೆಹಲಿ:** ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು ಜಾಗತಿಕ ಇಂಧನ ಮಾನದಂಡಗಳಿಗೆ ಅನುಗುಣವಾಗಿ ವಿಮಾನಕ್ಕೆ ಬಳಸುವ ಇಂಧನದ ಬೆಲೆಯನ್ನು ಶೇ. 7.3 ರಷ್ಟು ಕಡಿಮೆ ಮಾಡಲಾಗಿದ್ದು, ವಾಣಿಜ್ಯ ಎಲ್‌ಪಿಜಿ ದರವನ್ನು ಸಿಲಿಂಡರ್‌ಗೆ ರೂ. 111 ರಷ್ಟು ಹೆಚ್ಚಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ಇಂಧನ ಚಿಲ್ಲರೆ ವ್ಯಾಪಾರಿಗಳ ಪ್ರಕಾರ, ದೆಹಲಿಯಲ್ಲಿ ಎಟಿಎಫ್ ಬೆಲೆಯನ್ನು ಪ್ರತಿ ಕಿಲೋಲೀಟರ್‌ಗೆ ರೂ. 7,353.75 ರಷ್ಟು ಅಥವಾ ಶೇ. 7.3 ರಷ್ಟು ಕಡಿತಗೊಳಿಸಿ ಇದರಿಂದ ಪ್ರತಿ ಕಿಲೋಲೀಟರ್‌ಗೆ ರೂ. 92,323.02ಕ್ಕೆ ತಲುಪಿದೆ. ಘೋಷಿಸಲಾದ ಕಡಿತವು ಅ.1 ರಿಂದ ಏರಿಕೆ ನಂತರ ಈಗ ಬೆಲೆ ಕಡಿತಗೊಂಡಿದೆ. ಇತ್ತೀಚಿನ ಕಡಿತವು ವಿಮಾನಯಾನ ಸಂಸ್ಥೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ, ಇದಕ್ಕಾಗಿ ಇಂಧನವು ನಿರ್ವಹಣಾ ವೆಚ್ಚದ ಸುಮಾರು 40 ಪ್ರತಿಶತವನ್ನು ಹೊಂದಿದೆ. ಇದರ ಜೊತೆಗೆ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಬಳಸುವ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 111 ರೂ.ಗಳಷ್ಟು ಹೆಚ್ಚಿಸಲಾಗಿದೆ.ಮಾಸಿಕ ಎರಡು ಕಳೆದ 2 ಬಾರಿ ಕಡಿತದ ನಂತರ ಈಗ ಬೆಲೆ ಏರಿಕೆಯಾಗಿದೆ. ಕಳೆದ ವರ್ಷ ಜೂನ್‌ಗೆ ಹೋಲಿಸಿದರೆ ವಾಣಿಜ್ಯ ಎಲ್‌ಪಿಜಿ ಬೆಲೆಗಳು ಈಗ ಬೆಲೆ ಏರಿಕೆಯಾಗಿದೆ. ಅಡುಗೆಗಾಗಿ ಬಳಸುವ ದೇಶೀಯ ಎಲ್‌ಪಿಜಿಯ ಬೆಲೆಗಳು 14.2 ಕೆಜಿ ಸಿಲಿಂಡರ್‌ಗೆ 853 ರೂ.ಗಳಲ್ಲಿ ಬದಲಾಗದೆ ಉಳಿದಿವೆ.

### ನೆದರ್‌ಲ್ಯಾಂಡ್ ಚರ್ಚ್‌ಗೆ ಬೆಂಕಿ

**ಆಮ್ಸ್ಟರ್‌ಡ್ಯಾಮ್:** ಹೊಸ ವರ್ಷದ ಸಂಭ್ರಮಾಚರಣೆ ವೇಳೆ ನೆದರ್‌ಲ್ಯಾಂಡ್ ಆಮ್ಸ್ಟರ್‌ಡ್ಯಾಮ್‌ನ 150 ವರ್ಷಗಳ ಹಳೆಯ ವೊಂಡೆಲ್‌ಕೆರ್ಕ್ ಚರ್ಚ್‌ನಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಈ ಕುರಿತು ಆಮ್ಸ್ಟರ್‌ಡ್ಯಾಮ್ ಅಧಿಕಾರಿಗಳು ಮಾಹಿತಿ ನೀಡಿದ್ದು, ಹೊಸ ವರ್ಷದ ಸಂಭ್ರಮಾಚರಣೆ ವೇಳೆ ವೊಂಡೆಲ್‌ಕೆರ್ಕ್ ಚರ್ಚ್‌ಗೆ ಬೆಂಕಿ ಹೊತ್ತಿಕೊಂಡಿದೆ. ಸ್ಥಳೀಯ ಕಾಲಮಾನ ರಾತ್ರಿ 12:45ರ ಸುಮಾರಿಗೆ ತುರ್ತು ಕರೆಗಳು ಬಂದಿದ್ದು, ಕೂಡಲೇ ಸ್ಥಳದಲ್ಲಿ ಜನರನ್ನು ಸ್ಥಳಾಂತರಿಸಿ, ಆಮ್ಸ್ಟರ್‌ಡ್ಯಾಮ್‌ನಲ್ಲಿ ಎಚ್ಚರಿಕೆ ನೀಡಲಾಯಿತು. ಚರ್ಚ್ನ 164 ಅಡಿ ಗೋಪುರ ಕುಸಿದಿದ್ದು, ಛಾವಣಿ ಹಾನಿಗೊಳಗಾಗಿದೆ. ಇನ್ನೂ ಸಮೀಪದ 90 ಮನೆಗಳ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಸಂಭ್ರಮಾಚರಣೆ ವೇಳೆ ಸಿಡಿಸಿದ ಪಟಾಕಿಯಿಂದಾಗಿ ಬೆಂಕಿ ಹೊತ್ತಿಕೊಂಡಿದೆ ಎನ್ನಲಾಗಿದ್ದು, ನಿಖರ ಕಾರಣ ತಿಳಿದುಬಂದಿಲ್ಲ ಎಂದು ತಿಳಿಸಿದ್ದಾರೆ.

ಇನ್ನೂ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಿಯಂತ್ರಿಸಲು ಹರಸಾಹಸಪಟ್ಟರೂ ಕೂಡ ಚರ್ಚ್‌ನ ಗೋಪುರ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಚರ್ಚ್ನ್ನು ರಕ್ಷಿಸುವುದು ಕಷ್ಟಸಾಧ್ಯ. ಶೀಘ್ರದಲ್ಲೇ ಇಡೀ ಚರ್ಚ್ ಕುಸಿಯಬಹುದು ಎಂದು ವಕ್ತಾರರೊಬ್ಬರು ಎಚ್ಚರಿಕೆ ನೀಡಿದ್ದು, ಕಾರ್ಯಾಚರಣೆ ಮುಂದುವರಿದಿದೆ.

### ಪೊಲೀಸ್ ಸ್ಟೇಷನ್ ಬಳಿ ಭಾರೀ ಸ್ಫೋಟ

**ಶಿಮ್ಲಾ:** ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯ ನಲಗಢದ ಪೊಲೀಸ್ ಠಾಣೆ ಬಳಿ ಭಾರೀ ಸ್ಫೋಟ ಸಂಭವಿಸಿದೆ. ಇಲ್ಲಿಯವರೆಗೆ ಯಾವುದೇ ಸಾವುನೋವುಗಳು ವರದಿಯಾಗಿಲ್ಲ ಮತ್ತು ಸ್ಫೋಟದ ಕಾರಣವನ್ನು ಗುರುತಿಸಲು ತನಿಖೆ ಆರಂಭಿಸಲಾಗಿದೆ ಎಂದು ಪಿಟಿಐ ವರದಿ ಮಾಡಿದೆ. ನಲಗಢ ಪೊಲೀಸ್ ಠಾಣೆ ಬಳಿಯ ಲೇನ್‌ನಲ್ಲಿ ಸಂಭವಿಸಿದ ಸ್ಫೋಟದ ಪರಿಣಾಮವು ಎಷ್ಟು ಬಲವಾಗಿತ್ತು ಎಂದರೆ ಈ ಸ್ಥಳದಿಂದ ನೂರಾರು ಮೀಟರ್ ದೂರದಲ್ಲಿರುವ ಸೇನಾ ಕ್ಯಾಂಟೀನ್ ಸೇರಿದಂತೆ ಹತ್ತಿರದ ಕಟ್ಟಡಗಳ ಕಿಟಕಿಗಳು ಬಿರುಕು ಬಿಟ್ಟಿವೆ.

### ಮನೆಯೊಳಗೆ ಗುಂಡಿಕ್ಕಿ ಆಭರಣ ವ್ಯಾಪಾರಿ ಮತ್ತವರ ಪತ್ನಿಯ ಹತ್ಯೆ

**ಮಧ್ಯಪ್ರದೇಶ:** ಆಭರಣ ವ್ಯಾಪಾರಿ ಮತ್ತವರ ಪತ್ನಿ ಮನೆಯೊಳಗೆ ಶವವಾಗಿ ಪತ್ತೆಯಾಗಿರುವ ಘಟನೆ ಮಂಗಳವಾರ ಮಧ್ಯಪ್ರದೇಶದ ಮಂದ್ಸೌರ್‌ನಲ್ಲಿ ನಡೆದಿದೆ. ಪ್ರಾಥಮಿಕ ತನಿಖೆಯಲ್ಲಿ ಅವರ ವ್ಯವಹಾರದ ವಿವಾದವೇ ಈ ಸಾವಿಗೆ ಕಾರಣ ಎನ್ನಲಾಗಿದೆ. ಇಬ್ಬರನ್ನೂ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಅದೇ ಸ್ಥಳದಲ್ಲಿ ವಿಕಾಸ್ ಎಂಬುವವರ ಶವವೂ ದೊರೆತಿದೆ. ಪೊಲೀಸರು ಸಾವಿಗೆ ಕಾರಣವೇನೆಂಬುದ ತಿಳಿಯಲು ಪ್ರಯತ್ನಿಸುತ್ತಿದ್ದಾರೆ. ಮೃತ ದಂಪತಿಯನ್ನು ದಿಲೀಪ್ ಜೈನ್ ಮತ್ತು ಅವರ ಪತ್ನಿ ರೇಖಾ ಎಂದು ಗುರುತಿಸಲಾಗಿದ್ದು, ಮೂರನೇ ವ್ಯಕ್ತಿಯನ್ನು ರಾಜಸ್ಥಾನದ ನಿವಾಸಿ ವಿಕಾಸ್ ಸೋನಿ ಎಂದು ಪೊಲೀಸರು ಗುರುತಿಸಿದ್ದಾರೆ. ಗುಂಡಿನ ದಾಳಿ ನಡೆಯುವ ಮುನ್ನ ಮೂವರು ವ್ಯಕ್ತಿಗಳ ನಡುವೆ ತೀವ್ರ ವಾಗ್ವಾದ ನಡೆದಿದೆ ಎಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಮಂಗಳವಾರ ಸಂಜೆ 8.30 ರ ಸುಮಾರಿಗೆ ಮನೆಯೊಳಗೆ ಗುಂಡು ಹಾರಿಸಿದ ಸದ್ದು ಕೇಳಿಬಂದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವಿನೋದ್ ಕುಮಾರ್ ಮೀನಾ ತಿಳಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಪೊಲೀಸರು ಶವಗಳನ್ನು ಪತ್ತೆ ಮಾಡಿದರು ಮತ್ತು ಒಂದು ಪಿಸ್ತೂಲ್ ಮತ್ತು ಚಾಕುವನ್ನು ವಶಪಡಿಸಿಕೊಂಡರು. ಸಾವಿಗೆ ನಿಖರವಾದ ಕಾರಣವನ್ನು ತಿಳಿಯಲು ಮತ್ತು ಘಟನೆಗಳ ಅನುಕ್ರಮವನ್ನು ನಿರ್ಧರಿಸಲು ಮೂರು ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.


# ಶಾಂತಿ ಮಾತುಕತೆ ಬೆನ್ನಲ್ಲೇ, ಪುಟಿನ್ ನಿವಾಸದ ಮೇಲೆ ಉಕ್ರೇನ್ ಡ್ರೋನ್ ದಾಳಿ

### ಉಕ್ರೇನ್ ಡ್ರೋನ್‌ಗಳ ಮೂಲಕ ದಾಳಿ ಮಾಡಿದ್ದು, ರಷ್ಯಾ ಮತ್ತು ಕ್ರೈಮಿಯಾದ ಹಲವಾರು ಭಾಗಗಳಿಗೆ ಅಪ್ಪಳಿಸಿದೆ ಎಂದು ರಷ್ಯಾ ಆರೋಪಿಸಿದೆ

**ಮಾಸ್ಕೋ:** ರಷ್ಯಾ ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಲು ಅಮೆರಿಕಾ ಶಾಂತಿ ಮಾತುಕತೆ ನಡೆಸಿರುವ ನಡುವೆ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಿವಾಸದ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದು ಶಾಂತಿ ಮಾತುಕತೆಗೆ ಅಡ್ಡಿಯಾಗುವ ಲಕ್ಷಣಗಳು ಗೋಚರಿಸಿವೆ. ಉಕ್ರೇನ್ ಡ್ರೋನ್‌ಗಳ ಮೂಲಕ ದಾಳಿ ಮಾಡಿದ್ದು, ರಷ್ಯಾ ಮತ್ತು ಕ್ರೈಮಿಯಾದ ಹಲವಾರು ಭಾಗಗಳಿಗೆ ಅಪ್ಪಳಿಸಿದೆ ಎಂದು ರಷ್ಯಾ ಆರೋಪಿಸಿತ್ತು, ಇದರ ಬೆನ್ನಲ್ಲೇ, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿವಾಸದ ಮೇಲೆ ಉಕ್ರೇನ್ ಪದೇ ಪದೇ ದಾಳಿ ನಡೆಸಿದೆ ಎನ್ನಲಾದ ವಿಡಿಯೋ ಬಿಡುಗಡೆ ಮಾಡಿದೆ.

ಕ್ರೆಮ್ಲಿನ್ ಬಿಡುಗಡೆ ಮಾಡಿದ ಮತ್ತೊಂದು ವಿಡಿಯೋದಲ್ಲಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿವಾಸದ ಮೇಲಿನ ದಾಳಿಯಲ್ಲಿ ಬಳಸಲಾದ ಮತ್ತು ರಷ್ಯಾ ಹೊಡೆದು ಉರುಳಿಸಿರುವ ಡ್ರೋನ್ ಒಂದು 6 ಕೆ.ಜಿ ಸ್ಫೋಟಕ ಹೊತ್ತಿರುವುದನ್ನು ತೋರಿಸಲಾಗಿದೆ. ಇದರಿಂದ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಹೊಸ ವರ್ಷದ ಮುನ್ನಾ ದಿನದಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿವಾಸದ ಮೇಲೆ ನಡೆದ ದಾಳಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸಹ ಕಳವಳ ವ್ಯಕ್ತಪಡಿಸಿದ್ದರು. ಈ ಪ್ರದೇಶದಲ್ಲಿ ಶಾಂತಿ ನೆಲೆಸಲು ನಡೆಯುತ್ತಿರುವ ಪ್ರಯತ್ನಗಳ ಮೇಲೆ ಎಲ್ಲರೂ ಗಮನಹರಿಸಬೇಕೆಂದು ಒತ್ತಾಯಿಸಿದ್ದರು.



**ಮೋದಿ ಕಳವಳ**

**ಈ ಮಧ್ಯೆ, ಮೋದಿ ಮತ್ತು ಇತರ ದೇಶಗಳ ನಾಯಕರು ವ್ಯಕ್ತಪಡಿಸಿದ ಕಳವಳ ಕುರಿತಂತೆ ಪ್ರತಿಕ್ರಿಯಿಸಿರುವ ಉಕ್ರೇನ್, ರಷ್ಯಾ ಆರೋಪ ಸುಳ್ಳು ಮತ್ತು ಆಧಾರರಹಿತ ಎಂದಿದೆ. ರಷ್ಯಾ ಅಧ್ಯಕ್ಷರ ನಿವಾಸದ ಮೇಲೆ ಉಕ್ರೇನ್‌ನಿಂದ ಯಾವುದೇ ದಾಳಿ ನಡೆದಿಲ್ಲ. ದಾಳಿ ಕುರಿತ ರಷ್ಯಾ ಹೇಳಿಕೆ ಸುಳ್ಳು. ಈ ಕುರಿತಂತೆ ರಷ್ಯಾ ಯಾವುದೇ ವಸ್ತುನಿಷ್ಠ ಪುರಾವೆ ನೀಡಿಲ್ಲ ಎಂದು ರಷ್ಯಾದ ವಿದೇಶಾಂಗ ಸಚಿವ ಆಂಡ್ರಿಯಲ್ ಸಿಬಿಹಾ ಹೇಳಿದ್ದಾರೆ.**

### ಅಲ್ಲಗಳೆದ ಯುರೋಪ್ ಒಕ್ಕೂಟ

**ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಖಾಸಗಿ ನಿವಾಸ ಸೇರಿದಂತೆ ರಷ್ಯಾದ ಸರ್ಕಾರಿ ತಾಣಗಳ ಮೇಲೆ ಉಕ್ರೇನ್ ದಾಳಿ ನಡೆಸಿದೆ ಎನ್ನುವ ರಷ್ಯಾದ ಹೇಳಿಕೆಯನ್ನು ಯುರೋಪಿಯನ್ ಒಕ್ಕೂಟದ ಉನ್ನತ ರಾಜತಾಂತ್ರಿಕ ಅಧಿಕಾರಿ ಕಾಜಾ ಕಲ್ಲಾಸ್ ನಿರಾಕರಿಸಿದ್ದಾರೆ. ಉಕ್ರೇನ್ ರಷ್ಯಾದ ಸರ್ಕಾರಿ ತಾಣಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎನ್ನುವ ಅರ್ಥವಿಲ್ಲದ ಆರೋಪವನ್ನು ರಷ್ಯಾ ಮಾಡುತ್ತಿದೆ. ಈ ರೀತಿ ಹೇಳಿಕೆ ನೀಡುವ ಮೂಲಕ ಶಾಂತಿ ಒಪ್ಪಂದವನ್ನು ಹಳಿ ತಪ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ ಇದು ಸರಿಯಲ್ಲ ಎಂದು ಹೇಳಿದ್ದಾರೆ.**

ರಷ್ಯಾದ ಅಧ್ಯಕ್ಷರ ನಿವಾಸವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವ ವರದಿಗಳನ್ನು ಕೇಳಿ ತೀವ್ರ ಕಳವಳಗೊಂಡಿದ್ದೇನೆ. ನಡೆಯುತ್ತಿರುವ ರಾಜತಾಂತ್ರಿಕ ಪ್ರಯತ್ನಗಳು ಯುದ್ಧವನ್ನು ಕೊನೆಗೊಳಿಸಲು ಮತ್ತು ಶಾಂತಿಯನ್ನು ಸಾಧಿಸಲು ಅತ್ಯಂತ ಕಾರ್ಯಸಾಧ್ಯವಾದ ಮಾರ್ಗವನ್ನು ನೀಡುತ್ತವೆ. ಈ ಪ್ರಯತ್ನಗಳ ಮೇಲೆ ಗಮನಹರಿಸಲು ಮತ್ತು ಅವುಗಳನ್ನು ದುರ್ಬಲಗೊಳಿಸುವ ಯಾವುದೇ ಕ್ರಮಗಳನ್ನು ತಪ್ಪಿಸಲು ನಾವು ಸಂಬಂಧಪಟ್ಟ ಎಲ್ಲರನ್ನೂ ಒತ್ತಾಯಿಸುತ್ತೇವೆ ಎಂದು ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಕಾಜಾ ಕಲ್ಲಾಸ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ನಿವಾಸದ ಮೇಲೆ ಉಕ್ರೇನ್ ದಾಳಿ ನಡೆಸಿದೆ ಎನ್ನುವ ಆರೋಪ ಸತ್ಯಕ್ಕೆ ದೂರವಾದುದು, ಈ ರೀತಿಯ ಹೇಳಿಕೆಗಳು ಉಭಯ ದೇಶಗಳ ನಡುವೆ ಗೊಂದಲ ಮೂಡಿಸುತ್ತವೆ ಎಂದಿದ್ದಾರೆ.

**ಪದೇ ಪದೇ ದಾಳಿ**

ಉಕ್ರೇನ್‌ನ ಮೂಲಸೌಕರ್ಯ ಮತ್ತು ನಾಗರಿಕರನ್ನು ವಿವೇಚನೆಯಿಲ್ಲದೆ ಗುರಿಯಾಗಿಸಿಕೊಂಡಿರುವ ಆಕ್ರಮಣಕಾರರಿಂದ ಯಾರೂ ಆಧಾರರಹಿತ ಹಕ್ಕುಗಳನ್ನು ಸ್ವೀಕರಿಸಬಾರದು'' ಎಂದು ರಷ್ಯಾಗೆ ತಿರುಗೇಟು ನೀಡಿದ್ದಾರೆ. ಈ ವಾರದ ಆರಂಭದಲ್ಲಿ ರಷ್ಯಾ ವಾಯುವ್ಯ ರಷ್ಯಾದ ವಾಲ್ಡೈ ಸರೋವರದಲ್ಲಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಖಾಸಗಿ ಮನೆಯನ್ನು ಗುರಿಯಾಗಿಸಿಕೊಂಡು ಉಕ್ರೇನ್ ದಾಳಿ ನಡೆಸಲಾಗಿದೆ ಎನ್ನುವ ಆರೋಪ ಮಾಡಿದೆ. ರಷ್ಯಾ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರು ಮೊದಲು ಹಕ್ಕುಗಳನ್ನು ಹಂಚಿಕೊಂಡಾಗಿನಿಂದ, ರಷ್ಯಾದ ರಾಜ್ಯ ಮಾಧ್ಯಮಗಳು ಮತ್ತು ರಾಜಕಾರಣಿಗಳು ಆಪಾದಿತ ದಾಳಿಯ ಬಗ್ಗೆ ಚರ್ಚೆ ನಡೆಸಿದ್ದಾರೆ. ಉಕ್ರೇನ್ ಸೇನಾ ಪಡೆ ರಷ್ಯಾದ ಹೃದಯಭಾಗದ ಮೇಲೆ ನಡೆದ ದಾಳಿಯಾಗಿದೆ ಎಂದು ರಷ್ಯಾದ ಸಂಸತ್ತಿನ ರಕ್ಷಣಾ ಸಮಿತಿಯ ಮುಖ್ಯಸ್ಥ ಆಂಡ್ರೇ ಕಾರ್ಟಪೊಲೊವ್ ಹೇಳಿದ್ದು ಉಕ್ರೇನ್ ನಡೆಯನ್ನು ಯಾವುದೇ ಕಾರಣಕ್ಕೂ ಸಹಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ. ಆಪಾದಿತ ದಾಳಿಯ ಪುರಾವೆಗಳನ್ನು ಹಂಚಿಕೊಳ್ಳುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಕ್ರೆಮ್ಲಿನ್ ಆರಂಭದಲ್ಲಿ ಹೇಳಿದ್ದರೂ, ರಷ್ಯಾದ ಸೇನೆ ದಾಳಿಯ ಪ್ರಯತ್ನದ ಪುರಾವೆ ಎಂದು ಹೇಳಿದ್ದನ್ನೇ ಬಿಡುಗಡೆ ಮಾಡಿದೆ ಎಂದಿದ್ದಾರೆ.

ಮಾಸ್ಕೋ ಮತ್ತು ಸೇಂಟ್ ಪೀಟರ್ಸ್‌ಬರ್ಗ್ ನಡುವೆ ಇರುವ ನವ್‌ಗೊರೊಡ್ ಪ್ರದೇಶದಲ್ಲಿನ ಪುಟಿನ್ ಅವರ ನಿವಾಸವನ್ನು ಗುರಿಯಾಗಿಸಿಕೊಂಡು 91 ಡ್ರೋನ್‌ಗಳನ್ನು ಬಳಸಿ ಉಕ್ರೇನ್ ದಾಳಿ ನಡೆಸಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ ದೂಷಿಸಿದ್ದರು. ಅಲ್ಲದೆ, ವಾಯು ರಕ್ಷಣಾ ವ್ಯವಸ್ಥೆಯಿಂದ ಅವುಗಳನ್ನು ತಡೆಹಿಡಿಯಲಾಗಿದೆ ಎಂದೂ ಹೇಳಿದ್ದರು.

# ಸ್ಪಿರಿಟ್ ಚಿತ್ರಕ್ಕಾಗಿ ಪ್ರಭಾಸ್ ಶರ್ಟ್‌ಲೆಸ್

ಪ್ರಭಾಸ್ 'ರಾಜಾ ಸಾಬ್' ಹಾರರ್ ಕಾಮಿಡಿ ಚಿತ್ರಕ್ಕೆ ಸಿದ್ಧವಾಗಿದ್ದು, ಮಾರುತಿ ನಿರ್ದೇಶನದ ಈ ಚಿತ್ರ ಸಂಕ್ರಾಂತಿಗೆ ತೆರೆಗೆ ಬರಲಿದೆ. ಇದೇ ವೇಳೆ, ಸಂದೀಪ್ ರೆಡ್ಡಿ ವಂಗ ನಿರ್ದೇಶನದ 'ಸ್ಪಿರಿಟ್' ಚಿತ್ರದ ಹೊಸ ಪೋಸ್ಟರ್ ವೈರಲ್ ಆಗಿದೆ. ಈ ಪೋಸ್ಟರ್‌ನಲ್ಲಿ ಪ್ರಭಾಸ್‌ನ ಪೊಲೀಸ್ ಲುಕ್, ತೃಪ್ತಿ ಡಿಮ್ರಿ ಜೊತೆಗಿನ ಕಾಂಬಿನೇಷನ್ ಗಮನ ಸೆಳೆದಿದೆ. ಪ್ಯಾನ್ ಇಂಡಿಯಾ ಸ್ಟಾರ್ ಪ್ರಭಾಸ್ ನಾಯಕನಾಗಿ ನಟಿಸಿರುವ 'ರಾಜಾ ಸಾಬ್' ಟ್ರೇಲರ್ ಮೂಲಕ ಗಮನ ಸೆಳೆದಿದೆ. ಮಾರುತಿ ನಿರ್ದೇಶನದ ಈ ಚಿತ್ರದ ಮೇಲೆ ಸಾಕಷ್ಟು ನಿರೀಕ್ಷೆ ಮೂಡಿದೆ. ಈ ಚಿತ್ರ ಹಾರರ್ ಕಾಮಿಡಿ ಹಿನ್ನೆಲೆಯಲ್ಲಿ ಸಿದ್ಧವಾಗಿದೆ. ಈ ಚಿತ್ರ ಸಂಕ್ರಾತಿ ಸಂದರ್ಭದಲ್ಲಿ ತೆರೆಗೆ ಬರುತ್ತಿದೆ. ಈ ವೇಳೆ ಪ್ರಭಾಸ್ ನಟನೆಯ ಮುಂದಿನ ಸಿನಿಮಾ 'ಸ್ಪಿರಿಟ್' ಲುಕ್ ವೈರಲ್ ಆಗಿದೆ. ಈ ಪೋಸ್ಟರ್ ಸಂಚಲನ ಸೃಷ್ಟಿಸಿದೆ. ರಾ ಸಿನಿಮಾಗಳನ್ನು ಮಾಡೋ ಕಲೆ ಸಂದೀಪ್ ರೆಡ್ಡಿ ವಂಗಗೆ ಒಲಿದಿದೆ. 'ಅರ್ಜುನ್ ರೆಡ್ಡಿ', 'ಅನಿಮಲ್' ಸಿನಿಮಾಗಳಲ್ಲಿ ಇದೇ ಹೈಲೈಟ್ ಆಗಿತ್ತು. ಅವರು ಪ್ರಭಾಸ್ ಜೊತೆ ಸಿನಿಮಾ ಮಾಡುತ್ತಿದ್ದಾರೆ ಎಂದಾಗ ಸಹಜವಾಗಿಯೇ ಕುತೂಹಲ ಹೆಚ್ಚಿತ್ತು. ಈ ಚಿತ್ರದಲ್ಲಿ ಪ್ರಭಾಸ್ ಅವರದ್ದು ಪೊಲೀಸ್ ಪಾತ್ರ. ಹೊಸ ವರ್ಷದ ಪ್ರಯುಕ್ತ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ಈ ಪೋಸ್ಟರ್‌ನಲ್ಲಿ ಪ್ರಭಾಸ್ ಶರ್ಟ್‌ಲೆಸ್ ಆಗಿ ಕಾಣಿಸಿದ್ದಾರೆ. ಅವರ ಬೆನ್ನು, ಕೈ ಹಾಗೂ ಭುಜಕ್ಕೆ ಬ್ಯಾಂಡೇಜ್ ಹಾಕಲಾಗಿದೆ. ಪ್ರಭಾಸ್ ಬಾಯಲ್ಲಿರೋ ಸಿಗರೇಟ್‌ಗೆ ನಟಿ ತೃಪ್ತಿ ದಿಮ್ರಿ ಬೆಂಕಿ ಅಂಟಿಸುತ್ತಿದ್ದಾರೆ.



ಸಖತ್ ರಾ ಆಗಿದೆ ಪೋಸ್ಟರ್

ಪ್ರಭಾಸ್ ಉದ್ದನೆಯ ಕೂದಲು ಗಮನ ಸೆಳೆಯುತ್ತಿದೆ. ಈ ಸಿನಿಮಾ ತೆಲುಗು ಜೊತೆಗೆ ಕನ್ನಡ, ತಮಿಳು, ಮಲಯಾಳಂ ಸೇರಿದಂತೆ ಹಲವು ಭಾಷೆಗಳಲ್ಲಿ ರಿಲೀಸ್ ಆಗುತ್ತಿದೆ.

ನಿರ್ದೇಶಕ ಸಂದೀಪ್ ರೆಡ್ಡಿ ವಂಗ ನಿರ್ದೇಶನ ಮಾಡಿದ್ದು ಕೆಲವೇ ಸಿನಿಮಾ ಆದರೂ ಸ್ಟಾರ್ ನಿರ್ದೇಶಕ ಎನಿಸಿಕೊಂಡಿದ್ದಾರೆ. ಅವರು ಈ ಚಿತ್ರದ ಮೂಲಕ ಮತ್ತಷ್ಟು ಜನಪ್ರಿಯತೆ ಪಡೆಯುವ ಭರವಸೆಯಲ್ಲಿದ್ದಾರೆ. ರಣಬೀರ್ ಕಪೂರ್ ಜೊತೆಗಿನ 'ಅನಿಮಲ್' ಚಿತ್ರಕ್ಕೆ ತೃಪ್ತಿ ಕೂಡ ನಾಯಕಿ ಆಗಿದ್ದರು. ಅವರು ಆ ಸಿನಿಮಾದಲ್ಲಿ ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದರು.

# ಮತ್ತೆ ಬರಲಿದೆ ದಿ ಕೇರಳ ಸ್ಟೋರಿ



'ದಿ ಕೇರಳ ಸ್ಟೋರಿ 2' ಚಿತ್ರೀಕರಣ ಮುಗಿದಿದ್ದು, 2026ರಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ. 'ಲವ್ ಜಿಹಾದ್' ಕುರಿತ ಈ ಮುಂದುವರಿದ ಭಾಗವು ಹೆಚ್ಚು ಗಂಭೀರ ಹಾಗೂ ಕರಾಳ ಕಥೆಯನ್ನು ಹೊಂದಿದೆ. ಚಿತ್ರೀಕರಣದ ವೇಳೆ ಸಂಪೂರ್ಣ ಗುಪ್ತತೆ ಕಾಪಾಡಲಾಗಿತ್ತು. ಸೆಟ್‌ನಿಂದ ಯಾವುದೇ ಮಾಹಿತಿ ಸೋರಿಕೆಯಾಗದಂತೆ ವಿಶೇಷ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಬಾಲಿವುಡ್‌ನಲ್ಲಿ ಹಲವು ಸಿನಿಮಾಗಳು ವಿವಾದ ಸೃಷ್ಟಿಸಿವೆ. ಹಲವು ಸ್ಥಳಗಳಲ್ಲಿ ಸಿನಿಮಾಗಳನ್ನು ನಿಷೇಧಿಸಲಾಗಿದೆ. ಅಂತಹ ಒಂದು ಸಿನಿಮಾ 'ದಿ ಕೇರಳ ಸ್ಟೋರಿ'. ಈ ಸಿನಿಮಾದಿಂದ ಒಂದು ಭಯಾನಕ ವಾಸ್ತವ ಬೆಳಕಿಗೆ ಬಂದಿತ್ತು. 2023ರಲ್ಲಿ ಬಿಡುಗಡೆಯಾದ ಸಿನಿಮಾ 'ಲವ್ ಜಿಹಾದ್' ವಿಷಯವನ್ನು ಆಧರಿಸಿದೆ. ಇದು ಹಲವು ಕಡೆಗಳಲ್ಲಿ ಬ್ಯಾನ್ ಆಯಿತು. ಸಿನಿಮಾ ವಿವಾದದಲ್ಲಿ ಸಿಲುಕಿದ್ದರೂ, ಸಿನಿಮಾ ಸಾಕಷ್ಟು ಹಣ ಗಳಿಸಿತು. ಸುದೀಪ್ತೋ ಸೇನ್ ನಿರ್ದೇಶನದ ಈ ಸಿನಿಮಾದಲ್ಲಿ ಅದಾ ಶರ್ಮಾ ಪ್ರಮುಖ ಪಾತ್ರ ವಹಿಸಿದ್ದಾರೆ. ಈಗ ಸೀಕ್ವೆಲ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. 'ದಿ ಕೇರಳ ಸ್ಟೋರಿ' ಚಿತ್ರದ ಮುಂದುವರಿದ ಭಾಗದ ಚಿತ್ರೀಕರಣ ಕೂಡ ಪೂರ್ಣಗೊಂಡಿದೆ. ಈಗ ಅಭಿಮಾನಿಗಳು 'ದಿ ಕೇರಳ ಸ್ಟೋರಿ 2' ಚಿತ್ರಕ್ಕಾಗಿ ಕಾಯುತ್ತಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ, ಈ ಚಿತ್ರ 2026ರಲ್ಲಿ ಬಿಡುಗಡೆ ಆಗುವ ಸಾಧ್ಯತೆ ಇದೆ. 'ದಿ ಕೇರಳ ಸ್ಟೋರಿ' ಚಿತ್ರದ ಮುಂದುವರಿದ ಭಾಗವನ್ನು ಈಗಾಗಲೇ ಕೇರಳದಲ್ಲಿ ಚಿತ್ರೀಕರಿಸಲಾಗಿದ್ದು, ವರದಿಗಳ ಪ್ರಕಾರ, ಈ ಭಾಗವು ಹೆಚ್ಚು ಗಂಭೀರ ಮತ್ತು ಕರಾಳ ಕಥೆಯನ್ನು ಒಳಗೊಂಡಿರುತ್ತದೆ.



# ಜೀವನದಲ್ಲಿ ಸುದೀಪ್ ಅವರಂತಹ ವ್ಯಕ್ತಿ ಸಿಕ್ಕಿದ್ದು ನನ್ನ ಪುಣ್ಯ ನವೀನ್ ಚಂದ್ರ

ನವೀನ್ ಚಂದ್ರ, 'ಮಾರ್ಕ್' ಚಿತ್ರದ ಮೂಲಕ ಕನ್ನಡಕ್ಕೆ ಪರಿಚಿತರಾಗಿ, ಸುದೀಪ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಹುಬ್ಬಳ್ಳಿ ಕಾರ್ಯಕ್ರಮಕ್ಕೆ ಸುದೀಪ್ ನೀಡಿದ ಸಹಾಯವನ್ನು ಸ್ಮರಿಸಿದ್ದಾರೆ. ಬಳ್ಳಾರಿಯಲ್ಲಿ ಹುಟ್ಟಿ ಬೆಳೆದ ನವೀನ್, ಸ್ಪಷ್ಟ ಕನ್ನಡ ಮಾತನಾಡುತ್ತಾರೆ. ತೆಲುಗು-ತಮಿಳು ಚಿತ್ರರಂಗದಲ್ಲಿ ಹೆಚ್ಚು ಸಕ್ರಿಯರಾಗಿದ್ದರೂ, ಕನ್ನಡದೊಂದಿಗಿನ ತಮ್ಮ ನಂಟನ್ನು ಮರೆತಿಲ್ಲ ಎಂದು ಹೇಳಿದ್ದಾರೆ. ನವೀನ್ ಚಂದ್ರ ಬಗ್ಗೆ ಅನೇಕರಿಗೆ ತಿಳಿದಿದೆ. ಅವರು ತಮಿಳು ನಟ. ಅವರು ಕನ್ನಡ ಚಿತ್ರರಂಗಕ್ಕೂ ಪರಿಚಯ ಆಗಿದ್ದಾರೆ. ಇದಕ್ಕೆ ಕಾರಣ ಆಗಿದ್ದು 'ಮಾರ್ಕ್' ಸಿನಿಮಾ. ಈ ಸಿನಿಮಾದಲ್ಲಿ ವಿಲನ್ ಪಾತ್ರ ಮಾಡಿ ಅವರು ಜನಪ್ರಿಯತೆ ಪಡೆದರು. ಅವರು ಸ್ಪಷ್ಟ ಕನ್ನಡ ಮಾತನಾಡುತ್ತಾರೆ. ಅವರು ಈಗ ಒಂದು ವಿಷಯ ರಿವೀಲ್ ಮಾಡಿದ್ದಾರೆ. ಸುದೀಪ್ ಜೊತೆಗಿನ ಒಡನಾಟದ ಬಗ್ಗೆ ಮಾತನಾಡಿದ್ದಾರೆ.

'ಮಾರ್ಕ್' ಚಿತ್ರದ ಹುಬ್ಬಳ್ಳಿ ಈವೆಂಟ್‌ನಲ್ಲಿ ನವೀನ್ ಚಂದ್ರ ಮಾತನಾಡಿದ್ದರು. ಅವರು ಒಂದು ವಿಷಯ ಹಂಚಿಕೊಂಡರು. ಅದು ಈಗ ವೈರಲ್ ಆಗಿದೆ.

'ಮಧ್ಯಾಹ್ನ 2 ಗಂಟೆವರೆಗೆ ಚೆನ್ನೈನಲ್ಲಿದ್ದೆ. ಹುಬ್ಬಳ್ಳಿಗೆ ಬರಬೇಕು, ಹೇಗೆ ಬರಬೇಕು ಗೊತ್ತಾಗಲಿಲ್ಲ. ರಸ್ತೆ ಮೂಲಕವಂತೂ ಬರೋಕೆ ಸಾಧ್ಯವೇ ಇರಲಿಲ್ಲ. ಒಂದು ಕಾಲ್ ಬಂತು. ನೀವು ಇಲ್ಲಿ ಬರಬೇಕು ಎಂದರು ಸುದೀಪ್. ಸುದೀಪ್ ಸರ್ ನಿಮ್ಮ ಮನಸ್ಸು ದೊಡ್ಡದು. ನಾಲ್ಕೂವರೆಗೆ ಚೆನ್ನೈ ಬಿಟ್ಟೆ, 8 ಗಂಟೆಗೆ ಇಲ್ಲಿದ್ದೇನೆ. ಇದಕ್ಕೆ ಸುದೀಪ್ ಕಾರಣ' ಎಂದರು ನವೀನ್ ಚಂದ್ರ.

'ನಮ್ಮ ಇಡೀ ಕುಟುಂಬ ಅವರಿಗೆ ದೊಡ್ಡ ಅಭಿಮಾನಿ. ಅವರಿಗೆ ಯಾರು ತಾನೇ ಅಭಿಮಾನಿ ಅಲ್ಲ ಹೇಳಿ. ಅವರದ್ದು ಏಂಜಲ್ ರೀತಿಯ ಮನಸ್ಸು. ಅವರು ನಮಗೆ ಸಿಕ್ಕಿದ್ದು, ಪರಿಚಯ ಆಗಿದ್ದಕ್ಕೆ ನಾನು ಲಕ್ಕಿ' ಎಂದು ಅವರು ಹೇಳಿದ್ದಾರೆ. ನವೀನ್ ಚಂದ್ರ ಅವರು ಸ್ವಚ್ಛವಾಗಿ ಕನ್ನಡ ಮಾತನಾಡ ಬಲ್ಲರು. ಅವರು ಹುಟ್ಟಿ ಬೆಳೆದಿದ್ದು ಬಳ್ಳಾರಿಯಲ್ಲಿ. ಹೀಗಾಗಿ, ಕನ್ನಡದಲ್ಲೇ ಅವರು ಓದಿದ್ದು. ಆ ಬಳಿಕ ತೆಲುಗು, ತಮಿಳು ಸಿನಿಮಾಗಳಿಂದ ಆಫರ್ ಬಂದು ಆ ಕಡೆ ಹೆಚ್ಚು ಸೆಟಲ್ ಆದರು. ಇದರಿಂದ ಅವರಿಗೆ ಕನ್ನಡದ ಟಚ್ ಸ್ವಲ್ಪ ತಪ್ಪಿದೆ. ಆದರೂ ಅವರು ಭಾಷೆಯನ್ನು ಮರೆತಿಲ್ಲ. 'ಮಾರ್ಕ್' ಸಿನಿಮಾದಲ್ಲಿ ಅವರು ವಿಲನ್ ಪಾತ್ರ ಮಾಡಿದ್ದಾರೆ.



# ನಟನೆ ಆರಂಭಿಸಿದ ಎಆರ್ ರೆಹಮಾನ್

ಎಆರ್ ರೆಹಮಾನ್ , ಭಾರತ ಚಿತ್ರರಂಗದ ಲೆಜೆಂಡರಿ ಸಂಗೀತ ನಿರ್ದೇಶಕ. ಕಳೆದ ಕೆಲವು ದಶಕಗಳಿಂದಲೂ ಸಂಗೀತ ಕ್ಷೇತ್ರದಲ್ಲಿ ನಂಬರ್ 1 ಸ್ಥಾನದಲ್ಲಿದ್ದಾರೆ ಎಆರ್ ರೆಹಮಾನ್. ಹಲವಾರು ಹೊಸ ಸಂಗೀತ ನಿರ್ದೇಶಕರು ಬಂದು ಹೋದರೂ ಸಹ ರೆಹಮಾನ್ ಸಂಗೀತ ಇಂದಿಗೂ ಸೂಪರ್ ಹಿಟ್ ಆಗುತ್ತಿದೆ. ಭಾರತದ ಸಿನಿಮಾಗಳು ಮಾತ್ರವೇ ಅಲ್ಲದೆ ಹಾಲಿವುಡ್‌ನಲ್ಲೂ ಬೇಡಿಕೆ ಹೊಂದಿದ್ದಾರೆ ಎಆರ್ ರೆಹಮಾನ್. ಸಂಗೀತ ಕ್ಷೇತ್ರದಲ್ಲಿ ಬಹಳ ಬ್ಯುಸಿ ಆಗಿರುವ ಹೊತ್ತಿನಲ್ಲಿಯೇ ರೆಹಮಾನ್, ನಟನೆಯನ್ನೂ ಆರಂಭಿಸಿದ್ದಾರೆ.

ರೆಹಮಾನ್ ಅವರು ಈ ಹಿಂದೆ ಕೆಲವು ಆಲ್ಬಂ ಹಾಡುಗಳಲ್ಲಿ ಕಾಣಿಸಿಕೊಂಡಿದ್ದಾರೆ, ಕೆಲವು ಹಾಡುಗಳಲ್ಲಿ ಎಂಟ್ರಿ ಕೊಟ್ಟಿದ್ದಾರೆ. ಇತ್ತೀಚೆಗೆ ಕೆಲವು ಯೂಟ್ಯೂಬ್ ವಿಡಿಯೋಗಳಲ್ಲಿಯೂ ಸಹ ಕಾಣಿಸಿಕೊಂಡಿದ್ದಾರೆ ಆದರೆ ಎಂದೂ ಸಹ ಪೂರ್ಣ ಪ್ರಮಾಣದ ಪಾತ್ರದಲ್ಲಿ ನಟಿಸಿದ್ದೇ ಇಲ್ಲ. ಆದರೆ ಇದೀಗ ಎಆರ್ ರೆಹಮಾನ್ ಅವರು ಮೊದಲ ಬಾರಿಗೆ ಸಿನಿಮಾ ಪಾತ್ರವೊಂದರಲ್ಲಿ ನಟಿಸಲು ಮುಂದಾಗಿದ್ದಾರೆ. ರೆಹಮಾನ್ ಅವರ ಈ ಸಾಹಸ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ.

ಸಾಹಸ ಅಭಿಮಾನಿಗಳಲ್ಲಿ ಕುತೂಹಲ

ಎಆರ್ ರೆಹಮಾನ್ ಅವರು ತಮಿಳಿನ 'ಮೂನ್ ವಾಕ್' ಹೆಸರಿನ ಸಿನಿಮಾದ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. 'ಮೂನ್ ವಾಕ್' ಸಿನಿಮಾದ ನಾಯಕ ಖ್ಯಾತ ನಟ ಪ್ರಭುದೇವ. ಎಆರ್ ರೆಹಮಾನ್ ಮತ್ತು ಪ್ರಭುದೇವ ಬಹಳ ಒಳ್ಳೆಯ ಗೆಳೆಯರು. ಇದೇ ಸಲುಗೆಯ ಕಾರಣಕ್ಕೆ ರೆಹಮಾನ್ ಅವರು ಮೊದಲ ಬಾರಿಗೆ ಸಿನಿಮಾನಲ್ಲಿ ಪಾತ್ರವೊಂದರಲ್ಲಿ ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ. ಮನೋಜ್ ಎನ್‌ಎಸ್ ಎಂಬುವರು ಈ ಸಿನಿಮಾ ನಿರ್ದೇಶನ ಮಾಡುತ್ತಿದ್ದು, ಬಿಹೈಂದ್ ವೂಡ್ಸ್ ನಿರ್ಮಾಣ ಸಂಸ್ಥೆ ಸಿನಿಮಾದ ನಿರ್ಮಾಣ ಮಾಡಲಿದೆ.

ಸಿನಿ ವಾಹಿನಿ

# ಸಿಹಿ ಸುದ್ದಿ ಹಂಚಿಕೊಂಡ 'ಸು ಫ್ರಮ್ ಸೋ' ಭಾನು



'ಸು ಫ್ರಮ್ ಸೋ' ಸಿನಿಮಾದಲ್ಲಿ ಭಾನು ಹೆಸರಿನ ಪಾತ್ರ ಮಾಡಿ ಗಮನ ಸೆಳೆದವರು ನಟಿ ಸಂಧ್ಯಾ ಅರಕೆರೆ. ಈ ಚಿತ್ರ ಗಮನ ಸೆಳೆಯಿತು. ಅವರ ಪಾತ್ರವೂ ಪ್ರಶಂಸೆ ಪಡೆಯಿತು. ಈಗ ಅವರು ಸಿಹಿ ಸುದ್ದಿ ಒಂದನ್ನು ಹಂಚಿಕೊಂಡಿದ್ದಾರೆ. 'ಸು ಫ್ರಮ್ ಸೋ' ಸಿನಿಮಾದಲ್ಲಿ ಭಾನು ಪಾತ್ರ ಮಾಡಿದ ಸಂಧ್ಯಾ ಅರಕೆರೆ ಬಾಳಲ್ಲಿ ಈಗ ಖುಷಿಯ ಕ್ಷಣ ಬಂದಿದೆ. ಅವರು ಶೀಘ್ರವೇ ತಾಯಿ ಆಗುತ್ತಿದ್ದಾರೆ. ಬೇಬಿ ಬಂಪ್ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡು ಗಮನ ಸೆಳೆದಿದ್ದಾರೆ. ತಾಯಿ ಆಗುತ್ತಿರುವ ಸಿಹಿ ಸುದ್ದಿಯನ್ನು ಅಭಿಮಾನಿಗಳ ಜೊತೆ ಹಂಚಿಕೊಂಡಿದ್ದಾರೆ. 'ಸು ಫ್ರಮ್ ಸೋ' ಚಿತ್ರದಲ್ಲಿ ಭಾನು ಆಗಿ ಎಲ್ಲರನ್ನೂ ಆವರಿಸಿಕೊಂಡಿದ್ದರು ಸಂಧ್ಯಾ. ಅವರ ಬಾಳಲ್ಲಿ 2025 ವಿಶೇಷವಾಗಿತ್ತು. ಸಿನಿಮಾ 100 ಕೋಟಿ ರೂಪಾಯಿ ಕ್ಲಬ್ ಸೇರಿದ್ದು ಒಂದುಕಡೆಯಾದರೆ, ಅವರು ತಾಯಿ ಆಗುತ್ತಿರುವ ಖುಷಿ ಮತ್ತೊಂದು ಕಡೆ. ಕಳೆದ ತಿಂಗಳು ಸಂಧ್ಯಾ ಅರಕೆರೆ ಅವರ ಸೀಮಂತ ಶಾಸ್ತ್ರ ನೆರವೇರಿದೆ. ಅವರ ಕುಟುಂಬದವರು ಇದರಲ್ಲಿ ಭಾಗಿ ಆಗಿದ್ದರು. ಅವರಿಗೆ ಎಲ್ಲರೂ ಅಭಿನಂದನೆ ತಿಳಿಸುತ್ತಾ ಇದ್ದಾರೆ. ಶೀಘ್ರವೇ ಅವರ ಕಡೆಯಿಂದ ಸಿಹಿ ಸುದ್ದಿ ಸಿಗಲಿದೆ. ಸಂಧ್ಯಾ ಅವರು ರಂಗಭೂಮಿ ಕಲಾವಿದೆ. ಹಲವು ನಾಟಕಗಳಲ್ಲಿ ಅವರು ನಟಿಸಿದ್ದಾರೆ. ಸಂಧ್ಯಾ ಸಿನಿಮಾಗಳಲ್ಲಿ ನಟಿಸಿದ್ದು ಕಡಿಮೆ. 'ಸು ಫ್ರಮ್ ಸೋ' ಬಳಿಕ ಅವರಿಗೆ ಹಲವು ಆಫರ್‌ಗಳು ಬರುತ್ತಿವೆ. ಎಲ್ಲಾ ಚಿತ್ರಗಳನ್ನು ಅವರು ಒಪ್ಪಿ ನಟಿಸುತ್ತಿಲ್ಲ. ಸಂಧ್ಯಾ ಅವರು ಸೋಶಿಯಲ್ ಮೀಡಿಯಾದಲ್ಲಿ ಆಯಕ್ಟೀವ್ ಆಗಿದ್ದಾರೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಅರಕೆರೆ ಅವರ ಊರು. ನೀನಾಸಂ ಅಲ್ಲಿವರು ನಟನೆ ಕಲಿತಿದ್ದಾರೆ. ಆ ಬಳಿಕ ಬಣ್ಣದ ಲೋಕ ಅವರನ್ನು ಸೆಳೆಯಿತು.

# ಟಿ20 ವಿಶ್ವಕಪ್‌ಗೆ 6 ತಂಡಗಳು ಪ್ರಕಟ

2026ರ ಟಿ20 ವಿಶ್ವಕಪ್‌ಗೆ ಭಾರತ ಮತ್ತು ಶ್ರೀಲಂಕಾ ಆತಿಥ್ಯ ವಹಿಸಲಿವೆ. ಫೆಬ್ರವರಿ 7 ರಿಂದ ಮಾರ್ಚ್ 8 ರವರೆಗೆ 20 ತಂಡಗಳು ಸ್ಪರ್ಧಿಸಲಿವೆ. ಇದುವರೆಗೆ 6 ತಂಡಗಳ ವಿವರಗಳನ್ನು ಪ್ರಕಟಿಸಲಾಗಿದೆ. ಭಾರತ, ಆಸ್ಟ್ರೇಲಿಯಾ, ಶ್ರೀಲಂಕಾ, ಓಮನ್, ಇಂಗ್ಲೆಂಡ್, ಅಫ್ಘಾನಿಸ್ತಾನ ತಂಡಗಳು ಸೇರಿವೆ. ಸೂರ್ಯಕುಮಾರ್ ಯಾದವ್, ಮಿಚೆಲ್ ಮಾರ್ಷ್, ರಶೀದ್ ಖಾನ್ ಸೇರಿದಂತೆ ಪ್ರಮುಖ ಆಟಗಾರರು ಈ ತಂಡಗಳ ಭಾಗವಾಗಿದ್ದಾರೆ. 2026 ರ ಟಿ20 ವಿಶ್ವಕಪ್‌ಗೆ ಭಾರತ ಹಾಗೂ ಶ್ರೀಲಂಕಾ ಆತಿಥ್ಯ ನೀಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೆ. 20 ತಂಡಗಳ ನಡುವೆ ನಡೆಯಲಿರುವ ಈ ಮಿನಿ ವಿಶ್ವಸಮರ ಫೆಬ್ರವರಿ 7 ರಿಂದ ಆರಂಭವಾಗಿ, ಮಾರ್ಚ್ 8 ರಂದು ನಡೆಯಲಿರುವ ಫೈನಲ್ ಪಂದ್ಯದೊಂದಿಗೆ ಅಂತ್ಯವಾಗಲಿದೆ. ಈ ಪಂದ್ಯಾವಳಿಗಾಗಿ ಇದುವರೆಗೆ 6 ತಂಡಗಳು ಪ್ರಕಟವಾಗಿದ್ದು, ಆ 6 ತಂಡಗಳ ವಿವರ ಇಲ್ಲಿದೆ.

**ಭಾರತ:** ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಶಿವಂ ದುಬೆ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ಅರ್ಷದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ, ಕುಲ್ದೀಪ್ ಯಾದವ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ರಿಂಕು ಸಿಂಗ್.



**ಆಸ್ಟ್ರೇಲಿಯಾ:** ಮಿಚೆಲ್ ಮಾರ್ಷ್ (ನಾಯಕ), ಕ್ಸೇವಿಯರ್ ಬಾರ್ಟ್ಲೆಟ್, ಕೂಪರ್ ಕಾನೊಲಿ, ಪ್ಯಾಟ್ ಕಮ್ಮಿನ್ಸ್, ಟಿಮ್ ಡೇವಿಡ್, ಕ್ಯಾಮರೂನ್ ಗ್ರೀನ್, ನಾಥನ್ ಎಲ್ಲಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮ್ಯಾಥ್ಯೂ ಕುಹ್ನೆಮನ್, ಗ್ಲೆನ್ ಮ್ಯಾಕ್ಸ್‌ವೆಲ್, ಮ್ಯಾಥ್ಯೂ ಶಾರ್ಟ್, ಮಾರ್ಕಸ್ ಸ್ಟೊಯಿನಿಸ್, ಆಡಮ್ ಜಂಪಾ.

**ಶ್ರೀಲಂಕಾ ತಾತ್ಕಾಲಿಕ ತಂಡ:** ದಸುನ್ ಶನಕ (ನಾಯಕ), ಪಾತುಮ್ ನಿಸ್ಸಾಂಕ, ಕುಸಲ್ ಮೆಂಡಿಸ್, ಕಮಿಲ್ ಮಿಶ್ರಾ, ಕುಸಲ್ ಪೆರೇರಾ, ಧನಂಜಯ ಡಿ ಸಿಲ್ವ, ನಿರೋಶನ್ ಡಿಕ್ವೆಲ್ಲಾ, ಜನಿತ್ ಲಿಯಾನಗೆ, ಚರಿತ್ ಅಸಲಂಕ, ಕಮಿಂದು ಮೆಂಡಿಸ್, ಪವನ್ ರಥನಾಯಕ, ಸಹನ್ ಅರ್ಚಿಗೆ, ವನಿಂದು ಹಸರಂಗ, ದುನಿತ್ ವೆಲ್ಲಲಗೆ, ಮಿಲನ್ ರಥನಾಯಕ, ನುವಾನ್ ತುಷಾರ, ಈಶಾನ್ ಮಾಲಿಂಗ, ದುಷ್ಮಂತ ಚಮೀರ, ಪ್ರಮೋದ್ ಮದುಶನ್, ಮಥೀಶ ಪತಿರಾನ, ದಿಲ್ಶನ್ ಮಧುಶಂಕ, ಮಹೇಶ್ ತೀಕ್ಷ್ಣ, ದುಶನ್ ಹೇಮಂತ, ವಿಜಯಕಾಂತ್ ವ್ಯಾಸಕಾಂತ್, ತ್ರವೀಣ್ ಮ್ಯಾಥ್ಯೂ.

**ಒಮಾನ್ ತಂಡ:** ಜತೀಂದರ್ ಸಿಂಗ್ (ನಾಯಕ), ವಿನಾಯಕ್ ಶುಕ್ಲಾ, ಮೊಹಮ್ಮದ್ ನದೀಮ್, ಶಕೀಲ್ ಅಹ್ಮದ್, ಹಮ್ಮದ್ ಮಿರ್ಜಾ, ವಾಸಿಂ ಅಲಿ, ಕರಣ್ ಸೋನಾವಾಲೆ, ಶಾ ಫೈಸಲ್, ನದೀಮ್ ಖಾನ್, ಸುಫ್ಯಾನ್ ಮೆಹಮೂದ್, ಜೇ ಒಡೆದ್ರಾ, ಶಫೀಕ್ ಜಾನ್, ಆಶಿಶ್ ಒಡೆದಾರ, ಜಿತೇನ್ ರಾಮನಂದಿ, ಹಸ್ನೈನ್ ಅಲಿ.

**ಇಂಗ್ಲೆಂಡ್ ತಂಡ:** ಹ್ಯಾರಿ ಬ್ರೂಕ್ (ನಾಯಕ), ರೆಹಾನ್ ಅಹ್ಮದ್, ಜೋಫ್ರಾ ಆರ್ಚರ್, ಟಾಮ್ ಬ್ಯಾಂಟನ್, ಜಾಕೋಬ್ ಬೆಥೆಲ್, ಜೋಸ್ ಬಟ್ಲರ್, ಸ್ಯಾಮ್ ಕರನ್, ಲಿಯಾಮ್ ಡಾಸನ್, ಬೆನ್ ಡಕೆಟ್, ವಿಲ್ ಜ್ಯಾಕ್ಸ್, ಜೇಮೀ ಓವರ್ಟನ್, ಆದಿಲ್ ರಶೀದ್, ಫಿಲ್ ಸಾಲ್ಟ್, ಜೋಶ್ ಟಂಗ್, ಲ್ಯೂಕ್ ವುಡ್.

**ಅಫ್ಘಾನಿಸ್ತಾನ ತಂಡ:** ರಶೀದ್ ಖಾನ್ (ನಾಯಕ), ನೂರ್ ಅಹ್ಮದ್, ಅಬ್ದುಲ್ಲಾ ಅಹ್ಮದ್ಜಾಯ್, ಸೇದಿಕುಲ್ಲಾ ಅಟಲ್, ಫಝುಲ್ಲಹ್ ಫಾರೂಕಿ, ರಹಮಾನುಲ್ಲಾ ಗುರ್ಬಾಜ್, ನವೀನ್ ಉಲ್ ಹಕ್, ಮೊಹಮ್ಮದ್ ಇಶಾಕ್, ಶಾಹಿದುಲ್ಲಾ ಕಮಾಲ್, ಮೊಹಮ್ಮದ್ ನಬಿ, ಗುಲ್ಬದಿನ್ ನೈಬ್, ಅಜ್ಮತುಲ್ಲಾ ಒಮರ್ಜಾಯ್, ಮುಜೀಬ್ ಉರ್ ರಹಮಾನ್, ದರ್ವಿಶ್ ರಸೂಲಿ, ಇಬ್ರಾಹಿಂ ಜದ್ರಾನ್.

**ಮೀಸಲು ಆಟಗಾರರು:** ಎಎ ಗಜನ್ಫರ್, ಇಜಾಜ್ ಅಹ್ಮದ್ಝೈ ಮತ್ತು ಜಿಯಾ ಉರ್ ರೆಹಮಾನ್ ಷರೀಫಿ.

# ವರ್ಷದ ಕೊನೆಯ ದಿನ ಸಿಡಿದವು ಬರೋಬ್ಬರಿ 13 ಶತಕಗಳು

ವಿಜಯ್ ಹಜಾರೆ ಟ್ರೋಫಿಯ ನಾಲ್ಕನೇ ಸುತ್ತಿನಲ್ಲಿ ಬ್ಯಾಟ್ಸ್‌ಮನ್‌ಗಳ ಅಬ್ಬರ ಮುಂದುವರಿದಿದ್ದು, 13 ಭರ್ಜರಿ ಶತಕಗಳು ದಾಖಲಾಗಿವೆ. ಸರ್ಫರಾಜ್ ಖಾನ್ 157 ರನ್, ದೇವದತ್ ಪಡಿಕ್ಕಲ್ 113 ರನ್ (ನಾಲ್ಕು ಪಂದ್ಯಗಳಲ್ಲಿ 3ನೇ ಶತಕ), ರುತುರಾಜ್ ಗಾಯಕ್ವಾಡ್ 124, ಕೃನಾಲ್ ಪಾಂಡ್ಯ 109 ರನ್ ಗಳಿಸಿ ಮಿಂಚಿದ್ದಾರೆ. ಮಯಾಂಕ್ ಅಗರ್ವಾಲ್ ಸಹ ಶತಕ ಬಾರಿಸಿ ಗಮನ ಸೆಳೆದಿದ್ದಾರೆ. ದೇಶಿ ಟೂರ್ನಿ ವಿಜಯ್ ಹಜಾರೆ ಟ್ರೋಫಿಯಲ್ಲಿ ಬ್ಯಾಟ್ಸ್‌ಮನ್‌ಗಳ ಅಬ್ಬರ ಮುಂದುವರೆದಿದೆ. ಟೂರ್ನಿಯ ಮೊದಲ ಪಂದ್ಯದಿಂದಲೂ ಶತಕಗಳ ಸರಮಾಲೆ ಸೃಷ್ಟಿಯಾಗಿದೆ. ಇದೀಗ ಈ ಟೂರ್ನಿಯ ನಾಲ್ಕನೇ ಸುತ್ತಿನಲ್ಲೂ ಬ್ಯಾಟ್ಸ್‌ಮನ್‌ಗಳಿಂದ ಸ್ಫೋಟಕ ಶತಕಗಳು ಸಿಡಿದಿವೆ. ಡಿಸೆಂಬರ್ 31 ರಂದು ನಡೆದ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಒಟ್ಟು 13 ಬ್ಯಾಟ್ಸ್‌ಮನ್‌ಗಳು ಶತಕಗಳಬ ಬಾರಿಸಿದ್ದಾರೆ. ಇದರಲ್ಲಿ ಇಬ್ಬರು ಆಟಗಾರರು 150 ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.

ವಿಜಯ್ ಹಜಾರೆ ಟ್ರೋಫಿಯ ನಾಲ್ಕನೇ ಸುತ್ತಿನಲ್ಲಿ ಮುಂಬೈ ಪರ ಆಡುತ್ತಿರುವ ಅನುಭವಿ ಬ್ಯಾಟ್ಸ್‌ಮನ್ ಸರ್ಫರಾಜ್ ಖಾನ್ ಗೋವಾ ವಿರುದ್ಧ 75 ಎಸೆತಗಳಲ್ಲಿ 157 ರನ್ ಗಳಿಸುವ ಮೂಲಕ ಅತ್ಯಧಿಕ ಇನ್ನಿಂಗ್ಸ್ ಆಡಿದರೆ, ಛತ್ತೀಸ್‌ಗಢದ ವಿಕಲ್ಪ್ ತಿವಾರಿ ಕೂಡ ಸಿಕ್ಕಿಂ ವಿರುದ್ಧ 112 ರನ್ ಬಾರಿಸಿದರು.

ರುತುರಾಜ್ ಗಾಯಕ್ವಾಡ್ ಮತ್ತು ಕೃನಾಲ್ ಪಾಂಡ್ಯ ಕೂಡ ಶತಕ ಸಿಡಿಸಿದರು. ಉತ್ತರಾಖಂಡ್ ವಿರುದ್ಧ ಗಾಯಕ್ವಾಡ್ 124 ರನ್ ಗಳಿಸುವ ಮೂಲಕ ತಂಡವನ್ನು ಗೆಲುವಿನತ್ತ ಮುನ್ನಡೆಸಿದರೆ, ಹೈದರಾಬಾದ್ ವಿರುದ್ಧ ಕೃನಾಲ್ ಪಾಂಡ್ಯ 63 ಎಸೆತಗಳಲ್ಲಿ ಅಜೇಯ 109 ರನ್ ಬಾರಿಸಿದರು. ಹರಿಯಾಣದ ಬ್ಯಾಟ್ಸ್‌ಮನ್ ಅಂಕಿತ್ ಕುಮಾರ್ 123 ಎಸೆತಗಳಲ್ಲಿ ಅಜೇಯ 144 ರನ್ ಗಳಿಸಿದರೆ, ಜಾರ್ಖಂಡ್‌ನ ಉತ್ಕರ್ಷ್ ಸಿಂಗ್ ತಮಿಳುನಾಡು ವಿರುದ್ಧ ಅಜೇಯ 123 ರನ್ ಗಳಿಸಿದರು. ವಿಜಯ್ ಹಜಾರೆ ಟ್ರೋಫಿಯಲ್ಲಿ ದೇವದತ್ ಪಡಿಕ್ಕಲ್ ಅವರ ಅದ್ಭುತ ಪ್ರದರ್ಶನ ಮುಂದುವರೆದಿದ್ದು, ಈ ಎಡಗೈ ಬ್ಯಾಟ್ಸ್‌ಮನ್ ಪುದುಚೇರಿ ವಿರುದ್ಧ 116 ಎಸೆತಗಳಲ್ಲಿ 113 ರನ್ ಗಳಿಸಿದರು, ಇದು ನಾಲ್ಕು ಪಂದ್ಯಗಳಲ್ಲಿ ಅವರ ಮೂರನೇ ಶತಕವಾಗಿದೆ. ಮಯಾಂಕ್ ಅಗರ್ವಾಲ್ ಕೂಡ 132 ರನ್ ಬಾರಿಸಿದರು. ಉತ್ತರ ಪ್ರದೇಶದ ಬ್ಯಾಟ್ಸ್‌ಮನ್ ಆರ್ಯನ್ ಜುಯಾಲ್ ಅಸ್ಸಾಂ ವಿರುದ್ಧ ಅಜೇಯ 150 ರನ್ ಸಿಡಿಸಿದರು.



# ಟಿ20 ವಿಶ್ವಕಪ್‌ಗೆ ಬಲಿಷ್ಠ ಆಸ್ಟ್ರೇಲಿಯಾ



2026ರ ಟಿ20 ವಿಶ್ವಕಪ್‌ಗಾಗಿ ಕ್ರಿಕೆಟ್ ಆಸ್ಟ್ರೇಲಿಯಾ ತನ್ನ ತಂಡವನ್ನು ಪ್ರಕಟಿಸಿದೆ. ಮಿಚೆಲ್ ಮಾರ್ಷ್ ನಾಯಕತ್ವದಲ್ಲಿ 15 ಸದಸ್ಯರ ತಂಡವನ್ನು ಆಯ್ಕೆ ಮಾಡಲಾಗಿದ್ದು, ಮಿಚೆಲ್ ಓವನ್ ಅವರನ್ನು ಕೈಬಿಟ್ಟಿರುವುದು ಅಚ್ಚರಿ ಮೂಡಿಸಿದೆ. ಕೂಪರ್ ಕೊನೊಲಿ ಹಾಗೂ ಹಲವು ಹೊಸ ಮುಖಗಳಿಗೆ ಅವಕಾಶ ದೊರೆತಿದೆ. ಅನುಭವಿ ಆಟಗಾರರಾದ ಕಮ್ಮಿನ್ಸ್, ಮ್ಯಾಕ್ಸ್‌ವೆಲ್ ಮತ್ತು ಜಂಪಾ ತಂಡದ ಭಾಗವಾಗಿದ್ದಾರೆ.

ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ನಡೆಯಲಿರುವ 2026 ರ ಟಿ20 ವಿಶ್ವಕಪ್‌ಗಾಗಿ ಕ್ರಿಕೆಟ್ ಆಸ್ಟ್ರೇಲಿಯಾ ತನ್ನ ತಂಡವನ್ನು ಪ್ರಕಟಿಸಿದೆ. ನಾಯಕ ಮಿಚೆಲ್ ಮಾರ್ಷ್‌ನಾಯಕತ್ವದ 15 ಸದಸ್ಯರ ತಂಡವನ್ನು ಮಿನಿ ವಿಶ್ವಸಮರಕ್ಕೆ ಆಯ್ಕೆ ಮಾಡಲಾಗಿದೆ. ಆಶ್ಚರ್ಯಕರ ಸಂಗತಿಯೆಂದರೆ, 2025 ರಲ್ಲಿ ಟಿ20 ಮಾದರಿಯಲ್ಲಿ ಸಾಕಷ್ಟು ಸದ್ದು ಮಾಡಿದ್ದ ಆಟಗಾರನನ್ನು ಆಯ್ಕೆ ಮಂಡಳಿ ಕೈಬಿಟ್ಟಿದ್ದರೆ, ಇತ್ತ ಕಳೆದ 12 ಟಿ20 ಅಂತರರಾಷ್ಟ್ರೀಯ ಪಂದ್ಯಗಳಿಂದ ಹೊರಗುಳಿದ ಆಟಗಾರನನ್ನು ಆಯ್ಕೆ ಮಾಡುವ ಮೂಲಕ ಕ್ರಿಕೆಟ್ ಆಸ್ಟ್ರೇಲಿಯಾ ಮತ್ತೊಂದು ಅಚ್ಚರಿಯ ನಿರ್ಧಾರ ತೆಗೆದುಕೊಂಡಿದೆ.

2026 ರ ಟಿ20 ವಿಶ್ವಕಪ್‌ಗಾಗಿ ಆಸ್ಟ್ರೇಲಿಯಾ ತಂಡದ ಆಯ್ಕೆಯಲ್ಲಿ ಎರಡು ಅಚ್ಚರಿಯ ವಿಚಾರಗಳೆಂದರೆ ಮಿಚೆಲ್ ಓವನ್ ಅವರನ್ನು ಕೈಬಿಟ್ಟಿರುವುದು ಮತ್ತು ಕೂಪರ್ ಕಾನೊಲಿ ಅವರನ್ನು ತಂಡಕ್ಕೆ ಆಯ್ಕೆ ಮಾಡಿರುವುದು. ಕಳೆದ ವರ್ಷ ಬಿಬಿಎಲ್‌ನಲ್ಲಿ ಸಿಡ್ನಿ ಥಂಡರ್ ವಿರುದ್ಧ ಹೋಬಾರ್ಟ್ ಹರಿಕೇನ್ಸ್ ಪರ ಬಿರುಗಾಳಿಯ ಶತಕ ಗಳಿಸುವ ಮೂಲಕ ಮಿಚೆಲ್ ಓವನ್ ಎಲ್ಲರ ಗಮನ ಸೆಳೆದಿದ್ದರು. ಅವರು ಕೇವಲ 42 ಎಸೆತಗಳಲ್ಲಿ 11 ಸಿಕ್ಸರ್‌ಗಳ ಸಹಿತ 108 ರನ್ ಕಲೆಹಾಕಿದ್ದರು. ಆದಾಗ್ಯೂ ಅವರನ್ನು ಆಯ್ಕೆ ಮಾಡಲಾಗಿಲ್ಲ.

ಕಳೆದ 12 ಟಿ20 ಅಂತರರಾಷ್ಟ್ರೀಯ ಪಂದ್ಯಗಳಿಂದ ಆಸ್ಟ್ರೇಲಿಯಾ ತಂಡದ ಭಾಗವಾಗಿರದ ಕೂಪರ್ ಕೊನೊಲಿ ಅವರನ್ನು ಟಿ20 ವಿಶ್ವಕಪ್ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಕೂಪರ್ ಕೊನೊಲಿ ಜೊತೆಗೆ, ಮ್ಯಾಥ್ಯೂ ಶಾರ್ಟ್, ಮ್ಯಾಟ್ ಕುನ್ಹೆಮನ್ ಮತ್ತು ಕ್ಸೇವಿಯರ್ ಬಾರ್ಟ್ಲೆಟ್ ಅವರನ್ನು 2026 ರ ಟಿ20 ವಿಶ್ವಕಪ್ ತಂಡದಲ್ಲಿ ಸೇರಿಸಲಾಗಿದೆ.

ಈ ಎಲ್ಲಾ ಆಟಗಾರರಿಗೆ ಇದು ಮೊದಲ ಟಿ20 ವಿಶ್ವಕಪ್ ಆಗಲಿದೆ. ತಂಡವು ಪ್ಯಾಟ್ ಕಮ್ಮಿನ್ಸ್, ಮಾರ್ಕಸ್ ಸ್ಟೊಯಿನಿಸ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಜೋಶ್ ಹ್ಯಾಜಲ್‌ವುಡ್‌ರಂತಹ ಆಟಗಾರರ ಅನುಭವವನ್ನು ಹೊಂದಿದೆ. ಹಾಗೆಯೇ ಆಡಮ್ ಜಂಪಾ ಟಿ20 ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾದ ಸ್ಪಿನ್ ದಾಳಿಯನ್ನು ಮುನ್ನಡೆಸಲಿದ್ದಾರೆ.

# ವರ್ಷದ ಮೊದಲ ದಿನದಂದೇ ಸ್ಫೋಟಕ ಶತಕ ಸಿಡಿಸಿದ ಮಿಚೆಲ್



58 ಎಸೆತಗಳಲ್ಲಿ 102 ರನ್

ಆಸ್ಟ್ರೇಲಿಯಾದ ಟಿ20 ನಾಯಕ ಮಿಚೆಲ್ ಮಾರ್ಷ್ 2025-26ರ ಬಿಗ್ ಬ್ಯಾಷ್ ಲೀಗ್‌ನ 19 ನೇ ಪಂದ್ಯದಲ್ಲಿ ಹೋಬಾರ್ಟ್ ಹರಿಕೇನ್ಸ್ ವಿರುದ್ಧ ಸಿಡಿಲಬ್ಬರದ ಶತಕ ಸಿಡಿಸಿ ಮಿಂಚಿದ್ದಾರೆ. ಜನವರಿ 1, 2026 ರಂದು ಹೋಬಾರ್ಟ್‌ನ ಬೆಲ್ಲೆರಿವ್ ಓವಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪರ್ತ್ ಸ್ಕಾರ್ಚರ್ಸ್ 20 ಓವರ್‌ಗಳಲ್ಲಿ 3 ವಿಕೆಟ್‌ಗಳ ನಷ್ಟಕ್ಕೆ 229 ರನ್ ಗಳಿಸಿತು. 2026 ರ ಟಿ20 ವಿಶ್ವಕಪ್‌ಗೆ ಆಸ್ಟ್ರೇಲಿಯಾ ತಂಡವನ್ನು ಘೋಷಿಸಿದ ಕೆಲವು ಗಂಟೆಗಳ ನಂತರ ಮಿಚೆಲ್ ಮಾರ್ಷ್ ಈ ಇನ್ನಿಂಗ್ಸ್ ಆಡಿದರು. ಈ ಪಂದ್ಯದಲ್ಲಿ ಇನ್ನಿಂಗ್ಸ್ ಆರಂಭಿಸಿದ ಮಿಚೆಲ್ ಮಾರ್ಷ್ ಕೇವಲ 58 ಎಸೆತಗಳಲ್ಲಿ 102 ರನ್ ಗಳಿಸಿ ಸ್ಫೋಟಕ ಇನ್ನಿಂಗ್ಸ್ ಆಡಿದರು. ಅವರ ಇನ್ನಿಂಗ್ಸ್ 11 ಬೌಂಡರಿಗಳು ಮತ್ತು 5 ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಕೇವಲ 55 ಎಸೆತಗಳಲ್ಲಿ ತಮ್ಮ ಶತಕವನ್ನು ಪೂರೈಸಿದ ಮಾರ್ಷ್‌ಗೆ ಇದು ಬಿಬಿಎಲ್ ವೃತ್ತಿಜೀವನದ ಎರಡನೇ ಶತಕವಾಗಿದೆ. ಈ ಪಂದ್ಯದಲ್ಲಿ, ಮಿಚೆಲ್ ಮಾರ್ಷ್ ಹೊರತುಪಡಿಸಿ, ಆರನ್ ಹಾರ್ಡಿ ಕೂಡ ಪರ್ತ್ ಸ್ಕಾರ್ಚರ್ಸ್ ಪರ ಅದ್ಭುತ ಇನ್ನಿಂಗ್ಸ್ ಆಡಿದರು. ಆರನ್ ಹಾರ್ಡಿ 43 ಎಸೆತಗಳಲ್ಲಿ 94 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್ ಒಂಬತ್ತು ಬೌಂಡರಿಗಳು ಮತ್ತು ಐದು ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಈ ಗುರಿ ಬೆನ್ನಟ್ಟಿದ ಹೋಬಾರ್ಟ್ ಹರಿಕೇನ್ಸ್ 189 ರನ್ ಕಲೆಹಾಕಲಷ್ಟೇ ಶಕ್ತವಾಗಿ 40 ರನ್‌ಗಳಿಂದ ಸೋಲೊಪ್ಪಿಕೊಂಡಿತು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**